ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# Swabhimani Sahakari

Pages : 48 / 20₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ರಜತ ಮಹೋತ್ಸವ 2025

Volume - 22
Issue - 10
October - 2025



ಆ ದಿವ್ಯಶಕ್ತಿಯೇ
ಈ ಮಣ್ಣ ಹಣತೆಯಲಿ ಹರಿಯುತಿರೆ,
ಹಣತೆ ಕಿರಿದಾದರೇನು ?
ಬೆಳಕ ಬೀರುವ ಶಕ್ತಿ ಹಿರಿದಲ್ಲವೇನು ?
-ಜಿ.ಎಸ್. ಶಿವರುದ್ರಪ್ಪ

ಅಕ್ಟೋಬರ್ 20
ದೀಪಾವಳಿ

ಅಕ್ಟೋಬರ್ 22
ಬಲಿಪಾಡ್ಯಮಿ

ಅಕ್ಟೋಬರ್ 01
ಆಯುಧ ಪೂಜೆ



ಅಕ್ಟೋಬರ್ 02
ವಿಜಯದಶಮಿ



ಅಕ್ಟೋಬರ್ 02
ಮಹಾತ್ಮ ಗಾಂಧಿ ಹಾಗೂ
ಲಾಲ್ ಬಹದೂರ್ ಶಾಸ್ತ್ರೀ ಜಯಂತಿ



ಅಕ್ಟೋಬರ್ 07
ವಾಲ್ಮೀಕಿ ಜಯಂತಿ



ಸೌಹಾರ್ದ ಸಹಕಾರಿಗಳ ಸಂಖ್ಯೆ: 6579

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1740

ಸಂಪಾದಕೀಯ

# 3ಐ ಇಂಜಿನ್ (ಸೇರ್ಪಡೆ, ನಾವಿನ್ಯತೆ ಹಾಗೂ ಹೂಡಿಕೆ) ಮೂಲಕ ರಾಷ್ಟ್ರವನ್ನು 5 ಲಕ್ಷ ಟ್ರಲಿಯನ್ ಡಾಲರ್‌ನತ್ತ ಕೊಂಡೊಯ್ಯುವ ಬಗ್ಗೆ ತುಮಕೂರಿನಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನ : ಅರ್ಥಪೂರ್ಣ



ಜಿ. ನಂಜನಗೌಡ

"ರಾಜ್ಯದ ಎಲ್ಲ ಸಹಕಾರಿ ಬಂಧುಗಳಿಗೆ ವಾಲ್ಮೀಕಿ ಜಯಂತಿಯ, ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯ ಹಾಗೂ ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು. ಎಲ್ಲ ಸಹಕಾರಿಗಳ ಬಾಳು ಸುಖಮಯ ಹಾಗೂ ಸಂತೋಷಮಯವಾಗಿರಲಿ ಎಂದು ಸಂಯುಕ್ತ ಸಹಕಾರಿಯು ಹಾರೈಸುತ್ತದೆ."

ರಾಜ್ಯದ ಎಲ್ಲ ಸಹಕಾರಿ ಬಂಧುಗಳಿಗೆ ವಾಲ್ಮೀಕಿ ಜಯಂತಿಯ, ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯ ಹಾಗೂ ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು. ಎಲ್ಲ ಸಹಕಾರಿಗಳ ಬಾಳು ಸುಖಮಯ ಹಾಗೂ ಸಂತೋಷಮಯವಾಗಿರಲಿ ಎಂದು ಸಂಯುಕ್ತ ಸಹಕಾರಿಯು ಹಾರೈಸುತ್ತದೆ.

ವಿಶ್ವದಲ್ಲಿ ಸಹಕಾರ ಚಳುವಳಿಗೆ 180 ವರ್ಷದ ಇತಿಹಾಸ. ಈ ದೇಶದ ಚಳುವಳಿಗೆ 121 ವರ್ಷಗಳು ಕಳೆದಿವೆ. ಸಹಕಾರ ಚಳುವಳಿಯ ಮುಖ್ಯ ಉದ್ದೇಶ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಮಾಜದಲ್ಲಿ ಸಮಾನ ಅವಕಾಶಗಳು ಸಿಗಬೇಕು. ಸೋಶಿಯಲ್ ಇನ್‌ಕ್ಲೂಜನ್ (ಸಾಮಾಜಿಕ ಸೇರ್ಪಡೆ) ಆಗಬೇಕು ಹಾಗೂ ಸಮಾಜದಲ್ಲಿ ಸಮಾನತೆ ಸಾಧಿಸುವುದು ಸಹಕಾರ ಕ್ಷೇತ್ರದ ಧ್ಯೇಯವಾಗಿದೆ. ಸಹಕಾರ ಕ್ಷೇತ್ರದ ಸಾಧನೆ ಗಮನಾರ್ಹವಾಗಿದೆ. ದೇಶದಲ್ಲಿ 8 ಲಕ್ಷ ಸಹಕಾರಿ ಸಂಸ್ಥೆಗಳಿಂದ 32 ಕೋಟಿ ಸದಸ್ಯರನ್ನು ಹೊಂದಿರುವ ಈ ಕ್ಷೇತ್ರ ರೈತರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ. ನಮ್ಮ ದೇಶದ ಸಹಕಾರ ಚಳುವಳಿ ವಿಶ್ವದಲ್ಲಿಯೇ ದೊಡ್ಡದು. ನಮ್ಮ ದೇಶದಲ್ಲಿ ಅಮೂಲ್, ಇಫ್ಕೋದಂತಹ ಸಹಕಾರಿ ಸಂಸ್ಥೆಗಳು ನಮ್ಮ ಹೆಮ್ಮೆಯ ಸಂಸ್ಥೆಗಳು. ಈ ಸಹಕಾರ ಕ್ಷೇತ್ರ ಇನ್ನೂ ಹೆಚ್ಚು ಬೆಳೆಯಬೇಕು ಪ್ರಬಲವಾಗಿ ಬೆಳೆದು ಹೆಚ್ಚು ಜನರಿಗೆ ಪ್ರಯೋಜನವಾಗಬೇಕು ಎಂಬುದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಹಾಗೂ ಸಹಕಾರಿಗಳ ಅಪೇಕ್ಷೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ತುಮಕೂರ ವಿಶ್ವವಿದ್ಯಾಲಯದ ಜೊತೆಗೆ ಕೂಡಿ ರಾಷ್ಟ್ರೀಯ ಸಹಕಾರ ಸಮ್ಮೇಳನವನ್ನು ಆಯೋಜಿಸಿ 3ಐ ಆರ್ಥಿಕ ಸೇರ್ಪಡೆ (ಇನ್‌ಕ್ಲೂಜನ್) ನಾವಿನ್ಯತೆ (ಇನ್ನೋವೇಷನ್) ಹೂಡಿಕೆ (ಇನ್‌ವೆಸ್ಟ್‌ಮೆಂಟ್) ಗಳನ್ನು ಸಮ್ಮೇಳನದ ವಿಷಯವಾಗಿತ್ತು. ಈ ಸಮ್ಮೇಳನದಲ್ಲಿ ಹಲವಾರು ಸಹಕಾರಿ ಅಧ್ಯಯನ ವಿದ್ಯಾರ್ಥಿಗಳು ಪ್ರಸ್ತುತ ಪಡಿಸಿದ ವಿಷಯಗಳು ತುಂಬ ಉಪಯುಕ್ತವಾಗಿದ್ದವು. ಹಲವಾರು ಪರಿಣಿತರು, ವಿಶ್ವವಿದ್ಯಾಲಯದ ಉಪಕುಲಪತಿಗಳು ರಿಜಿಸ್ಟ್ರಾರರವರು, ಪ್ರಾಧ್ಯಾಪಕರುಗಳು ಪ್ರಸ್ತುತ ಪಡಿಸಿದ ವಿಷಯಗಳು ಸಹಕಾರ ಕ್ಷೇತ್ರದ ಮೂಲಕ ಭಾರತವನ್ನು ಹೇಗೆ ಬಲಪಡಿಸಲಾಗುತ್ತದೆ, ಹೇಗೆ ಭಾರತವನ್ನು 5 ಟ್ರಿಲಿಯನ್ ಡಾಲರ್‌ನತ್ತ ತೆಗೆದುಕೊಂಡು ಹೋಗಬಹುದು ಎಂದು ಪ್ರಸ್ತುತ ಪಡಿಸಿದ ವಿಷಯಗಳು ಅರ್ಥಪೂರ್ಣವಾಗಿತ್ತು.

ಈ ಮೂರು 3ಐ ಇಂಜಿನ್ ಅಂದರೆ ಸೇರ್ಪಡೆ, ನಾವಿನ್ಯತೆ ಹಾಗೂ ಹೂಡಿಕೆ ವಿಷಯಗಳಲ್ಲಿ ಸಹಕಾರ ಕ್ಷೇತ್ರದಲ್ಲಿ ಆಗಿರುವ ಪ್ರಗತಿಗಳ ವಿಶೇಷವಾಗಿ ಕೇಂದ್ರದಲ್ಲಿ ಸಹಕಾರ ಸಚಿವಾಲಯದ ಮೂಲಕ ಪ್ರಾರಂಭಿಸಲಾದ ಸಹಕಾರ ಕ್ಷೇತ್ರದ ದೇಶದ ಮೊಟ್ಟ ಮೊದಲ ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ ಸ್ಥಾಪನೆ, ರಾಷ್ಟ್ರೀಯ ಸಹಕಾರಿ ನೀತಿ, ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಕಂಪ್ಯೂಟರ್‌ಗಳನ್ನು ಒದಗಿಸಿರುವುದು, ಸಹಕಾರ ಕ್ಷೇತ್ರದಲ್ಲಿ ಮೂರು ವಿಭಿನ್ನ ರಾಷ್ಟ್ರೀಯ ಸಹಕಾರ ಸಂಘಗಳನ್ನು ಸ್ಥಾಪಿಸಿರುವ ಹಾಗೂ ಇನ್ನೂ ಅನೇಕ ಕಾರ್ಯಚಟುವಟಿಕೆಗಳ ಬಗ್ಗೆ ಸಾರ್ವಜನಿಕರಿಗೆ ಈ ಬಗ್ಗೆ ಮಾಹಿತಿ ನೀಡುವುದು ಜಾಗೃತಿ ಮೂಡಿಸುವುದು ಮತ್ತು ಯುವಕರು ಹಾಗೂ ಮಹಿಳೆಯರು ಹೆಚ್ಚಾಗಿ ಸಹಕಾರ ಕ್ಷೇತ್ರದಲ್ಲಿ ಪಾಲ್ಗೊಳ್ಳುವಂತಾಗಬೇಕು ಎಂಬುದು ಸಮ್ಮೇಳನದ ಪ್ರಮುಖ ಆಶಯ. ಈ ಆಶಯವನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಲು ರಾಜ್ಯದ ಸೌಹಾರ್ದ ಸಹಕಾರಿಗಳು ಸಂಕಲ್ಪ ಮಾಡಿ ಮೂರು ಇಂಜಿನ್ ಪ್ರಯಾಣ ಸೇರ್ಪಡೆ, ಹೊಸತನ ಹಾಗೂ ಹೂಡಿಕೆ ವಿಷಯಗಳಲ್ಲಿ ತಾವುಗಳು ತೊಡಗಿಸಿಕೊಂಡು ನಮ್ಮ ದೇಶ 5 ಟ್ರಿಲಿಯನ್ ಡಾಲರ್ ಆರ್ಥಿಕತೆಯತ್ತ ಸಾಗುವಲ್ಲಿ ಕೈಜೋಡಿಸೋಣ.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ

ಗೌರವ ಅಧ್ಯಕ್ಷರು

ಶ್ರೀ ಎ.ಆರ್. ಪ್ರಸನ್ನಕುಮಾರ

ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ

ಸಂಪಾದಕರು

ಶ್ರೀ ವಿ.ಜೆ. ಕಾರಕೂನ

ಸಂಚಾಲಕರು

ಶ್ರೀ ಮಹಾಂತಪ್ಪ ಎಸ್. ಎಮ್

ಸದಸ್ಯರು



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055

ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291

ಇ–ಮೇಲ್ : souharda@souharda.coop swabhimani@souharda.coop

ವೆಬ್‌ಸೈಟ್ : www.souharda.coop

**youtube :** https://www.youtube.com/@souharda471


## ಒಳಪುಟಗಳಲ್ಲಿ. . .


ಅಧ್ಯಕ್ಷರ ನುಡಿ........................................ 2

ಸಂಪಾದಕೀಯ........................................ 3

ಜ್ಞಾನ ಜ್ಯೋತಿ........................................ 4

ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–28

ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 29–41

**ಲೇಖನಗಳು :**

Co-operative Democracy - Election of Members of the Board in Cooperatives - Principle of "One Member One Vote" - An Analysis ........ 42–44

3–I ಎಂಜಿನ್: ಭಾರತದ $5 ಟ್ರಿಲಿಯನ್ ಆರ್ಥಿಕತೆಯತ್ತ ಓಡಿಸುವ ಇಂಧನ. (Innovation, Investment & Inclusion) ........................................ 45–48


# ಸಂಪಾದಕೀಯ

## 2025ರ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಗಳು : ಸಹಕಾರಿಗಳ ಅಭಿಪ್ರಾಯಗಳು.

ಕರ್ನಾಟಕ ರಾಜ್ಯ ಸರಕಾರ ರಾಜ್ಯದ ಎರಡೂ ಸಹಕಾರ ಕಾಯ್ದೆಗಳಿಗೆ ತಿದ್ದುಪಡಿ ಅಂಗೀಕರಿಸಿ ಸಹಕಾರ ಕ್ಷೇತ್ರ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರ. ಪ್ರಜಾಪ್ರಭುತ್ವದ ಆಡಳಿತ ನಡೆಸುವ ಬಗ್ಗೆ ಸಹಕಾರ ಕ್ಷೇತ್ರದಲ್ಲಿಯೇ ತರಬೇತಿ ಸಿಗುತ್ತದೆ. ಸಹಕಾರ ಸಂಘ ಸಂಸ್ಥೆಗಳಲ್ಲಿ ವಾರ್ಷಿಕ ಮಹಾ ಸಭೆಗೆ ಅಂತಿಮ ಅಧಿಕಾರ. ಸದಸ್ಯನೆ ಸಹಕಾರಿ ಸಂಸ್ಥೆಯ ಒಡೆಯ. ಇಲ್ಲಿ ನಡೆಯುವ ಎಲ್ಲ ಕಾರ್ಯಗಳೂ ಸದಸ್ಯನ ಹಿತ ರಕ್ಷಣೆಗಾಗಿ ನಡೆಯಬೇಕು. ಸಹಕಾರ ರಾಜ್ಯ ವಿಷಯವಾದಾಗಿನಿಂದ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಸಹಕಾರಿ ಕಾನೂನುಗಳನ್ನು ಮತ್ತು ನಿಯಮಗಳನ್ನು ರಚನೆ ಮಾಡಿವೆ. ಸದಸ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ದೃಷ್ಟಿಯಿಂದ ಸಹಕಾರಿ ಕಾನೂನುಗಳಲ್ಲಿ ಅಗತ್ಯ ತಿದ್ದುಪಡಿಮಾಡುತ್ತ ಬಂದಿದೆ. ಪ್ರತಿ ಬಾರಿ ಸರಕಾರ ತಿದ್ದುಪಡಿಮಾಡಿದ ಸಹಕಾರಿ ಕಾನೂನುಗಳನ್ನು ಜಾರಿ ಮಾಡುತ್ತ ಜನಸಾಮಾನ್ಯರ ಸಹಕಾರಿಗಳ ಆರ್ಥಿಕ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಂಡಿದೆ.

ಈ ಬಾರಿ 2025ರ ಸಹಕಾರಿ ಕಾಯ್ದೆಗಳ ತಿದ್ದುಪಡಿಗಳು ವೈಶಿಷ್ಠತೆಯಿಂದ ಕೂಡಿದೆ. ಸಹಕಾರಿಗಳಲ್ಲಿ ಕೆಲವು ಅಸಮಾಧಾನಕ್ಕೆ ಕಾರಣವೂ ಆಗಿದೆ. ಸಾಮಾಜಿಕ ನ್ಯಾಯ, ಸರ್ವರಿಗೂ ಸಮಪಾಲು ಎಂಬ ಮಹತ್ವದ ತತ್ವಗಳ ಅಡಿಯಲ್ಲಿ ಮಂಡಿಸಲಾದ ಈ ಸಹಕಾರಿ ತಿದ್ದುಪಡಿಗಳು ಸಹಕಾರಿಗಳು ಒಪ್ಪುವಂತಹ ತಳಹದಿಯಲ್ಲಿ ಅಂಗೀಕರಿಸಲಾಗಿಲ್ಲ. ವಿಧಾನ ಮಂಡಳಗಳಲ್ಲಿ ಈ ವಿಧೇಯಕದ ಬಗ್ಗೆ ಸಾಕಷ್ಟು ಚರ್ಚೆಗಳಾಗಿರುವುದು ಸಹಕಾರಿ ಕ್ಷೇತ್ರದ ಅಗತ್ಯತೆ ಹಾಗೂ ಅದರ ಕಾರ್ಯನಿರ್ವಹಣೆಯಲ್ಲಿ ಸಮಾಜದ ಕನಿಷ್ಟ ವರ್ಗದ ಜನರೂ ಸಕ್ರೀಯವಾಗಿ ಭಾಗವಹಿಸಬೇಕೇಂಬ ಕಳಕಳಿಯನ್ನು ಬಿಂಬಿಸುತ್ತದೆ. ನಮ್ಮ ರಾಜ್ಯದ ಸಹಕಾರಿ ಕ್ಷೇತ್ರಕ್ಕೆ 121 ವರ್ಷಗಳ ಸುದೀರ್ಘ ಇತಿಹಾಸವಿದೆ. ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಸರಕಾರ ಅನೇಕ ಬಾರಿ ಈ ಸಹಕಾರಿ ಕಾನೂನುಗಳನ್ನು ತಿದ್ದುಪಡಿ ಮಾಡುತ್ತ ಬಂದಿದೆ. ವಿಶೇಷವಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಠ ವರ್ಗದ ಜನರಿಗೆ, ಮಹಿಳೆಯರಿಗೆ ಮತ್ತು ಹಿಂದುಳಿದ ವರ್ಗದರಿಗೆ ಈ ಕ್ಷೇತ್ರದಲ್ಲಿ ಪಾಲ್ಗೋಳ್ಳಲು ಅವಕಾಶವಾಗುವಂತೆ ಕಾನೂನುಗಳಲ್ಲಿ ಅವಕಾಶ ಮಾಡಿರುವುದನ್ನು ಎಲ್ಲರೂ ಸ್ವಾಗತಿಸಿದ್ದಾರೆ. ಅದು ಯಶಸ್ವಿಯಾಗಿ ಕಾರ್ಯಗತಗೊಂಡಿದೆ. ಇದರಿಂದಾಗಿ ಈ ವರ್ಗದ ಜನರು ಸಹಕಾರಿ ಕ್ಷೇತ್ರದ ಮುಖ್ಯವಾಹಿನಿಗೆ ಬಂದಿದ್ದಾರೆ.

ಆದರೆ ಈ ಬಾರಿಯ ರಾಜ್ಯ ಸರಕಾರ ಮಾಡಿರುವ ತಿದ್ದುಪಡಿ ಸಹಕಾರಿಗಳಿಗೆ ಅಸಮಾಧಾನವಾಗಿದೆ. ವಿಶೇಷವಾಗಿ ಪದಾಧಿಕಾರಿಗಳ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಪ್ರಾಥಮಿಕ ಹಂತದಿಂದ ರಾಜ್ಯಮಟ್ಟದ ಸಂಸ್ಥೆಗಳಲ್ಲೂ ಮೀಸಲಾತಿ ಕಲ್ಪಿಸಿರುವುದು ಮತ್ತು ಕಲಂ 18 ಬಿ ಪ್ರಕಾರ (ಸ್ಟೇಟ್ ಸ್ಟ್ಯಾಟುಟರಿ ರಿಸರ್ವ್) ರಾಜ್ಯ ಶಾಸನಬದ್ಧ ದ್ರವ್ಯತಾ ಮೀಸಲು ನಿಧಿಯನ್ನು ಕಡ್ಡಾಯವಾಗಿ ರಾಜ್ಯ ಸಹಕಾರ ಬ್ಯಾಂಕ್, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಥವಾ ಪಟ್ಟಣ ಸಹಕಾರ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡುವುದು ಕಡ್ಡಾಯ. ಸದಸ್ಯರಿಂದ ಸಂಗ್ರಹಿಸಿದ ಠೇವಣಿಗಳನ್ನು ಸಾಲ ನೀಡಬೇಕು ಇಲ್ಲವೇ ಹೂಡಿಕೆ ಮಾಡಬೇಕು ಮತ್ತು ಕಲಂ 29(ಸಿ) ಪ್ರಕಾರ ಸಹಕಾರಿ ಸಂಸ್ಥೆಗಳ ನಿರ್ದೇಶಕರಾದವರು ತಮ್ಮ ವಾರ್ಷಿಕ ಆಸ್ತಿ ವಿವರಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು ಮುಂತಾದ ತಿದ್ದುಪಡಿಗಳು ಸಹಕಾರಿಗಳಿಗೆ ಅಸಮಾಧಾನವಾಗಿದೆ. ಪೂರಕವೆನಿಸುವುದಿಲ್ಲ.

ತಾಲ್ಲೂಕು ಪಂಚಾಯಿತಿ ಗ್ರಾಮ ಪಂಚಾಯಿತಿಗಳಲ್ಲಿರುವ ಹಾಗೆ ಇಲ್ಲಿ ಮಾಡುವುದು ಸರಿಯಲ್ಲ. ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಸರಕಾರದ ಕಾರ್ಯಕ್ರಮಗಳನ್ನು ಜಾರಿ ಮಾಡಲಾಗುತ್ತದೆ. ಆ ಸಂಸ್ಥೆಗಳು ಸರಕಾರದಿಂದ ನಡೆಸುತ್ತಿರುವ ಸಂಸ್ಥೆಗಳು. ಸಹಕಾರಿ ಸಂಸ್ಥೆಗಳು ಜನರಿಂದೆ ಸದಸ್ಯರಿಂದ ನಡೆಯುತ್ತಿರುವ ಸಂಸ್ಥೆಗಳು ಇಲ್ಲಿಯ ಅಜೆಂಡಾ ಹಾಗೂ ಉದ್ದೇಶಗಳು ಸಾಮಾಜಿಕ ನ್ಯಾಯದಡಿಯಲ್ಲಿಯೇ ನಡೆಸಲಾಗುತ್ತಿದೆಯಾದರೂ ವ್ಯಾಪ್ತಿ ಹಾಗೂ ಉದ್ದೇಶಗಳಿಗನುಸಾರವಾಗಿ ನಡೆಸಲಾಗುತಿದೆ. ಹಲವಾರು ವರ್ಷಗಳಿಂದ ಸಮಾನ ಮನಸ್ಕರೆಲ್ಲ ಸೇರಿ ಸಮಾನ ಉದ್ದೇಶಗಳ ಸಾಧನೆಗಾಗಿ ಕಟ್ಟಿಕೊಂಡು ಉತ್ತಮವಾಗಿ ಪ್ರಗತಿಪಥದಲ್ಲಿ ಯಶಸ್ವಿಯಾಗಿ ನಡೆಸುತ್ತಿರುವ ಸಂಸ್ಥೆಗಳನ್ನು ಏನೂ ತಿಳಿಯದ ಅನುಭವವಿರದ ಸದಸ್ಯರಿಗೆ ಕೊಡುವುದು ಸಹಕಾರಿಗಳಿಗೆ ಅಸಮಾಧಾನವೆನಿಸಿದೆ. ಈ ಬಗ್ಗೆ ದಿನಾಂಕ 25.09.2025 ರಂದು ಬೆಂಗಳೂರು, ದಿನಾಂಕ 28.09.2025 ರಂದು ಉಡುಪಿಯಲ್ಲಿ ಹಾಗೂ ದಿನಾಂಕ 04.10.2025 ರಂದು ಬೆಳಗಾವಿಯಲ್ಲಿ ನಡೆದ ಸಹಕಾರಿಗಳ ಸಭೆಯಲ್ಲಿ ತೀವ್ರ ವಿರೋಧ ಹಾಗೂ ಅಸಮಾಧಾನ ವ್ಯಕ್ತವಾಗಿದೆ. ಇದೇ ರೀತಿ ಬೆಳಗಾವಿ, ಉಡುಪಿ, ಮಂಗಳೂರುಗಳಲ್ಲಿ ಹಾಗೂ ಕಲಬುರ್ಗಿಗಳಲ್ಲಿ ನಡೆದ ಸಹಕಾರಿಗಳ ಸಭೆಯಲ್ಲೂ ಸಹಕಾರಿಗಳು ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ರಾಜ್ಯ ಸರಕಾರ ಕೂಡಲೇ ಗಮನಹರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂಬುದು ಸೌಹಾರ್ದ ಸಹಕಾರಿಗಳ ಆಗ್ರಹದ ಬೇಡಿಕೆಯಾಗಿದೆ.



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಜಿಗುಪ್ಸೆ"

ಮನದ ಮಾಲಿನ್ಯವೆಂದರೆ ಜಿಗುಪ್ಸೆ ಅಥವಾ ತಿರಸ್ಕಾರ ಮನೋಭಾವ. ಇದೊಂದು ಮನದ ಕಹಿ ಭಾವ. ಎಲ್ಲವನ್ನೂ ಅನುಭವುಸುವುದು ಮನಸ್ಸು. ಆ ಮನಸ್ಸು ಕಹಿಯಾದರೆ ಜೀವನವೇ ಕಹಿಯಾಗಿ ಬಿಡುತ್ತದೆ. ನಾಲಿಗೆ ಕಹಿಯಾದರೆ ಊಟವೆಲ್ಲ ಕಹಿಯಾದಂತೆ.

ಆದ್ದರಿಂದ ನಾವು ಪ್ರಯತ್ನಪೂರಕವಾಗಿ ನಿರಂತರ ಸಾಧನೆಯಿಂದ ಮನದ ಈ ಕಹಿತನ ಕಳೆದುಕೊಳ್ಳಬೇಕು. ಇಲ್ಲದಿದ್ದರೆ ಬದುಕಿನಲ್ಲಿ ಸುಖದ ಹೂವು ಅರಳುವುದಿಲ್ಲ. ಅದು ನಮಗೆ ಹಿಡಿಸುವುದಿಲ್ಲ. ಇದು ಆಗಿಬರುವುದಿಲ್ಲ ಎಂದರೆ ಬದುಕುವುದು ಹೇಗೆ? ಜಗತ್ತಿನಲ್ಲಿ ನಮಗೆ ಬೇಕಾದುದು ಬೇಡಾದುದು ಎಲ್ಲವೂ ಇರುವುದೇ. ಈ ಜಗತ್ತಿನಲ್ಲಿ ನಾನೊಬ್ಬನೇ ಮಹಾರಾಜನಲ್ಲ. ಏಳುವರೆ ನೂರು ಕೋಟಿ ಜನರಲ್ಲಿ ನಾನೊಬ್ಬನಷ್ಟೇ. ಈ ಜನತ್ತಿನಲ್ಲಿ ಮುದುಕರೇ ಇರಬಾರದು ಎಂದರೆ ಹೇಗೆ? ಮುದುಕರು ಇರದಿದ್ದರೆ ಯುವಕರು ಎಲ್ಲಿಂದ ಬರುತ್ತಾರೆ? ಹೋಗಲಿ. ಇಂದು ಯುವಕರಾದವರು ನಾಳೆ ಮುದುಕರಾಗುವುದಿಲ್ಲವೇ?

ಗಣಿತದ ಒಂದು ಕಥೆ. ಒಂಬತ್ತು ಅಂಕಿಗೆ ಒಮ್ಮೆ 'ನಾನೇ ದೊಡ್ಡವನು' ಎಂಬ ಅಹಂಕಾರ ಉಂಟಾಯಿತು. ನನಗಿಂತ ದೊಡ್ಡ ಅಂಕಿ ಬೇರೊಂದಿಲ್ಲ ಎಂದು ಅದು ಭಾವಿಸಿತು. ಪಕ್ಕದಲ್ಲಿದ್ದ ಶೂನ್ಯವನ್ನು ಅದು ದ್ವೇಷಿಸತೊಡಗಿತು. 'ನಿನಗೇನು ಬೆಲೆ ಇದೆ? ನೀನು ನನ್ನ ಹತ್ತಿರ ಸುಳಿಯಬೇಡ! ಎಂದು ಶೂನ್ಯಕ್ಕೆ ಹೇಳಿತು. ಆಗ ಶೂನ್ಯ ಹೇಳಿತು– 'ನನಗೇನು ಬೆಲೆಯಿಲ್ಲ ನಿಜ. ಆದರೆ ನಾನು ನಿನ್ನ ಹತ್ತಿರ ಸುಮ್ಮನೇ ಕುಳಿತರೆ ಸಾಕು. ನಿನ್ನ ಬೆಲೆ ಹೆಚ್ಚುತ್ತಾ ಹೋಗುತ್ತದೆ – ಅಮೂಲ್ಯವಾಗುತ್ತದೆ. ಅದೇನಾದರೂ ಗೊತ್ತೇ? ತತ್ಕ್ಷಣ ಒಂಬತ್ತಕ್ಕೆ ತನ್ನ ತಪ್ಪಿನ ಅರಿವಾಗಿ ಹಿರಿಯನೂ ಅನುಭವಿಯಾದ ಶೂನ್ಯಕ್ಕೆ ಕ್ಷಮೆ ಕೇಳಿತು. ಶೂನ್ಯದೊಂದಿಗೆ ಸಖ್ಯ ಭಾವದಿಂದ ಇದ್ದು ಒಂಬತ್ತು ಅಮೂಲ್ಯವಾಗಿತ್ತು. ಅದ್ವಿತೀಯವಾಗಿತ್ತು.

ಈ ಜಗತ್ತಿನಲ್ಲಿ ಬ್ರಹ್ಮಾಂಡವನ್ನು ಬೆಳಗುವ ಸೂರ್ಯನಿಗೆ ಎಷ್ಟು ಬೆಲೆಯಿದೆಯೋ ಅಷ್ಟೇ ಬೆಲೆ ಮನೆಯನ್ನು ಬೆಳಗುವ ಪುಟ್ಟ ಪಣತೆಗೆ ಅಥವಾ ದೀಪಕ್ಕೂ ಇದೆ. ಏಕೆಂದರೆ ಸೂರ್ಯನಿಂದಾಗದ ಕೆಲಸವನ್ನು ಆ ಪುಟ್ಟ ಪಣತೆಯು ಮಾಡುತ್ತದೆ. ರಾತ್ರಿಯಲ್ಲಿ ಸೂರ್ಯನು ನಮಗೆ ಬೆಳಕು ಕೊಡಲಾರನು. ಆದರೆ ಪಣತೆಯು ಕೊಡುತ್ತದೆ. ಇಷ್ಟೇ ಅಲ್ಲ ಸೂರ್ಯನು ನಮ್ಮ ಮನೆಯೊಳಗೆ ಬರಲಾರನು. ಪಣತೆ ನಮ್ಮ ಮನೆಯೊಳಗೇ ಇರುತ್ತದೆ. ಹಾಗಾದರೆ ಪಣತೆ ಹೇಗೆ ಕನಿಷ್ಠವಾಗುತ್ತದೆ?

ಈ ಜಗತ್ತಿನಲ್ಲಿ ಸಣ್ಣದು–ದೊಡ್ಡದು, ಒಳ್ಳೆಯದು–ಕೆಟ್ಟದ್ದು ಎಲ್ಲವೂ ಇರುವುದೇ, ಯಾವುದನ್ನೂ ನಾವು ತಿರಸ್ಕರಿಸಲಿಕ್ಕೆ ಆಗುವುದಿಲ್ಲ. ಊರೆಂದಾಗ ಒಂದು ತಿಪ್ಪೆಯೂ ಇರುವುದೇ, ತಿಪ್ಪೆಯೇ ಇರಬಾರದೆಂದರೆ ಊರೆಲ್ಲವೂ ತಿಪ್ಪೆಯಾದೀತೆಂಬುದು ನಾವು ಮರೆಯಬಾರದು. ನಮಗೆ ಅವರು ಬೇಕಾಗಿಲ್ಲ. ಇವರು ಬೇಕಾಗಿಲ್ಲ ಎಂದು ಅವರಿವರನ್ನು ತಿರಸ್ಕಾರಿದಂದ ಕಾಣುತ್ತಿರುತ್ತೇವೆ. ಆದರೆ ನಾವಾದರೂ ಎಲ್ಲರಿಗೂ ಎಲ್ಲಿ ಬೇಕಾಗಿರುತ್ತೇವೆ ಎನ್ನುವುದನ್ನು ಮರೆಯುತ್ತೇವೆ. ನಮ್ಮನ್ನು ತಿರಸ್ಕರಿಸುವವರು, ಪುರಸ್ಕರಿಸುವವರು ಎಲ್ಲರೂ ಈ ಜಗತ್ತಿನಲ್ಲಿ ಇರುವವರೇ, ಅದರಲ್ಲೇ ನಾವು ನಮ್ಮ ಬದುಕನ್ನು ಕಟ್ಟಿಕೊಳ್ಳಬೇಕು.

ಒಂದು ಬೀಜ ರಸ್ತೆಯ ಪಕ್ಕದಲ್ಲಿ ಬಿದ್ದಿತ್ತು. ಮೊಳಕೆಯೊಡೆದು ಮೇಲೇಳುತ್ತಿತ್ತು. ಅಷ್ಟರಲ್ಲಿ ಯಾರೋ ಬಂದ ಅದನ್ನು ತುಳಿದು ಬಿಡುತ್ತಿದ್ದರು. ಹೀಗೆಯೇ ನಡೆಯುತ್ತಿತ್ತು. ಒಂದು ದಿನ ಅಲ್ಲೇ ಮರದಲ್ಲಿದ್ದ ಗಿಳಿಯು ಕೇಳಿತು "ಈ ಜನರು ನಿನ್ನನ್ನು ಎಷ್ಟೊಂದು ತುಳಿಯುತ್ತಾರೆ, ತಿರಸ್ಕರಿಸುತ್ತಾರೆ; ನಿನಗೆ ನೋವಾಗುವುದಿಲ್ಲವೇ?" ಬೀಜ ಹೇಳಿತು– "ಯಾರು ನನ್ನನ್ನು ತುಳಿಯುತ್ತಾರೆ? ನಾನು ಅವರನ್ನು ನೋಡಿಯೋ ಇಲ್ಲವಲ್ಲ! ಅವರನ್ನು ನಾನು ಸುಮ್ಮನೇ ತಿರಸ್ಕರಿಸುತ್ತಾ ಕುಳಿತರೆ ನಾನು ಬೆಳೆಯುವುದಾದರೂ ಹೇಗೆ?" "ಈ ಬೀಜಕ್ಕೆ ಇರುವ ಬುದ್ಧಿಯು ಮಾನವರಿಗೆ ಇದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!" ಎಂದು ಗಿಳಿಯು ಮೌನ ತಳೆಯಿತು!! ನಿಜವಾಗಿಯೂ ಈ ಜಿಗುಪ್ಸೆ ಅಥವಾ ತಿರಸ್ಕಾರ ಭಾವವನ್ನು ಬಿಟ್ಟರೆ ಮನುಷ್ಯನೇ ಮಹಾದೇವನಾಗುತ್ತಾನೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ಸೆಪ್ಟೆಂಬರ್–25ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ | 820 | 437 | 458 | 184 | 1899 |
| 2 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 139 | 43 | 49 | 34 | 265 |
| 3 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 102 | 98 | 94 | 55 | 349 |
| 4 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 857 | 382 | 413 | 163 | 1815 |
| **ಸೆಪ್ಟೆಂಬರ್ 2025ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 265 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 349** | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 7170 | 1265 | 2149 | 761 | 11345 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1084 | 238 | 531 | 189 | 2042 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 6086 | 1027 | 1618 | 572 | 9303 |
| **ಸೆಪ್ಟೆಂಬರ್ 2025ರ ತಿಂಗಳಿನಲ್ಲಿ ಒಟ್ಟು 23 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.** | | | | | | |

# ತುಮಕೂರು ವಿಶ್ವವಿದ್ಯಾನಿಲಯದಲ್ಲಿ ನಡೆದ 3-I ಇಂಜಿನ್ : ಡ್ರೈವಿಂಗ್ ಇಂಡಿಯಾಸ್ ಜರ್ನಿ ಟು ಎ $5 ಟ್ರಿಲಿಯನ್ ಎಕಾನಮಿ ಕಾರ್ಯಾಗಾರ.





**ತುಮಕೂರು** : ದಿನಾಂಕ 17.09.2025 ರಂದು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ನಡೆದ 3-I ಇಂಜಿನ್ ಡ್ರೈವಿಂಗ್ ಇಂಡಿಯಾಸ್ ಜರ್ನಿ ಟು ಎ $5 ಟ್ರಿಲಿಯನ್ ಎಕಾನಮಿ ಎಂಬ ವಿಷಯದ ಕುರಿತು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿ ಕಾರ್ಯಕ್ರಮವನ್ನು ತುಮಕೂರು ವಿಶ್ವವಿದ್ಯಾನಿಲಯ, ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ನೇತೃತ್ವದಲ್ಲಿ ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಹಾಗೂ ಐ.ಸಿ.ಎಸ್.ಎಸ್.ಆರ್ ಜಂಟಿ ಆಶ್ರಯದಲ್ಲಿ ಜರುಗಿತು.

**ಸಾಮಾಜಿಕ ಆರ್ಥಿಕ ಸಮಾನತೆ ಸಹಕಾರಿಯ ಉದ್ದೇಶ : ಶ್ರೀ ಸಿಎ. ಜಿ. ನಂಜನಗೌಡ ಆಶಯ.**

ಸಹಕಾರಿ ಚಳುವಳಿ ಆರಂಭವಾಗಿ 180 ವರ್ಷಗಳು ಕಳೆದಿದೆ. ದೇಶದಲ್ಲಿ ಸಾಮಾಜಿಕ, ಆರ್ಥಿಕ ಅಸಮಾನತೆಯನ್ನು ತೊಡೆದುಹಾಕಿ, ಮಹಿಳೆ, ಯುವಕರು ಸಮಗ್ರವಾಗಿ ತೊಡಗಿಸಿಕೊಂಡಾಗ ಸಮಾನತೆಯ ವೇದಿಕೆ ಸಹಕಾರಿ ಸಂಘದಲ್ಲಿ ಸೃಷ್ಟಿಯಾಗಿ, ಜನರ ಜೀವನ ಮಟ್ಟ ಹೆಚ್ಚಾಗಿ, ದೇಶದ ಆರ್ಥಿಕತೆ ಬೆಳವಣಿಗೆಯಾಗಲು ಕಾರಣವಾಗಿದೆ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಸಿಎ ಜಿ. ನಂಜನಗೌಡ ಜಿ ರವರು ಹೇಳಿದರು.

ತುಮಕೂರು ವಿಶ್ವವಿದ್ಯಾನಿಲಯ, ಕಲಾ ಕಾಲೇಜಿನ ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಮತ್ತು ಐ.ಸಿ.ಎಸ್.ಎಸ್.ಆರ್ ಜಂಟಿ ಆಶ್ರಯದಲ್ಲಿ ನಡೆದ 3–I ಇಂಜಿನ್ : ಡ್ರೈವಿಂಗ್ ಇಂಡಿಯಾಸ್ ಜರ್ನಿ ಟು ಎ 5 ಟ್ರಿಲಿಯನ್ ಎಕಾನಮಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ತಂತ್ರಜ್ಞಾನ ತುದಿ ಬೆರಳಲ್ಲಿದೆ. ಅದರ ಸದುಪಯೋಗಪಡಿಸಿಕೊಂಡು ಸಹಕಾರಿ ರಂಗದಲ್ಲಿ ಯುವಜನರು ಕೆಲಸ ಮಾಡಬೇಕು. ಆ ಮೂಲಕ ಸ್ವ ಬೆಳವಣಿಗೆಯೊಂದಿಗೆ, ಸಹಕಾರಿಯ ಬೆಳವಣಿಗೆ ಮಾಡಲು ಕಾರಣವಾಗಬೇಕು ಎಂದು ಹೇಳಿದರು. ನಿವೃತ್ತ ಡೀನ್ ಹಾಗೂ ಕಾಮರ್ಸ್ ವಿಭಾಗದ ಮುಖ್ಯಸ್ಥ ಪ್ರೊ. ಕೆ. ಈರೇಸಿ ತುಮಕೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಂ. ವೆಂಕಟೇಶ್ವರಲು ಸಹಿತ ಅನೇಕರನ್ನು ಗೌರವಿಸಲಾಯಿತು.

ತುಮಕೂರು ವಿಶ್ವವಿದ್ಯಾಲಯ ಮಾನ್ಯ ಕುಲಸಚಿವರಾದ ಪ್ರೊ. ಎಂ. ಕೊಟ್ರೇಶ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ ವಿಜಯ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಪ್ರಾಂಶುಪಾಲರಾದ ಡಾ. ದಾಕ್ಷಾಯಿಣಿ, ಕಾಮರ್ಸ್ ವಿಭಾಗದ ಮುಖ್ಯಸ್ಥರಾದ ಪ್ರೊ. ಬಿ. ಶೇಖರ್, ಪ್ರೊ. ಪಿ. ಪರಮಶಿವಯ್ಯ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಬಿ. ಹೆಚ್ ಕೃಷ್ಣಾರೆಡ್ಡಿ, ಕಾಮರ್ಸ್ ವಿಭಾಗದ ಮುಖ್ಯಸ್ಥ ಡಾ. ಶ್ರೀನಿವಾಸ ಮೂರ್ತಿ ಎಂ.ಡಿ, ಕಾರ್ಯಾಗಾರದ ಸಂಯೋಜಕ ರಾಜೇಶ್ ನಾಯ್ಕ್ ಇವರು ಉಪಸ್ಥಿತರಿದ್ದರು.

**ಆರ್ಥಿಕಾಭಿವೃದ್ಧಿಯಲ್ಲಿ ನವೀನತೆ, ಹೂಡಿಕೆ, ಸಮಾವೇಶದ ಮಹತ್ವ ತಿಳಿಸಿ ಪ್ರೊ. ಬಿ. ಶೇಖರ್ ಪ್ರಾಸ್ತಾವಿಕ ಮಾತುಗಳನ್ನಾಡಿದರು.**

ಕಾರ್ಯಾಗಾರದ ಸಂಘಟಕ ಡಾ. ಶ್ರೀನಿವಾಸ ಮೂರ್ತಿ ಎಂ.ಡಿ ಸ್ವಾಗತಿಸಿದರು. ಉಪನ್ಯಾಸಕಿ ವರ್ಷಿತ ನಿರೂಪಿಸಿದರು. ಕಾರ್ಯಾಗಾರದ ಸಂಯೋಜಕ ರಾಜೇಶ್ ನಾಯ್ಕ್ ಪ್ರಸ್ತಾಪಿಸಿದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಸಿ.ಪಿ ವಿಜಯ್ ವಂದಿಸಿದರು.

ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ವತಿಯಿಂದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, "A Catalyst for India's $5 Trillion Economy Vision" ಎಂಬ ವಿಷಯದ ಕುರಿತು ಪೇಪರ್ ಪ್ರೆಸೆಂಟೇಶನ್ ಅನ್ನು ನೀಡಿದರು. ಶ್ರೀಮತಿ ಸವಿತ ಎನ್ ಇ ಕಿರಿಯ ಸಹಾಯಕಿ ಇವರು Economic Independence is central to women's empowerment, and collectivism through co-operative movements has emerged as a powerfull ಎಂಬ ವಿಷಯದ ಕುರಿತು ಪೇಪರ್ ಪ್ರೆಸೆಂಟೇಶನ್ ಅನ್ನು ನೀಡಿದರು. ಹಾಗೂ ಶ್ರೀ ಬಿ ಎಸ್ ವಿಜಯ್ ಜಿಲ್ಲಾ ಸಂಯೋಜಕರು

ಇವರು Inclusive Growth through Cooperation ಈ ವಿಷಯದ ಕುರಿತು ಪೇಪರ್ ಪ್ರಸೆಂಟೇಶನ್ ಅನ್ನು ನೀಡಿದರು. ಒಟ್ಟು ಆಫ್ ಲೈನ್ ಮುಖಾಂತರ 74, ಆನ್‌ಲೈನ್ ಮುಖಾಂತರ 42 ಸದಸ್ಯರುಗಳು ಪೇಪರ್ ಪ್ರೇಸೆಂಟೇಶನ್ ಅನ್ನು ನೀಡಿದರು.

ಕಾರ್ಯಕ್ರಮದಲ್ಲಿ ಪ್ರೊ. ದೇವರಾಜ್ ಎಸ್, ಡಾ ಬಿ.ಕೆ ಸುರೇಶ್, ಡಾ. ನಂದೀಶ್ ವಿ. ಹೀರೆಮಠ, ಡಾ. ಶೋಬಾ ಸಿ, ಡಾ. ವನಜಾಕ್ಷಿ .ಇ ಹಾಗೂ ಮತ್ತಿತರು ಉಪಸ್ಥಿತರಿದ್ದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ವತಿಯಿಂದ ಶ್ರೀ ವಿ ಜೆ ಕಾರಕೂನ್, ತರಬೇತಿ ವಿಭಾಗದ ಮಾನ್ಯ ಸಲಹೆಗಾರರು, ಶ್ರೀಮತಿ ಕವಿತ. ಆರ್. ಅಧಿಕಾರಿ, ಶ್ರೀ ಬಾಬು ಪಠಾಣ್ ಅಧಿಕಾರಿ, ಶ್ರೀಮತಿ ಸವಿತ ಎನ್ ಇ ಕಿರಿಯ ಅಧಿಕಾರಿ, ಶ್ರೀ ವಿಜಯ್ ಬಿ.ಎಸ್. ಜಿಲ್ಲಾ ಸಂಯೋಜಕರು, ಶ್ರೀ ಉಮೇಶ್ ಜಿಲ್ಲಾ ಸಂಯೋಜಕರು, ಶ್ರೀ ವಿಶ್ವನಾಥ್ .ಎಮ್ ಸಹಾಯಕರು, ಶ್ರೀಮತಿ ನವ್ಯ ಹೆಚ್ ಎಸ್ ಸಹಾಯಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 351 ಶಿಬಿರಾರ್ಥಿಗಳು ಪ್ರಯೋಜನವನ್ನು ಪಡೆದರು.

# ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಗಳ ಕುರಿತಾದ ಜಾಗೃತಿ ಹಾಗೂ ಸಮಾಲೋಚನಾ ಸಭೆ.

## ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ಬೆಳವಣಿಗೆಗೆ ಪೂರಕ ಕ್ರಮಗಳಿಗಾಗಿ ಸರಕಾರಕ್ಕೆ ಮನವಿ





**ಬೆಂಗಳೂರು :** ಕರ್ನಾಟಕ ಸರಕಾರ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ ಇತ್ತೀಚೆಗೆ ಅಳವಡಿಸಿದ ತಿದ್ದುಪಡಿಗಳ ಕುರಿತಾದ ಜಾಗೃತಿ ಹಾಗೂ ಸಹಕಾರಿಗಳ ಜೊತೆಗೆ ಸಮಾಲೋಚನೆ ಸಭೆಯನ್ನು ದಿನಾಂಕ 25.09.2025 ರಂದು ಹವ್ಯಕ ಭವನದಲ್ಲಿ ಸೌಹಾರ್ದ ಸಹಕಾರಿಗಳ ಸೂಚನೆಗಳ ಆಧಾರದ ಮೇಲೆ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಬೆಂಗಳೂರು ವಿಭಾಗದ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಹಾಗೂ ಮೈಸೂರು ವಿಭಾಗದ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳ ಸಹಕಾರಿಗಳಿಂದ 350ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ವಹಿಸಿದ್ದರು. ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮದಲ್ಲಿ ಮಾಜಿ ಅಧ್ಯಕ್ಷರೂ ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು, ಶ್ರೀ ಗುರುನಾಥ ಜಾಂತಿಕರರವರು, ಮಾಜಿ ಉಪಾಧ್ಯಕ್ಷರೂ ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು, ಶ್ರೀ ಬಿ.ಎಸ್.ಗುಂಡೂರಾವರವರು, ಶ್ರೀ ರಘುರಾಮರೆಡ್ಡಿಯವರು, ಶ್ರೀ ಸಿ. ಪಿ. ವಿಜಯರವರು, ಶ್ರೀ ಪ್ರಭುದೇವರವರು, ಶ್ರೀ ಎಸ್ ಕೆ. ಮಂಜುನಾಥರವರು ಹಾಗೂ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಶ್ರೀಮತಿ ಹರ್ಷಪ್ರಭರವರಿಂದ ಪ್ರಾರ್ಥನೆಯ ನಂತರ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿಯವರು ಎಲ್ಲ ಸಹಕಾರಿಗಳನ್ನು ಹಾಗೂ ಎಲ್ಲ ಗಣ್ಯರನ್ನು ಸ್ವಾಗತಿಸಿದರು.

### ಶ್ರದ್ಧಾಂಜಲಿ

ಇದೇ ಸಂದರ್ಭದಲ್ಲಿ ನಾಡಿನ ಹೆಸರಾಂತ ಖ್ಯಾತ ಕಾದಂಬರಿಕಾರ ಲೇಖಕ ಸರಸ್ವತಿ ಸನ್ಮಾನ ಪುರಸ್ಕೃತ ಹಾಗೂ ಪದ್ಮಭೂಷಣ ಪುರಸ್ಕೃತ ಶ್ರೀ ಎಸ್.ಎಲ್. ಭೈರಪ್ಪನವರ ನಿಧನಕ್ಕೆ ಮೌನ ಆಚರಿಸಿ ಸಂತಾಪ ಸೂಚಿಸಲಾಯಿತು. ಶ್ರೀ ಶರಣಗೌಡ ಜಿ. ಪಾಟೀಲ ರವರು ಶ್ರೀಯುತರ ಸಾಧನೆಗಳ ಬಗ್ಗೆ ಅವರ ಕೃತಿಗಳ ಬಗ್ಗೆ ಅವರ ಪ್ರಶಸ್ತಿಗಳ ಬಗ್ಗೆ ವಿವರ ನೀಡಿ ಮಾತನಾಡಿದರು.

ಸಭೆ ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡರವರು ಮಾತನಾಡಿ ಸಭೆ ಏರ್ಪಾಡು ಮಾಡಿದ ಉದ್ದೇಶ ಅನೇಕ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳು ಹಾಗೂ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದವರು ದೂರವಾಣಿ ಕರೆ ಮಾಡಿ ಇತ್ತೀಚಿನ ತಿದ್ದುಪಡಿಗಳಲ್ಲಿ ಕೆಲವು ಸೌಹಾರ್ದ ಸಹಕಾರಿ ಕಾಯ್ದೆಯ ಮೂಲ ಸ್ವರೂಪ ಹಾಗೂ ಆಶಯಗಳಿಗೆ ವ್ಯತಿರಿಕ್ತವಾಗಿವೆ. ಸೌಹಾರ್ದ ಸಹಕಾರಿಗಳ ದಿನನಿತ್ಯದ ಕಾರ್ಯಚಟುವಟಿಕೆಗಳಿಗೆ ಸೌಹಾರ್ದ ಸಹಕಾರಿ ಕಾಯ್ದೆಗೆ ಇತ್ತೀಚಿನ ತಿದ್ದುಪಡಿಗಳ ಬಗ್ಗೆ ಸಹಕಾರಿಗಳಿಗೆ ಮಾಹಿತಿ ನೀಡುವುದು, ಕೆಲವು ಗಂಭೀರ ವಿಷಯಗಳ ಬಗ್ಗೆ ಚಿಂತನೆ ಸಂಬಂಧಿಸಿದವರಲ್ಲಿ ಈ ಗೊಂದಲಗಳ ನಿವಾರಣೆಗೆ ಕ್ರಮವಿಡುವುದಕ್ಕಾಗಿ ಮನವಿಮಾಡುವುದು ಅವಶ್ಯಕ ಆದ್ದರಿಂದ ಸಭೆ ವ್ಯವಸ್ಥೆ ಮಾಡಿ ಎಂದು ತಿಳಿಸಿದ ಹಿನ್ನೆಲೆಯಲ್ಲಿ ಈ ಸಭೆ ವ್ಯವಸ್ಥೆ ಮಾಡಲಾಗಿದೆ. ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ತಮ್ಮ ಅಭಿಪ್ರಾಯಗಳನ್ನು ತಿಳಿಸಬಹುದಾಗಿದೆ ಎಂದು ತಿಳಿಸಿದರು.

**ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ** ರವರು ಸೌಹಾರ್ದ ಸಹಕಾರ ಕಾಯ್ದೆಯ ತಿದ್ದುಪಡಿಯ ವಿವರಗಳನ್ನು ಸಭೆಯಲ್ಲಿ ಪ್ರಸ್ತುತ ಪಡಿಸಿದರು. ಸೌಹಾರ್ದ ಸಹಕಾರಿ ಕಾಯ್ದೆಗೆ ಒಟ್ಟಾರೆ 22/24 ತಿದ್ದುಪಡಿಗಳನ್ನು ಸರಕಾರ ಜಾರಿಮಾಡಿದೆ. ಎಂದು ತಿಳಿಸಿ ವಿವರಗಳನ್ನು ತಿಳಿಸಿದರು. ನಂತರ ಹಲವಾರ ಪ್ರತಿನಿಧಿಗಳು ಸಭೆಯಲ್ಲಿ ಮಾತನಾಡಿ ಈ ತಿದ್ದುಪಡಿಗಳು ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ವಿರೋಧವಾಗಿವೆ. ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಸರಕಾರ ಹಸ್ತಕ್ಷೇಪಕ್ಕೆ ಹೆಚ್ಚಿನ ಅವಕಾಶವುಂಟು ಮಾಡುತ್ತದೆ. ಸಹಕಾರಿಗಳ ದೈನಂದಿನ ಕಾರ್ಯಚಟುವಟಿಕೆಗಳಿಗೆ ತೊಂದರೆ ಉಂಟುಮಾಡುತ್ತವೆ. ಒಟ್ಟಾರೆ ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಹಿನ್ನಡೆಯಾಗುತ್ತದೆ ಆದ್ದರಿಂದ ಇದನ್ನು ವಿರೋಧಿಸುತ್ತೇವೆ ಎಂದು ಒಕ್ಕೂರಲಿನಿಂದ ತಿಳಿಸಿದರು. ಮತ್ತು ಈ ಬಗ್ಗೆ ಶೀಘ್ರ ಕಾನೂನು ತಜ್ಞರ ಸಲಹೆ ಪಡೆದು ಎಲ್ಲರೂ ಸೇರಿ ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ಹಾಗೂ ಜಿಲ್ಲಾ ಸಹಕಾರಿ ಒಕ್ಕೂಟಗಳ ನೇತೃತ್ವದಲ್ಲಿ ಸಂಬಂಧಿಸಿದವರ ಗಮನ ಸೆಳೆದು ಪರಿಹಾರ ಒದಗಿಸಬೇಕೆಂದು ಮನವಿ ಮಾಡುವುದರ ಜೊತೆಗೆ ಅವಶ್ಯಕವೆನಿಸಿದರೆ ತಿದ್ದುಪಡಿಗಳನ್ನು ವಿರೋಧಿಸಿ ರಾಜ್ಯ ಹೈಕೋರ್ಟ್‌ನಲ್ಲಿ ದಾವೆ ಹೂಡಬೇಕೆಂದು ತೀರ್ಮಾನಿಸಲಾಯಿತು.

ನಿರ್ದೇಶಕರುಗಳಾದ ಶ್ರೀ ಸಿ.ಪಿ. ವಿಜಯರವರು, ಶ್ರೀ ರಾಘುರಾಮ ರೆಡ್ಡಿಯವರು, ಶ್ರೀ ಪ್ರಭುದೇವವರು, ಶ್ರೀ ಬಿ.ಎಸ್ ಗುಂಡೂರಾವರವರು, ಶ್ರೀ ಎಸ್.ಕೆ ಮಂಜುನಾಥ ರವರು ಮಾತನಾಡಿ ಸಂಯುಕ್ತ ಸಹಕಾರಿಯು ತೆಗೆದುಕೊಳ್ಳುವ ಕ್ರಮಕ್ಕೆ ಸಂಪೂರ್ಣ ಬೆಂಬಲ ವ್ಯಕ್ತ ಪಡಿಸಿದರು.

**ಶ್ರೀ ಗುರುನಾಥ ಜಾಂತಿಕರವರು ಮಾತನಾಡಿ** ಸೌಹಾರ್ದ ಸಹಕಾರಿ ಕ್ಷೇತ್ರದ ಅಸ್ತಿತ್ವಕ್ಕೆ ಹಾನಿ ಮಾಡುವ ನಿಟ್ಟಿನಲ್ಲಿ ಸರಕಾರದ ಕ್ರಮ ಇದಾಗಿದೆ. ಸೌಹಾರ್ದ ಸಹಕಾರಿ ಕಾಯೆಯ ಆಶಯ ತಿಳಿದುಕೊಳ್ಳುವಲ್ಲಿ ಸರಕಾರ ವಿಫಲವಾಗಿದೆ. ತಪ್ಪಿತಸ್ಥರ ಮೇಲೆ ಸರಕಾರ ಕ್ರಮ ತೆಗೆದುಕೊಳ್ಳಲಿ ನಾವು ಬೆಂಬಲಿಸುತ್ತೇವೆ. ಆದರೆ ಯಾರೂ ಒಬ್ಬಿಬ್ಬರು ಮಾಡುವ ತಪ್ಪು ಕೆಲಸಗಳಿಗೆ ಎಲ್ಲರಿಗೂ ಶಿಕ್ಷಿಸುವಂತಾಗಬಾರದು. ಈ ಬಗ್ಗೆ ಹೋರಾಟ ಅವಶ್ಯಕ ಎಲ್ಲರೂ ಸೇರಿ ಹೋರಾಟ ಮಾಡೋಣ ಎಂದರು.

**ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಮಾತನಾಡಿ** ಸೌಹಾರ್ದ ಸಹಕಾರಿ ಕಾಯ್ದೆ ಕ್ರಮೇಣ ಸರಕಾರಿ ಕಾಯ್ದೆಯಾಗಿ ಪರಿವರ್ತನೆ ಆಗುತ್ತಿರುವುದು ಅತ್ಯಂತ ನೋವಿನ ಸಂಗತಿ. ಹಲವಾರು ವಿಷಯಗಳ ಬಗ್ಗೆ ಸರಕಾರದ ಗಮನ ಸೆಳೆಯಲು ಸೌಹಾರ್ದ ಸಂಯುಕ್ತ ಸಹಕಾರಿ ಅನೇಕ ಮನವಿಗಳನ್ನು ಸಲ್ಲಿಸಿದ್ದೇವೆ. ರಾಜ್ಯಪಾಲರನ್ನು ಭೇಟಿಯಾಗಿದ್ದೇವೆ. ಅಧಿಕಾರಿಗಳ ಗಮನ ಸೆಳೆದಿದ್ದೇವೆ. ಏನೂ ಪ್ರಯೋಜನವಾಗಿಲ್ಲ. ಕಾನೂನು ಅಭಿಪ್ರಾಯ ಪಡೆದು ಮುಂದಿನ ಕ್ರಮ ಅನಿವಾರ್ಯ ಎಂದು ತಿಳಿಸಿದರು. ಸೌಹಾರ್ದ ಸಹಕಾರಿ ಕಾಯ್ದೆಯ ಆಶಯವನ್ನು ತಿಳಿದುಕೊಳ್ಳಲು ಸರಕಾರ ವಿಫಲವಾಗಿದೆ. ಈ ಬಗ್ಗೆ ಮುಂಬರುವ ದಿನಗಳಲ್ಲಿ ಕಾನೂನು ಹೋರಾಟ ಅವಶ್ಯಕ ಸಾಧ್ಯವಾದರೆ ಸಹಕಾರಿಗಳು ನಿಯೋಗದಲ್ಲಿ ಹೋಗಿ ತಮ್ಮ ಶಾಸಕರುಗಳಿಗೆ ಜಿಲ್ಲಾಧಿಕಾ–ರಿಗಳಿಗೆ ಮಂತ್ರಿಗಳಿಗೆ ಮನವಿಗಳನ್ನು ಕೊಡುವ ಕೆಲಸ ಮಾಡಿ ಎಂದು ತಿಳಿಸಿದರು.

**ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನಕುಮಾರರವರು** ಸೌಹಾರ್ದ ಸಹಕಾರಿ ಚಳುವಳಿ ತುಂಬ ಆತಂಕದಲ್ಲಿದೆ. ಶ್ರೀ ಕೃಷ್ಣ ಭಗವದ್ ಗೀತೆಯಲ್ಲಿ ಹೇಳಿದ ಹಾಗೆ ಧರ್ಮದ ಪತನವಾದ ಸಂದರ್ಭದಲ್ಲಿ ಅವನು ಅವತಾರ ಮಾಡಿ ಅಧರ್ಮವನ್ನು ಹೋಗಲಾಡಿಸುತ್ತಾನೆ ಎಂದು ಹೇಳಿದೆ. ಅದರಂತೆ ಸೌಹಾರ್ದ ಸಹಕಾರಿ ಚಳುವಳಿಯ ವಿಷಯದಲ್ಲಿ ದೇವರು ನಮ್ಮ ಜೊತೆಗಿದ್ದಾನೆ. ಖಂಡಿತ ನಮಗೆ ಜಯವಾಗುತ್ತದೆ. ಎಲ್ಲರೂ ಒಟ್ಟಾಗಿ ಸೇರಿ ಹೋರಾಟದ ಕ್ರಮ ಅನುಸರಿಸೋಣ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಹಾಗೂ ನಿಮ್ಮ ಜಿಲ್ಲೆಗಳ ಸೌಹಾರ್ದ ಸಹಕಾರಿ ಒಕ್ಕೂಟಗಳ ಸಹಕಾರದಿಂದ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳೋಣ ನಿಮ್ಮ ಸಹಕಾರವರಲಿ ಇದೇ ರೀತಿಯ ಕಾರ್ಯಕ್ರಮ ಉಡುಪಿ ಮಂಗಳೂರಿನಲ್ಲಿ ಹಾಗೂ ಬೆಳಗಾವಿಯಲ್ಲಿ ಹಮ್ಮಿಕೊಳ್ಳಾಗುತ್ತದೆ. ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ ಮುಂದಿನ ಹೆಜ್ಜೆಯ ಬಗ್ಗೆ ನಿರ್ಣಯಿಸಲಾಗುವುದು ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಕೆ. ಮಂಜುನಾಥ ರವರು ವಂದನಾರ್ಪಣೆ ಸಲ್ಲಿಸಿದರು.



**ದಕ್ಷಿಣ ಕನ್ನಡ** : ದಿನಾಂಕ 28.09.2025ರ ಭಾನುವಾರದಂದು ಸೌಹಾರ್ದ ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿದಂತೆ, ಮೈಸೂರು ಪ್ರಾಂತದ ವತಿಯಿಂದ "ಸಮಾಲೋಚನಾ ಸಭೆಯನ್ನು "ಹೋಟೆಲ್ ಶ್ರೀನಿವಾಸ ಹಂಪನಕಟ್ಟೆ ಮಂಗಳೂರು ಇಲ್ಲಿ ಆಯೋಜಿಸಲಾಯಿತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಮಾನ್ಯ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ಶ್ರೀ ಮಂಜುನಾಥ್ ಎಸ್ ಕೆ, ಉಡುಪಿ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ಪಿ ಜಗನ್ನಾಥ್ ಶೆಟ್ಟಿ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ಭಾಸ್ಕರ್ ದೇವಸ್ಯ ರವರು ಮತ್ತು ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಗುರುಪ್ರಸಾದ್ ಬಂಗೇರ ರವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿಜಯ್ ಬಿ ಎಸ್ ಮತ್ತು ನಂದನ್ ಬಿ ಎಸ್. ರವರು ಹಾಗೂ ಸಂಯುಕ್ತ ಸಹಕಾರಿ ಸಿಬ್ಬಂದಿಗಳಾದ ಶ್ರೀ ರೋಹಿತ್ ಭೊಂಗಾಳೆ ಮತ್ತು ಶ್ರೀ ಅರುಣ್ ಕುಮಾರ್ ಎಸ್ ರವರು ಉಪಸ್ಥಿತರಿದ್ದರು. ಸಭೆಯಲ್ಲಿ ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿದಂತೆ ಸಹಕಾರಿಗಳಿಂದ ಸಾಕಷ್ಟು ಪ್ರಶ್ನೆಗಳು, ಸಲಹೆ, ಅಭಿಪ್ರಾಯವನ್ನು ಸ್ವೀಕರಿಸಲಾಯಿತು. ಸಹಕಾರಿಗಳು ಕೇಳಿದ ಎಲ್ಲಾ ಪ್ರಶ್ನೆಗಳಿಗೆ, ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಉತ್ತರಿಸಿದರು. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ ಒಟ್ಟಾರೆ 170 ಜನ ಪ್ರತಿನಿಧಿಗಳು ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಸಭೆಯನ್ನು ಯಶಸ್ವಿಗೊಳಿಸಿದರು.

## ಪ್ರವರ್ತಕರ ಸಭೆ



**ಮೈಸೂರು** : ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ಅಂಗವಾಗಿ ನಂಜನಗೂಡು ತಾಲ್ಲೂಕಿನಲ್ಲಿ ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸುವ ಕುರಿತು ತಾಲ್ಲೂಕು ಮಟ್ಟದ ಪ್ರವರ್ತಕರ ಸಭೆಯನ್ನು ದಿನಾಂಕ 23 ಸೆಪ್ಟೆಂಬರ್ 2025ರ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಶ್ರೀ ಶರಣ ಸಂಗಮ ಮಠ, ದೇವೀರಮ್ಮನಹಳ್ಳಿ ಬಡಾವಣೆ, ನಂಜನಗೂಡು ಇಲ್ಲಿ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಶಿವಕುಮಾರ ಸ್ವಾಮಿಜಿ, ಶ್ರೀ ಶರಣ ಸಂಗಮ ಮಠ ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್. ಕೆ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಂಜನಗೂಡು ತಾಲ್ಲೂಕಿನ ವೀರಶೈವ ಮಹಾಸಭಾ ಮಾನ್ಯ ಅಧ್ಯಕ್ಷರಾದ ಶ್ರೀ ಕೆಂಪಣ್ಣ ರವರು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ರವರು ಹಾಗೂ ವಂದನಾರ್ಪಣೆಯನ್ನು ಶ್ರೀ ಗುರುಮಲ್ಲೇಶ್ವರ ವಿವಿದೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ಸಂಘ ನಿ., ಇದರ ಮಾನ್ಯ ಅಧ್ಯಕ್ಷರಾದ ಶ್ರೀಮತಿ ನಂದಿನಿ. ಹೆಚ್.ಎಸ್. ರವರು ನೆರವೇರಿಸಿದರು. ನಂತರ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ಮಾಹಿತಿಯನ್ನು ನೀಡಿದರು. ಸದರಿ ಕಾರ್ಯಕ್ರಮದಲ್ಲಿ ನಂಜನಗೂಡು ತಾಲ್ಲೂಕಿನ ಮುಖಂಡರು, ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸಲು ಆಸಕ್ತರು ಭಾಗವಹಿಸಿ ಒಟ್ಟು 53 ಜನ ಪ್ರತಿನಿಧಿಗಳು ಮಾಹಿತಿಯನ್ನು ಪಡೆದರು.

**ಚಿಕ್ಕಮಗಳೂರು** : ದಿನಾಂಕ 19.09.2025ರ ಶುಕ್ರವಾರದಂದು ಹೋಟೆಲ್ ಲೋಟಸ್ ಚಿಕ್ಕಮಗಳೂರು ಇಲ್ಲಿ ನಡೆದ ನೂತನ ಸೌಹಾರ್ದ ಸಹಕಾರಿಯ ಪ್ರವರ್ತಕರ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಅಶೋಕ್ ಜಿ ಸಭೆಯಲ್ಲಿ ಹಾಜರಿದ್ದ ಮುಖ್ಯ ಪ್ರವರ್ತಕರಾದ ಶ್ರೀ ಸಿ.ಎಸ್ ದಯಾನಂದ್ ಹಾಗೂ ಇತರರಿಗೆ ಸೌಹಾರ್ದ ಸಹಕಾರಿಯ ನೋಂದಣಿ ಹಾಗೂ ಸೌಹಾರ್ದ ಸಹಕಾರಿಯ ಚಳುವಳಿಯ ಕುರಿತು ಅಗತ್ಯವಾದ ಮಾಹಿತಿಯನ್ನು ನೀಡಲಾಯಿತು.

# ಸಂಯುಕ್ತ ಸಹಕಾರಿಯ ಅಧಿಕಾರಿಗಳ ತರಬೇತಿ ಹಾಗೂ ಪ್ರಗತಿ ಪರಿಶೀಲನಾ ಸಭೆ

## ಸಹಕಾರ ಕ್ಷೇತ್ರದಲ್ಲಿ ಸರಕಾರದ ಪಾತ್ರ ಕಡಿಮೆ ಇರಬೇಕು.

**- ಡಾ॥ ಎನ್. ನಾಗಾಂಬಿಕಾ ದೇವಿ ಭಾ.ಆ.ಸೇ (ನಿ), ಮಾನ್ಯ ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ.**



**ಬೆಂಗಳೂರು** : ಸಂಯುಕ್ತ ಸಹಕಾರಿ ರಾಜ್ಯದ ಎಲ್ಲ ಜಿಲ್ಲೆಗಳ ಜಿಲ್ಲಾ ಸೌಹಾರ್ದ ಸಹಕಾರಿ ಅಭಿವೃದ್ಧಿ ಅಧಿಕಾರಿಗಳಿಗಾಗಿ, ಪ್ರಾಂತೀಯ ಅಧಿಕಾರಿಗಳಿಗಾಗಿ, ಕೇಂದ್ರ ಕಛೇರಿಯ ವಿಭಾಗ ಮುಖ್ಯಸ್ಥರುಗಳಿಗಾಗಿ ದಿನಾಂಕ 26.09.2025 ಮತ್ತು 27.09.2025ರವರೆಗೆ ಎರಡು ದಿನಗಳ ವರೆಗೆ ತರಬೇತಿ ಹಾಗೂ ಪ್ರಗತಿ ಪರಿಶೀನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.



ಈ ಕಾರ್ಯಕ್ರಮವನ್ನು ರಾಜ್ಯದ ಸಹಕಾರಿ ಚುನಾವಣಾ ಪ್ರಾಧಿಕಾರದ ಆಯುಕ್ತೆ ಡಾ. ಎನ್ ನಾಗಾಂಬಿಕಾ ದೇವಿ ರವರು ಉದ್ಘಾಟಿಸಿ ಮಾತನಾಡುತ್ತ ಸಹಕಾರ ಕ್ಷೇತ್ರದ ಆಡಳಿತ ವ್ಯವಸ್ಥೆಯಲ್ಲಿ ಸರಕಾರದ ಪಾತ್ರ ಕಡಿಮೆಯಾಗಿರಬೇಕು ಇದು ಸೇವಾ ಕ್ಷೇತ್ರ ಜನರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಸಹಕಾರ ಸಂಸ್ಥೆಗಳಿಗೆ ಹೆಚ್ಚಿನ ಸ್ವಾತಂತ್ರ್ಯದ ಅವಶ್ಯಕತೆ ಇದೆ. ಗ್ರಾಮೀಣ ಜನರು ಅವರಿರುವಲ್ಲಿಯೇ ಉದ್ಯೋಗಗಳನ್ನು ಸೃಷ್ಟಿಮಾಡಿ ಅವರಿಗೆ ಉದ್ಯೋಗ ಒದಗಿಸಬೇಕು. ಕರ್ನಾಟಕ ಸಿರಿವಂತ ರಾಜ್ಯ ಇಲ್ಲಿರುವ ಸ್ವಾಭಾವಿಕ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಬೇಕು. ಉತ್ಪಾದನಾ ಶಕ್ತಿ ಹೆಚ್ಚಿಸಲು ಸಾಧ್ಯವಾಗುತ್ತದೆ ಕರ್ನಾಟಕ ಸಂಪದ್ಭರಿತ ರಾಜ್ಯವಾಗಬೇಕು ಆರ್ಥಿಕ ಅಭಿವೃದ್ಧಿಯ ಹರಿಕಾರರು ಸಹಕಾರಿ ಕ್ಷೇತ್ರವಾಗಬೇಕು. ಖಾಸಗಿ ಕ್ಷೇತ್ರಕ್ಕೆ ಪೈಪೋಟಿ ನೀಡುವ ವ್ಯವಸ್ಥೆ ಸಹಕಾರಿಗಳದ್ದು ಮತ್ತು ಪ್ರಜಾಪ್ರಭುತ್ವದ್ದಾಗಬೇಕೆಂದು ತಿಳಿಸಿದರು.

ಮುಂದುರಿದು ಮಾತನಾಡಿದ ಡಾ. ಎನ್ ನಾಗಾಂಬಿಕಾ ದೇವಿ ರವರು ಸಂಯುಕ್ತ ಸಹಕಾರಿಯ ಅಧಿಕಾರಿಗಳು ಒಬ್ಬ ಮಾದರಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಬೇಕು. ಸಹಕಾರಿ ಸಂಸ್ಥೆಗಳಿಗೆ ನ್ಯಾಯಯುತ ಹಾಗೂ ಮುಕ್ತ ಚುನಾವಣೆಗಳು ನಡೆಯಬೇಕು. ಸದಸ್ಯರ ಅಥವಾ ಮತದಾರರ ಹಿತ ರಕ್ಷಣೆ ಆದ್ಯತೆ. ಚುನಾವಣೆಗಳು ಪಾರದರ್ಶಕವಾಗರಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರರವರು ಮಾತನಾಡಿ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸೌಹಾರ್ದ ಸಹಕಾರಿಯ ಸಮಗ್ರ ಮಾಹಿತಿ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಸಂಪೂರ್ಣ ಮಾಹಿತಿ ಹೊಂದಿದವರಾಗಬೇಕು ಕಾರ್ಪೋರೇಟ್ ಮಾದರಿ ಆಡಳಿತ ನೀಡಬೇಕು. ಉತ್ತಮ ಸಂವಹನ, ಸಾರ್ವಜನಿಕ ಸಂಪರ್ಕ ಸಮಯ ಪ್ರಜ್ಞೆ, ವಿಷಯಗಳ ಬಗ್ಗೆ ವರದಿ ಮಾಡುವುದು, ಆಡಳಿತ ಮಂಡಳಿಯ ಅಪೇಕ್ಷಯಂತೆ ತೀರ್ಮಾನಗಳನ್ನು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸುವ ಮನೋಭಾವ ಹೊಂದಿರಬೇಕು. ವಿಭಾಗವಾರು ಸವಾಲುಗಳಿವೆ ಸವಾಲುಗಳನ್ನು ಸಕಾರಾತ್ಮವಾಗಿ ಸ್ಪಂದಿಸಬೇಕು. ಪ್ರಸಕ್ತ ಇರುವ ವ್ಯವಸ್ಥೆಗೆ ಹೊಂದಿಕೊಂಡು ಕಾರ್ಯನಿರ್ವಹಿಸಬೇಕೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಪ್ರಾರ್ಥನೆಯನ್ನು ಶ್ರೀಮತಿ ದಿವ್ಯರವರು ನೆರವೇರಿಸಿದ ನಂತರ ಸ್ವಾಗತವನ್ನು ಶ್ರೀಯುತ ರಾಜಶೇಖರರವರು ನೆರವೇರಿಸಿದರು

ಪ್ರಾಸ್ತಾವಿಕವಾಗಿ ಮಾತನಾಡಿದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿಯ ನೇತೃತ್ವವನ್ನು ಸಂಯುಕ್ತ ಸಹಕಾರಿಗೆ ವಹಿಸಲಾಗಿದೆ. ರಾಜ್ಯದಲ್ಲಿ ಪ್ರಸ್ತುತ 6500ಕ್ಕೂ ಸೌಹಾರ್ದ ಸಹಕಾರಿಗಳಿವೆ. ಈ ವ್ಯವಸ್ಥೆಯಲ್ಲಿ ಶಾಸನಾತ್ಮಕ ಕಾರ್ಯನಿರ್ವಹಿಸವುದರ ಜೊತೆಗೆ ಶಿಕ್ಷಣ ತರಬೇತಿ ಹಾಗೂ ಪ್ರಚಾರ ಕಾರ್ಯಗಳನ್ನು ಸಂಯುಕ್ತ ಸಹಕಾರಿ ಯಶಸ್ವಿಯಾಗಿ ನಡೆಸಿಕೊಂಡು ಬಂದಿದೆ. ಸೌಹಾರ್ದ ಸಹಕಾರಿ ಕಾಯ್ದೆಗೆ ಹಾಗೂ ಸೌಹಾರ್ದ ಸಹಕಾರಿ ಚಳುವಳಿಗೆ ಈಗ 25 ವರ್ಷಗಳು ತುಂಬಿವೆ. ರಜತ ಮಹೋತ್ಸವ ಆಚರಣೆಗಳು ಪ್ರಾರಂಭವಾಗಿವೆ. ಈ ಹಂತದಲ್ಲಿ ಸಂಯುಕ್ತ ಸಹಕಾರಿ ಅಧಿಕಾರಿಗಳು ಹೆಚ್ಚು ಕ್ರೀಯಾಶೀಲರಾಗಿರಬೇಕು ಮತ್ತು ಪರಿಣಾಮಕಾರಿಯಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ರಾಯಭಾರಿಗಳಾಗಿ ಕಾರ್ಯನಿರ್ವಹಿಸುವಂತಾಗಲು ಈ ತರಬೇತಿ. ಹಾಗೂ ಅವರುಗಳು ಇದುವರೆಗೆ ನಿರ್ವಹಿಸಿದ ಕಾರ್ಯಗಳ ಪರಿಶೀಲನೆ ಮತ್ತು ಮುಂಬರುವ ಕಾರ್ಯಕ್ರಮಗಳ ಬಗ್ಗೆ ಮಾರ್ಗದರ್ಶನ ಮಾಡುವ ಸಭೆ ಇದಾಗಿದೆ ಎಂದು ತಿಳಿಸಿದರು.

ತರಬೇತಿ ಅಧಿಕಾರಿ ಶ್ರೀ ಬಾಬು ಪಠಾಣರವರು ವಂದನಾರ್ಪಣೆ ಮಾಡಿದರು.

## ಸಹಕಾರ ಸಂಘಗಳ ಚುನಾವಣೆಗಳು ಕ್ರಮಬದ್ಧವಾಗಿರಬೇಕು : ಶ್ರೀ ನಂಜುಂಡೇಗೌಡ ಮಾನ್ಯ ಕಾರ್ಯದರ್ಶಿಗಳು ಹಾಗೂ ಸಹಕಾರ ಸಂಘಗಳ ಅಪರ ನಿಬಂಧಕರು



ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಉಪನ್ಯಾಸ ನೀಡಿದ ಶ್ರೀ ನಂಜುಂಡೇಗೌಡ ಮಾನ್ಯ ಕಾರ್ಯದರ್ಶಿಗಳು ಹಾಗೂ ಸಹಕಾರ ಸಂಘಗಳ ಅಪರ ನಿಬಂಧಕರು ಇವರು ಮಾತನಾಡಿ ಸಹಕಾರ ಚುನಾವಣಾ ಪ್ರಾಧಿಕಾರದ ಆಶಯದಂತೆ ಸಹಕಾರ ಸಂಘಗಳ ಚುನಾವಣೆಗಳು ಕ್ರಮಬದ್ಧವಾಗಿರಬೇಕು. 97ನೇ ಸಂವಿಧಾನ ತಿದ್ದುಪಡಿಯಂತೆ ಈ ಪ್ರಾಧಿಕಾರದ ರಚನೆಯಾಗಿದೆ. ಮುಕ್ತ ವಾತಾವರಣದಲ್ಲಿ ಚುನಾವಣೆಗಳನ್ನು ನಡೆಸಿಕೊಡುವುದು ಚುನಾವಣಾ ಪ್ರಾಧಿಕಾರದ ಕಾರ್ಯವಾಗಿದೆ. ಈ ಚುನಾವಣಾ ಪ್ರಕ್ರೀಯೆಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಗಳ ಕರ್ತವ್ಯ ಹಾಗೂ ಜವಾಬ್ದಾರಿಗಳು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತವೆ ಎಂದು ತಿಳಿಸುತ್ತ ಸೌಹಾರ್ದ ಸಹಕಾರಿ ಕಾಯ್ದೆಗನುಗುಣವಾಗಿ ಚುನಾವಣಾ ಪ್ರಕ್ರೀಯೆಗಳನ್ನು ಸವಿಸ್ತಾರವಾಗಿ ತಿಳಿಸಿದರು.

### ನಿರ್ದೇಶಕರುಗಳ ಉಪನ್ಯಾಸಗಳು

ಈ ಎರಡು ದಿನದ ಕಾರ್ಯಕ್ರಮದ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಜಗದೀಶ ಕವಟಗಿಮಠರವರು, ಶ್ರೀ ಎಸ್.ಕೆ ಮಂಜುನಾಥ ರವರು, ಉಪಾಧ್ಯಕ್ಷರಾದ ಶ್ರೀ ಎ. ಆರ್ ಪ್ರಸನ್ನಕುಮಾರರವರು ಮಾಜಿ ಅಧ್ಯಕ್ಷರಾದ ಬಿ. ಹೆಚ್. ಕೃಷ್ಣಾರೆಡ್ಡಿಯವರು ವಿವಿಧ ವಿಷಯಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ಅಧಿಕಾರಿಗಳ ಜೊತೆಗೆ ಹಂಚಿಕೊಂಡರು.

---



## ಸಹಕಾರಿ ಅಭಿವೃದ್ಧಿ ಅಧಿಕಾರಿಗಳು ಸಹಕಾರಿಗಳ ಗೆಳೆಯ, ತತ್ವಜ್ಞಾನಿ ಹಾಗೂ ಮಾರ್ಗದರ್ಶಿ (ಫ್ರೆಂಡ ಫಿಲಾಸಾಫರ ಮತ್ತು ಗೈಡ್) : ಶ್ರೀ ಜಗದೀಶ ಕವಟಗಿಮಠ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರೂ ಹಾಲಿ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ಮಾತನಾಡುತ್ತ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸೌಹಾರ್ದ ಸಹಕಾರಿಗಳ ಆತ್ಮೀಯ ಗೆಳೆಯನಂತೆ, ತತ್ವಜ್ಞಾನಿಯಂತೆ ಹಾಗೂ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸಬೇಕು. ಸಹಕಾರಿಗಳಿಗೆ ಅವಶ್ಯವಿರುವ ಸೇವೆಗಳನ್ನು ಒದಗಿಸಬೇಕು (ನೀಡ್ ಬೆಸ್ಟ್ ಸರ್ವಿಸ್) ನಾನು ಅಧಿಕಾರಿ ಎಂಬ ಅಹಂ ಇರಕೊಡದು. ಕ್ಷೇತ್ರದ ಬಗ್ಗೆ ಹೆಚ್ಚಿನ ಜ್ಞಾನವನ್ನು ನಿರಂತರ ಸಂಪಾದಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರಬೇಕು. ಸೌಹಾರ್ದ ಸಹಕಾ–ರಿಗಳಿಗೆ ಭೇಟಿ ನೀಡಿ ಅವರುಗಳ ಕಾರ್ಯಪರಿಶೀಲನೆ ಮಾಡಬೇಕು ಸಮಸ್ಯಾತ್ಮಕ ಸಂಸ್ಥೆಗಳು ಹುಟ್ಟಿಕೊಳ್ಳದಂತೆ ಕಾರ್ಯನಿರ್ವಹಿಸಬೇಕು. ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳ ಅಥವಾ ಮುಖ್ಯ ಕಾರ್ಯನಿರ್ವಾಹಕರ ದಾಕ್ಷಿಣ್ಯಗಳಿಗೆ ಒಳಗಾಗಬಾರದು. ನಿರ್ಭಿತಿಯಿಂದ ಇರಬೇಕು ಆದರೆ ಸ್ನೇಹಮಯಿಯಾಗಿರುವುದು ಅವಶ್ಯಕ ನಿಮ್ಮ ವ್ಯಾಪ್ತಿಯ ಸಹಕಾರಿಗಳ ಸಂಪೂರ್ಣ ವಿವರಗಳನ್ನು ಹೊಂದಿರಬೇಕು ಚುನಾವಣಾ ವಿವರಗಳನ್ನು ಹೊಂದಿರಬೇಕು. ಲೆಕ್ಕ ಪರಿಶೋಧನಾ ವರದಿಗಳನ್ನು ರಿವ್ಯೂ ಮಾಡಬೇಕು. ಲಾಭ ವಿಲೇವಾರಿಗೆ ಗೈಡ ಮಾಡಿ. ಹೂಡಿಕೆಗಳ ಬಗ್ಗೆ ಗೈಡ್ ಮಾಡಿ. ಎನ್.ಪಿ.ಎ ಆಗದ ಹಾಗೆ ಗೈಡ್ ಮಾಡಿ ನಿಮ್ಮ ವ್ಯಾಪ್ತಿಯ ಸಹಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕರಿಗೆ ತರಬೇತಿ ನೀಡಿ. ಎಂದು ತಿಳಿಸುತ್ತ ಸೌಹಾರ್ದ ಸಹಕಾರಿ ಅಧಿಕಾರಿಗಳು ಸಂಸ್ಥೆಗೆ ಭೇಟಿ ನೀಡಿದಾಗ ಯಾವ ಯಾವ ದಾಖಲೆಗಳನ್ನು ಪರಿಶೀಲಿಸಬೇಕು ಎಂಬ ವಿವರಗಳನ್ನು ತಿಳಿಸಿದರು.

---

## ಶಿಸ್ತಿಗೆ ವಿದ್ಯೆ ಮಾನದಂಡವಲ್ಲ : ಶ್ರೀ ಎ.ಆರ್ ಪ್ರಸನ್ನಕುಮಾರ, ಮಾನ್ಯ ಉಪಾಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಪ್ರಸನ್ನಕುಮಾರರವರು ಅವರ ಅವಧಿಯಲ್ಲಿ ಮಾತನಾಡಿ ರೈತರು ಬೆಳಿಗ್ಗೆ 4–30 ರಿಂದ 5–00 ಘಂಟೆಗೆ ಎದ್ದು ಹೊಲದ ಹಾಗೂ ದನಕರುಗಳ ಕೆಲಸ ನಿರ್ವಹಿಸುತ್ತಾರೆ ಅತ್ಯಂತ ಶಿಸ್ತಿನಿಂದ ಎಲ್ಲವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರೆ ಮಾತ್ರ ಅವರ ಜೀವನ ಹಸ್ತನಾಗಿರುತ್ತದೆ. ಆದರೆ ಪಟ್ಟಣದವರು ಹಾಗೂ ಉತ್ತಮ ಬಟ್ಟೆಗಳನ್ನು ಅವರು ಹಾಕುವುದಿಲ್ಲ ಅವರು ಹೆಚ್ಚು ಓದಿರುವುದು ಇಲ್ಲ. ಆದ್ದರಿಂದ ಶಿಸ್ತಿಗೆ ವಿದ್ಯೆ ಮಾನದಂಡವಲ್ಲ. ಮಹಾತ್ಮಾ ಗಾಂಧಿ, ಸರ್.ಎಮ್ ವಿಶ್ವೇಶ್ವರಯ್ಯನವರ ಉದಾಹರಣೆಗಳನ್ನು ನೀಡಿದ ಶ್ರೀಯುತರು ಅವರ ಬಾಳಿನಲ್ಲಿ ಶಿಸ್ತು, ಸಂಯಮ, ಸಮಯ ನಿರ್ವಹಣೆ ಹಾಗೂ ಅವರದೇ ಆದ ಮಾದರಿ ಜೀವನ ಶೈಲಿಯಲ್ಲಿ ಕಾರ್ಯನಿರ್ಹಣೆ ನಮಗೆಲ್ಲ ಮಾದರಿ. ನಮ್ಮ ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಸ್ವಚ್ಛತೆಗೆ ಸಮಯ ಪಾಲನೆಗೆ ಪ್ರಾಮಾಣಿಕತೆಗೆ, ಪಾರದರ್ಶಕತೆಗೆ ಆದ್ಯತೆ ಅವಶ್ಯಕ. ಉತ್ತಮ ವೃತ್ತಿ ಸಂಸ್ಕೃತಿಯನ್ನು ರೂಢಿಸಿಕಳ್ಳಬೇಕು. ನಮ್ಮದೇ ಆದ ಚೌಕಟ್ಟು ನಮಗೆ ಬೇಕು. ನಮ್ಮ ಉಡಿಗೆ ತೊಡಿಗೆ ವೇಷ ಭೂಷಣ, ಮಾತು, ನಡೆ ನುಡಿ ಕಾರ್ಯ ವೈಖರಿ ಎಲ್ಲವೂ ಇನ್ನೊಬ್ಬರು ಅನುಕರಣಿಯವಾಗುವಂತೆ ಇನ್ನೊಬ್ಬರಿಗೆ ಮಾದರಿಯಾಗಿರಬೇಕು ಎಂದು ತಿಳಿಸಿದರು. ನಮಗೆ ನಾವೇ ಗುರು ಆಗಬೇಕು. ಆರ್ಥಿಕ ಶಿಸ್ತು ಕೂಡ ಆದ್ಯತೆಯಿರಬೇಕು ಎಂದು ತಿಳಿಸಿದರು

## ಸಂಯುಕ್ತ ಸಹಕಾರಿ ಅಧಿಕಾರಿಗಳ ಬ್ರಾಂಡ್ ಅಂಬಾಸಿಡರ್ ಅಂತೆ ಕಾರ್ಯನಿರ್ವಹಿಸಬೇಕು : ಶ್ರೀ ಮಂಜುನಾಥ್ ಎಸ್. ಕೆ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್. ಕೆ ಮಂಜುನಾಥ ರವರು ಮಾತನಾಡಿ ಕಳೆದ 25 ವರ್ಷಗಳಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಂಡಿದ್ದೇವೆ. ಈ ಸೌಹಾರ್ದ ಸಹಕಾರಿ ಚಳುವಳಿ ಅಭಿವೃದ್ಧಿಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಮೂಲ ಕಾರಣ. ವಿಶ್ವವೇ ಒಂದು ಕುಟುಂಬ ಬದಲಾವಣೆ ಜಗದ ನಿಯಮ ವೇಗವಾಗಿ ಓಡುತ್ತಿರುವ ಈ ಪ್ರಪಂಚದಲ್ಲಿ ನನ್ನ ಪಾತ್ರವೇನು ಎಂಬುದನ್ನು ನಿರ್ಣಹಿಸಿಕೊಂಡು ವೃತ್ತಿಪರನಾಗಿ ಪಾರದರ್ಶಕನಾಗಿ ನೈಪುಣ್ಯತೆಯಿಂದ ಕಾರ್ಯನಿರ್ವಹಿಸುವ ಮುಖ್ಯವಾಹಿನಿಯ ಮುಖ್ಯ ಅಧಿಕಾರಿ ಮುಂಚೂಣಿಯ ಅಧಿಕಾರಿಯಾಗಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಕಾರ್ಯನಿರ್ವಹಿಸುತ್ತಿರುವುದು ಸಂತೋಷದ ವಿಷಯ. ಈ ಅಧಿಕಾರಿಗಳಿಗೆ ಸಕಾರಾತ್ಮಕ ಮನೋಭಾವ ಹಾಗೂ ಅವರ ಕೆಲಸದಲ್ಲಿ ತೃಪ್ತಿ ಇರಬೇಕು. ಸಾಮಾನ್ಯತೆಯಿಂದ ಅಸಾಮಾನ್ಯತೆ ಕಡೆಗೆ ಕೊಂಡೊಯುವ ಸಾಮಾರ್ಥ್ಯ ಬೆಳೆಸಿಕೊಳ್ಳಬೇಕು. ಪ್ರತಿ ಜಿಲ್ಲೆಯಲ್ಲಿ ಒಂದು ಉತ್ತಮ ಸಹಕಾರಿ ವಲಯವನ್ನು ಸೃಷ್ಟಿಸಬೇಕು ಎಂದು ಹೇಳಿದರು.



## ಸೌಹಾರ್ದ ಸಹಕಾರಿ ಅಧಿಕಾರಿಗಳಿಗೆ ಕ್ಷೇತ್ರದಲ್ಲಿ ಸವಾಲುಗಳು ಬಹಳ : ಎದುರಿಸಿ ಯಶಸ್ವಿಯಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಿ : ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಸೌಹಾರ್ದ ಸಹಕಾರಿ ಕ್ಷೇತ್ರ ಪ್ರಾರಂಭದ ದಿನಗಳಿಂದಲೂ ಹಲವಾರು ಸಮಸ್ಯೆಗಳನ್ನು ಎದುರಿಸುತ್ತ ಸವಾಲುಗಳನ್ನು ಸ್ವೀಕರಿಸುತ್ತ ಯಶಸ್ವಿಯಾಗಿ ಬೆಳೆಯುತ್ತ ನಡೆದಿದೆ. ಈ ಬೆಳವಣಿಗೆಗೆ ಸಂಯುಕ್ತ ಸಹಕಾರಿಯ ಅಧಿಕಾರಿಗಳೇ ಪ್ರಮುಖ ಕಾರಣ ಎಂದು ಎಲ್ಲ ಅಧಿಕಾರಿಗಳನ್ನು ಅಭಿನಂದಿಸಿ ಈ ರೀತಿಯ ಸವಾಲುಗಳನ್ನು ಎದುರಿಸಿ ಮುನ್ನಡೆಯುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಿ ಅದಕ್ಕಾಗಿ ನಿರಂತರ ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿಸಿಕೊಳ್ಳಿ. ಸಂಯುಕ್ತ ಸಹಕಾರಿ ಪ್ರಾರಂಭದಿಂದಲೂ ಭ್ರಷ್ಟಾಚಾರ ಹಾಗೂ ಹೆಣ್ಣು ಮಕ್ಕಳ ಜೊತೆಗೆ ಅಸಭ್ಯ ವರ್ತನೆಗಳನ್ನು ಸಹಿಸುವುದಿಲ್ಲ ಎಂಬುದನ್ನು ಜ್ಞಾಪಿಸಿ ಇತ್ತೀಚಿಗೆ ಸರಕಾರ ಸೌಹಾರ್ದ ಸಹಕಾರಿ ಕಾಯ್ದೆಗೆ ತಂದಿರುವ ತಿದ್ದುಪಡಿಗಳು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಿಲ್ಲ. ಸೌಹಾರ್ದ ಸಹಕಾರಿಗಳಿಗೆ ಬೇಸರವಾಗಿದೆ. ಅನೇಕರು ಈ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಮುಂದುವರೆಯಲು ಹಿಂದೇಟು ಹಾಕುತ್ತಿದ್ದಾರೆ. ಅವರಿಗೆಲ್ಲ ಧೈರ್ಯ ತುಂಬುವ ಕೆಲಸವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಮಾಡಬೇಕು ರಾಜ್ಯದ ಸೌಹಾರ್ದ ಸಹಕಾರಿಗಳು ತಿದ್ದುಪಡಿ ವಿಷಯದಲ್ಲಿ ಹಮ್ಮಿಕೊಳ್ಳುವ ಹೋರಾಟದಲ್ಲಿ ಸೌಹಾರ್ದ ಸಹಕಾರಿಗಳು ಭಾಗವಹಿಸುವ ಮಾನಸಿಕತೆಯನ್ನು ಬೆಳೆಸಿ ಎಂದು ತಿಳಿಸಿದರು.

ನಂತರ ಶ್ರೀಯುತರು ಸುಸ್ಥಿರ ಅಭಿವೃದ್ಧಿಯಲ್ಲಿ ಸಹಕಾರಿ ಕ್ಷೇತ್ರದ ಪಾತ್ರದ ಕುರಿತಾಗಿ ಸವಿಸ್ತಾರವಾಗಿ ಉಪನ್ಯಾಸ ನೀಡುತ್ತ ಈ ಸುಸ್ಥಿರ ಅಭಿವೃದ್ಧಿಯಲ್ಲಿ ಆರ್ಥಿಕ ಸುಸ್ಥಿರತೆ, ಪಾರದರ್ಶಕತೆ, ಗುಣಾತ್ಮಕ ಸಾಲ ನೀಡುವಿಕೆ ಉತ್ತಮ ಆಡಳಿತ ನಿರ್ವಹಣೆ, ಸಾಮಾಜಿಕ ಬದಲಾವಣೆ ಅಂದರೆ ಸಮಾಜದ ಉನ್ನತೀಕರಣವಾಗಬೇಕು ಎಲ್ಲರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಯತ್ನವಾಗಬೇಕು ಪರಿಸರ ಸ್ನೇಹಿ ವಾತಾವರಣ ಕಲ್ಪಿಸಬೇಕು ಉತ್ತಮ ವಾತಾವರಣ ಕಲ್ಪಿಸಬೇಕು ಉತ್ತಮ ಪರಿಶ್ರಮದಿಂದ ಯಶಸ್ಸು ಲಭ್ಯವಾಗುತ್ತೆ.

ವಿಶ್ವಸಂಸ್ಥೆಯವರು 2015 ರಿಂದ 2030 ರ ಅವಧಿಯಲ್ಲಿ 17 ಸುಸ್ಥಿರ ಅಭಿವೃದ್ಧಿಯ ಗುರಿಯನ್ನು ನೀಡಿದ್ದಾರೆ. ಅವುಗಳ ಕಾರ್ಯನಿರ್ವಹಣೆಗೆ ಯೋಜನೆಗಳನ್ನು ನೀಡಿದ್ದಾರೆ. ಈ 17 ಗುರಿಗಳಲ್ಲಿ 10 ರಿಂದ 12 ಗುರಿಗಳನ್ನು ಸಹಕಾರ ಕ್ಷೇತ್ರದ ಮೂಲಕ ನಿರ್ವಹಿಸಲಾಗುತ್ತಿದೆ. ಸಹಕಾರ ಕ್ಷೇತ್ರದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಆದ್ದರಿಂದ ಸಹಕಾರ ಕ್ಷೇತ್ರವನ್ನು ಬಲಪಡಿಸುವುದು ಅಷ್ಟೆ ಮಹತ್ವದ್ದಾಗಿದೆ. 2030 ರ ಹೊತ್ತಿಗೆ ಈ 17 ಎಸ್.ಡಿ.ಜಿ ಗಳನ್ನು ಸಾಧಿಸಲು ಸಹಕಾರಿ ಕ್ಷೇತ್ರದಿಂದಲೂ ಅನೇಕ ಕ್ರೀಯಾಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗಳಿಸಲಾಗುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮದ ಜೊತೆಗೆ ಸಹಕಾರಿ ಅಭಿವೃದ್ಧಿ ಅಧಿಕಾರಿಗಳ ಹಾಗೂ ವಿಭಾಗೀಯ ಕಚೇರಿಗಳ ಮೂಲಕ ನಿರ್ವಹಿಸಿದ ಪ್ರಗತಿಯನ್ನು ಪರಿಶೀಲಿಸಲಾಯಿತು.

ಕೊನೆಯಲ್ಲಿ ಮಾತನಾಡಿದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ಈ ವರ್ಷವಾದರೆ 2026 ಸಂಯುಕ್ತ ಸಹಕಾರಿಯ ರಜತ ಮಹೋತ್ಸವಾಗಿದೆ. ಹೀಗಾಗೀ ಸಂಯುಕ್ತ ಸಹಕಾರಿಯ ಎಲ್ಲ ಅಧಿಕಾರಿಗಳು ಈ ವರ್ಷ ಹೆಚ್ಚೂ ಆಸಕ್ತಿಯಿಂದ ತಮಗೆ ನೀಡಿದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಕರೆ ನೀಡಿದರು. ಮುಂಬರುವ ದಿನಗಳಲ್ಲಿ ರಜತ ಮಹೋತ್ಸವದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅವುಗಳನ್ನು ಯಶಸ್ವಿಯಾಗಿ ನಿರ್ವಹಿಸಿ. ಸಂಯುಕ್ತ ಸಹಕಾರಿಯನ್ನು ಬೆಳೆಸಿ. ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಬೇಳಸಿ ನೀವೂ ಬೆಳೆಯಿರಿ ಎಂದು ತಿಳಿಸಿದರು.

## ಚುನಾವಣಾ ಪೂರ್ವ ಸಿದ್ಧತಾ ತರಬೇತಿ



**ಬೆಂಗಳೂರು :** ದಿನಾಂಕ 18.09.2025ರಂದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ. ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಚುನಾವಣಾ ಪೂರ್ವ ಸಿದ್ಧತಾ ತರಬೇತಿಯನ್ನು ಸೌಹಾರ್ದ ಸಹಕಾರಿ ಸೌಧ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಶ್ರೀ. ಪಿ. ಶಶಿಧರ್, ಮಾನ್ಯ ಉಪ ನಿಬಂಧಕರು, 4ನೇ ವಲಯ, ಬೆಂಗಳೂರು ಇವರು ನೆರವೇರಿಸಿದರು. ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ವಹಿಸಿದ್ದರು. ಅಧ್ಯಕ್ಷತೆಯನ್ನು ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡುರಾವ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು, ಶ್ರೀ ಮಂಜುನಾಥ್ ಎಸ್.ಕೆ ರವರು ಭಾಗವಹಿಸಿದ್ದರು. ಸಭೆಯ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ನಡೆಸಿಕೊಟ್ಟರು. ಸ್ವಾಗತವನ್ನು ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನಡೆಸಿಕೊಟ್ಟರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್. ರವರು ನೆರವೇರಿಸಿದರು. ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ಎಮ್. ರವರು ನೆರವೇರಿಸಿದರು. ಚುನಾವಣಾ ಪೂರ್ವ ಸಿದ್ಧತೆ ವಿಷಯದ ಕುರಿತು ಶ್ರೀ ಹೆಚ್.ಎಸ್. ನಾಗರಾಜಯ್ಯ, ಮಾನ್ಯ ಅಪರ ನಿಬಂಧಕರು (ನಿವೃತ್ತ), ಸಹಕಾರ ಇಲಾಖೆ, ಬೆಂಗಳೂರು ಇವರು ಮಾಹಿತಿ ನೀಡಿದರು. 58 ಸೌಹಾರ್ದ ಸಹಕಾರಿಗಳಿಂದ 77 ಜನರು ಭಾಗವಹಿಸಿದ್ದರು.

## ಸಹಕಾರ ಮತ್ತು ಯುವಕರು ಸಂವಾದ ಕಾರ್ಯಕ್ರಮ



**ರಾಯಚೂರು :** ದಿನಾಂಕ 25.09.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ರಾಯಚೂರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ದೇವದುರ್ಗ ತಾಲೂಕಿನ ಎಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಹಾಗೂ ಶ್ರೀ ಖೇಣೆದ ಮುರಿಗೆಪ್ಪ ಮಹಾವಿದ್ಯಾಲಯ ದೇವದುರ್ಗ ಇವರ ಸಂಯುಕ್ತಾಶ್ರಯದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವದ ಪ್ರಯುಕ್ತ ಸಹಕಾರ ಮತ್ತು ಯುವಕರು ಎಂಬ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಮಲ್ಲಮ್ಮ ಮಾನ್ಯ ಅಧ್ಯಕ್ಷರು, ಪುರಸಭೆ, ದೇವದುರ್ಗ ಇವರು ಉದ್ಘಾಟಿಸಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಬಾಬು ಅಲಿ ಕರಡಿಗುಡ್ಡ ತಾಲೂಕು ಅಧ್ಯಕ್ಷರು, ಕರ್ನಾಟಕ ಕಾರ್ಯನಿರತ ಪತ್ರಕರ್ತ ಸಂಘ ದೇವದುರ್ಗ ಶ್ರೀ ಬಸವರಾಜ ಯಟಗಲ್ ಮಾನ್ಯ ಆಡಳಿತಾಧಿಕಾರಿ, ಶ್ರೀ ಖೇಣೆದ ಮುರಿಗೆಪ್ಪ ಮಹಾವಿದ್ಯಾಲಯ ದೇವದುರ್ಗ, ಶ್ರೀ ವೆಂಕಟರಾಯ ಬೆನಕನ್ ಮಾನ್ಯ ಅಧ್ಯಕ್ಷರು, ಶ್ರೀ ಹೊರನಾಡು ಅನ್ನಪೂರ್ಣೇಶ್ವರಿ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ದೇವದುರ್ಗ ಇವರುಗಳು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಸಹಕಾರ ಕ್ಷೇತ್ರದ ಪರಿಚಯ, ಸಹಕಾರ ಸಚಿವಾಲಯ, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಎಂಬ ವಿಷಯದ ಕುರಿತು ಶ್ರೀ ನಟರಾಜ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ರಾಯಚೂರು ಜಿಲ್ಲೆ ಇವರು ಮಂಡಿಸಿದರು. ನಂತರ ಸಹಕಾರ ಸಂಘಗಳ ಬ್ಯಾಂಕುಗಳ ಕಾರ್ಯಚಟುವಟಿಕೆಗಳು ಎಂಬ ವಿಷಯದ ಕುರಿತು ಶ್ರೀ ಚಂದ್ರಕುಮಾರ ವಜ್ರಕಾಯ ಪತ್ತಿನ ಸೌಹಾರ್ದ ಸಹಕಾರಿ ನಿ., ದೇವದುರ್ಗ ಇವರು ವಿಷಯ ಮಂಡಿಸಿದರು. ಸಹಕಾರ ಕ್ಷೇತ್ರದ ಅನುಕೂಲತೆಗಳು, ಅವಕಾಶಗಳು ಎಂಬ ವಿಷಯದ ಎಂಬ ವಿಷಯದ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಮಂಡಿಸಿದರು. ನಂತರ ವಿದ್ಯಾರ್ಥಿಗಳಿಗೆ ಜೊತೆ ಸಂವಾದ ನಡೆಸಿ ನಂತರ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ನಿರೂಪಣೆ ಮತ್ತು ಸ್ವಾಗತವನ್ನು ನಟರಾಜರವರು ಮಾಡಿದರು. ಪ್ರಾಸ್ತವಿಕ ನುಡಿಯನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನುಡಿದರು. ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಆಚಿಜನೆಯ್ಯನವರು ನೆರವೆರಸಿದರು. ಒಟ್ಟು 150 ವಿದ್ಯಾರ್ಥಿಗಳು ಕಾರ್ಯಕ್ರಮದ ಪ್ರಯೋಜನೆ ಪಡೆದರು.



**ಯಾದಗಿರಿ :** ದಿನಾಂಕ 22.09.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಕಲಬುರಗಿ ಪ್ರಾಂತದ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಸೌಹಾರ್ದ ಸಹಕಾ–ರಿಗಳು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೊತ್ತರ ಅಧ್ಯಯನ ಕೇಂದ್ರ ಸುರಪುರ ಇವರ ಸಂಯುಕ್ತಾಶ್ರಯದಲ್ಲಿ "ಸಹಕಾರ ಮತ್ತು ಯುವಕರು" ಸಂವಾದ ಕಾರ್ಯಕ್ರಮ ವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಸುರಪುರದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಕಲಬುರಗಿ ಮತ್ತು ಯಾದಗಿರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಮಾನ್ಯ ಉಪಾಧ್ಯಕ್ಷರಾದ ಶ್ರೀ ಸುರೇಶ ಸಜ್ಜನರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಕಲಬುರಗಿ ವಿಶ್ವವಿದ್ಯಾಲಯದ ಮಾಜಿ ಸಿಂಡಿಕೆಟ್ ಸದಸ್ಯರಾದ ಶ್ರೀ ಗಂಗಾಧರ ನಾಯಕ್, ತಾಲೂಕು ನೇಕಾರ ಸೌಹಾರ್ದ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಚೆನ್ನಮಲ್ಲಿಕಾರ್ಜುನ ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಬಲಭೀಮರಾವ್ ದೇಸಾಯಿ ಯವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸುರಪುರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸರ್ಕಾರಿ ಪ್ರಥಮ ದರ್ಜೆಯ ಕಾಲೇಜಿನ ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗದವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಪವನ ರವರು ಉಪಸ್ಥಿತರಿದ್ದರು.



**ಕಂಪ್ಲಿ :** ದಿನಾಂಕ 09.09.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಹಾಗೂ ಕಂಪ್ಲಿ ತಾಲೂಕಿನ ಸೌಹಾರ್ದ ಸಹಕಾರಿಗಳು ಮತ್ತು ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಕಂಪ್ಲಿ ಇವರುಗಳ ಸಂಯುಕ್ತಾಶ್ರಯದಲ್ಲಿ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಕಾಲೇಜಿನಲ್ಲಿ ಯುವಜನ ಮತ್ತು ಸಹಕಾರ ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹನುಮಂತಯ್ಯ ಶೆಟ್ಟಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ವಿಶ್ವನಾಥ ಹಿರೇಮಠ ಮಾನ್ಯ ಅಧ್ಯಕ್ಷರು ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್ ನ., ಹೊಸಪೇಟೆ. ಇವರು ಆಗಮಿಸಿ ಸಹಕಾರ ಮತ್ತು ಸೌಹಾರ್ದ ಸಹಕಾರಿ ಚಳುವಳಿ ಹಾಗೂ ಯುವಕರಿಗೆ ಸಹಕಾರ ಕ್ಷೇತ್ರದಲ್ಲಿನ ಅವಕಾಶಗಳ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಪ್ರಾಚಾರ್ಯರಾದ ಶ್ರೀ ಶ್ರೀನಿವಾಸ ರೆಡ್ಡಿಯವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಸ್ವಾಗತವನ್ನು ಉಪನ್ಯಾಸಕರು ಹಾಗೂ ಐಕ್ಯೂಎಸಿ ಸಂಯೋಜಕರಾದ ಶ್ರೀ ಬಾಲಾಜಿ ಎಮ್.ಪಿ ನಡೆಸಿಕೊಟ್ಟರು. ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಸೂರ್ಯಕಾತ ರ್‍ಯಾಕಲೆಯವರು ನುಡಿದರು. ಪ್ರಾರ್ಥನೆಯನ್ನು ಕು. ಸಿಂಧು ರವರು ನಡೆಸಿಕೊಟ್ಟರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೀರಶಟ್ಟಿ ಕೆ ಯವರು ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಕಿರಿಯ ಸಹಾಯಕರಾದ ಶ್ರೀ ಶರಣಬಸವರವರು ನಡೆಸಿಕೊಟ್ಟರು. ಸಹಕಾರಿ ಚಳುವಳಿಯ ಉಗಮದ ಕುರಿತು ಅಯೋಜಿಸಿದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ವಿತರಿಸಲಾಯಿತು. ಪ್ರಥಮ ದರ್ಜೆ ಕಾಲೇಜಿನ ಕಲಾ ಮತ್ತು ವಾಣಿಜ್ಯ ವಿಭಾಗದ 150 ವಿದ್ಯಾರ್ಥಿಗಳು, ಉಪನ್ಯಾಸಕರು ಮತ್ತು ಸಿಬ್ಬಂದಿಗಳು ಸ್ಥಳೀಯ ಸಹಕಾರಿಯವರು ಉಪಸ್ಥಿತರಿದ್ದರು.



**ದಕ್ಷಿಣ ಕನ್ನಡ :** ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಯಾಗಿ 25 ವರ್ಷಗಳು ಆಗಿರುವ ರಜತ ಮಹೋತ್ಸವದ ಪ್ರಯುಕ್ತ ಮಂಗಳೂರಿನ ಶ್ರೀಶಾ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ವತಿಯಿಂದ ವಿಭಿನ್ನ ರೀತಿಯ ಸಮಾಜಮುಖಿ ಕಾರ್ಯಕ್ರಮಗಳನ್ನು ಮಂಗಳಾದೇವಿಯ ರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ ದಿನಾಂಕ 28.09.2025ರ ಭಾನುವಾರದಂದು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಜಿತಕಾಮಾನಂದಜಿ ಮಹಾರಾಜ್ ರವರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನಿರ್ದೇಶಕರಾದ ಮಂಜುನಾಥ ಎಸ್.ಕೆ. ಭಾರತಿ ಜಿ. ಭಟ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.

## ಆಡಳಿತ ಪರಿಣಿತಿ ತರಬೇತಿ



**ಚಾಮರಾಜನಗರ :** ದಿನಾಂಕ 23.09.2025 ರಂದು ಚಾಮರಾಜನಗರ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗಾಗಿ ಮಹಾಮನೆ ಸಭಾಂಗಣ ರೋಟರಿ ಶಾಲೆ ಹಿಂಭಾಗ ಬಿ ರಾಚಯ್ಯ ಜೋಡಿ ರಸ್ತೆ ಚಾಮರಾಜನಗರ ಜಿಲ್ಲೆ ಇಲ್ಲಿ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು ಈ ಕಾರ್ಯಕ್ರಮದ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಶ್ರೀ ಎಸ್ ಕೆ ಮಂಜುನಾಥ್ ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇವರು ವಹಿಸಿದ್ದರು ಈ ಕಾರ್ಯಕ್ರಮದಲ್ಲಿ ಶ್ರೀ ಗುರುಪ್ರಸಾದ್ ಬಂಗೇರ ಮಾನ್ಯ ಪ್ರಾಂತೀಯ ಅಧಿಕಾರಿ ಇವರು ಉಪಸ್ಥಿತರಿದ್ದರು. ಈ ತರಬೇತಿಯ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಗುರುಸ್ವಾಮಿ ಮಾನ್ಯ ನಿವೃತ್ತ ಅಪರ ನಿಬಂಧಕರು ಇವರು ಉಪಸ್ಥಿತರಿದ್ದರು.

ಈ ತರಬೇತಿಯ ಮೊದಲನೇ ಅವಧಿಯಲ್ಲಿ ಸೌಹಾರ್ದ ಸಹಕಾರಿಯ ಕ್ಷೇತ್ರ ಮತ್ತು ಸಹಕಾರಿಯ ನಾಯಕತ್ವದ ಕುರಿತು ಶ್ರೀ ಎಸ್ ಕೆ ಮಂಜುನಾಥ್ ಮಾನ್ಯ ನಿರ್ದೇಶಕರು ಉಪನ್ಯಾಸ ನೀಡಿದರು. ನಂತರ ಎರಡನೆಯ ಅವಧಿಯಲ್ಲಿ ಸಹಕಾರಿ ಸಂಸ್ಥೆಗಳ ಆರ್ಥಿಕ ಶಿಸ್ತು ನಿರ್ವಹಣೆಯಲ್ಲಿ ನಿರ್ದೇಶಕರುಗಳ ಹಕ್ಕುಗಳು ಮತ್ತು ಜವಾಬ್ದಾರಿಗಳ ಕುರಿತು ಶ್ರೀ ಗುರುಸ್ವಾಮಿ ಇವರು ಉಪನ್ಯಾಸ ನೀಡಿದರು.

ಈ ತರಬೇತಿಯಲ್ಲಿ ಚಾಮರಾಜನಗರ ಜಿಲ್ಲೆಯ 24 ಸೌಹಾರ್ದ ಸಹಕಾರಿಗಳಿಂದ 53 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಸ್ವಾಗತ, ನಿರೂಪಣೆ ಮತ್ತು ವಂದನಾರ್ಪಣೆಯನ್ನು ಶ್ರೀ ಬಲರಾಮ್ ಎನ್ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ನಡೆಸಿಕೊಟ್ಟರು.

## ಸಹಕಾರ ಮತ್ತು ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ (ಡಿ.ಸಿ.ಬಿ.ಎಂ) ಸಂಪರ್ಕ ವರ್ಗ



ಬೆಂಗಳೂರು ಕೇಂದ್ರ ಉದ್ಘಾಟನೆ



ಬೆಳಗಾವಿ ಕೇಂದ್ರ ಉದ್ಘಾಟನೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇವರೊಂದಿಗೆ ಜಂಟಿಯಾಗಿ ನಡೆಸುತ್ತಿರುವ ಡಿಸಿಬಿಎಂ ಕೋರ್ಸಿನ 3ನೇ ತಂಡದ ಸಂಪರ್ಕ ವರ್ಗಗಳು ದಿನಾಂಕ 28, 29 ಸೆಪ್ಟೆಂಬರ್ 2025 ರಂದು ಬೆಳಗಾವಿ ಹಾಗೂ ಬೆಂಗಳೂರು ಕೇಂದ್ರಗಳಲ್ಲಿ ಜರುಗಿದವು. ಬೆಂಗಳೂರು ಕೇಂದ್ರದಲ್ಲಿ 93 ಅಭ್ಯರ್ಥಿಗಳು ಭಾಗವಹಿಸಿದ್ದರು. ಬೆಂಗಳೂರು ಕೇಂದ್ರದ ಸಂಪರ್ಕ ವರ್ಗದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್ ಗುಂಡುರಾವ್ ರವರು ನೆರವೇರಿಸಿದರು. ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಪ್ರಾಸ್ತಾವಿಕ ನುಡಿಗಳು ಹೇಳಿದರು.

ಬೆಳಗಾವಿ ಕೇಂದ್ರದಲ್ಲಿ ತರಬೇತಿಯನ್ನು ಕಲಬುರಗಿ ವಿಭಾಗೀಯ ಅಧಿಕಾರಿಗಳಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಉದ್ಘಾಟಿಸಿದರು. ಬೆಳಗಾವಿ ಪ್ರಾಂತೀಯ ಅಧಿಕಾರಿ ಶ್ರೀ ಬಸವರಾಜ ಹೊಂಗಲ್ ರವರು ಪ್ರಾಸ್ತಾವಿಕ ನುಡಿಗಳನ್ನು ತಿಳಿಸಿದರು. ಬೆಳಗವಿ ಕೇಂದ್ರದಲ್ಲಿ 45 ಅಭ್ಯರ್ಥಿಗಳು ಭಾಗವಹಿಸಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಬೆಂಗಳೂರಿನಲ್ಲಿ ಶ್ರೀ ದರ್ಶನ್, ಶ್ರೀಮತಿ ಶೋಭ, ಶ್ರೀ ಶಶಿಧರ ಎಲೆ, ಹಾಗೂ ಶ್ರೀ ಹೆಚ್. ಎಸ್ ನಾಗರಾಜಯ್ಯ ರವರುಗಳು ಆಗಮಿಸಿದ್ದರು. ಬೆಳಗಾವಿಯಲ್ಲಿ ಶ್ರೀ ಸೂರ್ಯಕಾಂತ ರ್‍ಯಾಕಲೆ ಶ್ರೀ ಮಹಾಂತಪ್ಪ ಮತ್ತು ಡಾ. ಅಭಯಕುಮಾರ್ ಗಸ್ತಿ ರವರು ಆಗಮಿಸಿದ್ದರು.

# ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ



**ದಾವಣಗೆರೆ :** ದಿನಾಂಕ 15.09.2025ರಂದು ದಾವಣಗೆರೆ ಜಿಲ್ಲೆಯ ಭಾಗ–1ರ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ದಾವಣಗೆರೆ ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಆಯೋಜಿಸಲಾಗಿತ್ತು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್.ಪ್ರಭುದೇವ್ ರವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ವೇದಿಕೆಯಲ್ಲಿ ದಾವಣಗೆರೆ ಜಿಲ್ಲೆಯ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ರುದ್ರೇಗೌಡ ರವರು, ನಿರ್ದೇಶಕರಾದ ಶ್ರೀ ಸುರೇಶ್ ರವರು ಉಪಸ್ಥಿತರಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ಕಲಂ–34ರ ಮಾಹಿತಿ ಸಲ್ಲಿಕೆ, ಲೆಕ್ಕಪರಿಶೋಧನಾ ವರದಿ ಜರುಗಿಸುವುದು, ವಾರ್ಷಿಕ ಸಾಮಾನ್ಯ ಸಭೆ ನಡೆಸುವುದು, ಲಾಭಾಂಶ ವಿಂಗಡಣೆ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿ ವಿಷಯಗಳ ಕುರಿತು ಮಾಹಿತಿ ನೀಡಿದರು. 14 ಸೌಹಾರ್ದ ಸಹಕಾರಿಗಳಿಂದ 19 ಜನ ಭಾಗವಹಿಸಿದ್ದರು.

**ಮೈಸೂರು :** ದಿನಾಂಕ 30.08.2025ರಂದು ಉಡುಪಿ ಜಿಲ್ಲೆಯ ಆಯ್ದ ಸೌಹಾರ್ದ ಸಹಕಾರಿಗಳಿಗೆ ಸಿ.ಎಸ್.ಸಿ ಐಡಿ ಕ್ರಿಯೇಷನ್ ಸಂಬಂಧಿಸಿದಂತೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಆಯೋಜನೆ ಮಾಡಲಾಗಿತ್ತು ಸದರಿ ಸಭೆಯಲ್ಲಿ ಮೈಸೂರು ಸಿ.ಎಸ್.ಸಿ ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ಮಹೇಶ್ ರವರು ಭಾಗವಹಿಸಿ ಐಡಿ ಕ್ರಿಯೇಷನ್ ಮಾಡುವ ಕುರಿತು ಮಾಹಿತಿ ನೀಡುವುದರೊಂದಿಗೆ ಜಿಲ್ಲೆಯ ಏಳು ತಾಲ್ಲೂಕಿನ 7 CSC ಐ.ಡಿ ಗಳನ್ನು ಕ್ರಿಯೇಟ್ ಮಾಡಲಾಯಿತು. ಹಾಗೂ ಅಗ್ರಜ ಸೌಹಾರ್ದ ಸಹಕಾರಿ ಸಂಘ ಮತ್ತು ಶ್ರೀ ವೇಣುಗೋಪಾಲ ಕೃಷ್ಣ ಸೌಹಾರ್ದ ಸಹಕಾರಿ ನಿ ಇವುಗಳ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಲಾಯಿತು.

---



**ಮೈಸೂರು :** ಮೈಸೂರು ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ದಿನಾಂಕ 16.09.2025 ಮಂಗಳವಾರ ಬೆಳಿಗ್ಗೆ 10.00 ಗಂಟೆಗೆ ಹೋಟೆಲ್ ಶ್ರೀ ಗುರು ರೆಸಿಡೆನ್ಸಿ, ಜೆ.ಎಲ್.ಬಿ ರಸ್ತೆ, ದೇವರಾಜ ಮೊಹಲ್ಲಾ, ಮೆಟ್ರೋಪೋಲ್ ಸರ್ಕಲ್ ಹತ್ತಿರ ಮೈಸೂರು. ಇಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಹಾಗೂ ಮೈಸೂರು ಹಾಗೂ ಮೈಸೂರು ಕೊಡಗು ಮತ್ತು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಇವರ ಸಹಕಾರದೊಂದಿಗೆ ಆಯೋಜಿಸಲಾಗಿತ್ತು.

ಸದರಿ ತರಬೇತಿಯ ಉದ್ಘಾಟನೆಯನ್ನು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಆರ್. ನಾರಾಯಣ ರಾವ್ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಸುರೇಶ ಆರ್ ಎಸ್ ರವರು ಹಾಗೂ ವಂದನಾರ್ಪಣೆಯನ್ನು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಎಸ್. ಸಿ ಭಗೀರಥ ರವರು ನೆರವೇರಿಸಿದರು.

ಕಾರ್ಯಕ್ರಮದ ಮೊದಲನೆಯ ಅವಧಿಯನ್ನು ಸಂಯುಕ್ತ ಸಹಕಾರಿಯ ಸಿಬ್ಬಂದಿಯಾದ ಶ್ರೀ ನವೀನ್ ಇವರು ದಾವಾ ದಾಖಲಾತಿ ವಿಧಾನಗಳು ಮತ್ತು ದಾಖಲಾತಿ ನಿರ್ವಹಣೆ ವಿಷಯದ ಕುರಿತು ಹಾಗೂ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಶಾಸನಬದ್ಧ ಮಾಹಿತಿ ಸಲ್ಲಿಕೆಯ ಕುರಿತು ಉಪನ್ಯಾಸ ನೀಡಿದರು. ಸದರಿ ಕ್ಲಸ್ಟರ್ ಮಟ್ಟದ ತರಬೇತಿಯಲ್ಲಿ ಒಟ್ಟು 43 ಸೌಹಾರ್ದ ಸಹಕಾರಿಗಳಿಂದ 58 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

---

**ಬೀದರ :** ದಿನಾಂಕ 30.09.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು. ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಸಹಾರ್ದ ತರಬೇತಿ ಸಂಸ್ಥೆ ನೌಬಾದ ಬೀದರನಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್ ರವರು ವಹಿಸಿದ್ದರು. ಮುಖ್ಯಅತಿಥಿಗಳಾಗಿ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಸಂಜಯ ಕ್ಯಾಸ, ಶ್ರೀ ಬಸವರಾಜ ಹುಡಗೆ ರವರು ವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ವಹಿಸಿದ್ದರು. ನಂತರ ನಿರ್ದೇಶಕರ ಜವಾಬ್ದಾರಿಗಳ ಮತ್ತು ಕರ್ತವ್ಯಗಳ ಕುರಿತು ಉಪನ್ಯಾಸ ನೀಡಿದರು. ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರರವರು ಕಾಯ್ದೆಯಲ್ಲಿ ಇತ್ತಿಚಿನ ತಿದ್ದುಪಡಿಗಳ ಕುರಿತು ಮಾಹಿತಿ ನೀಡಿದರು. ಸ್ವಾಗತ ಮತ್ತು ನಿರೂಪಣೆಯನ್ನು ಶ್ರೀ ಶಿವಕಾಂತ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ನೆರವೆರಸಿದರು. ಕಾರ್ಯಕ್ರಮದಲ್ಲಿ 43 ಸೌಹಾರ್ದ ಸಹಕಾರಿಗಳಿಂದ 56 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು–560055

www.souharda.coop, Ph: 080–23378375–80, Email:souharda@souharda.coop

ಸಂಖ್ಯೆ : ಸಂಸ/72ನೇ ಅ.ಭಾ.ಸ.ಸ./2025–26 ದಿನಾಂಕ : 03.10.2025

ಮಾನ್ಯರೇ,

**ವಿಷಯ : 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯ ಕುರಿತು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರತಿ ವರ್ಷ ರಾಷ್ಟ್ರಾದ್ಯಂತ ನವೆಂಬರ್ 14 ರಿಂದ 20ರ ವರೆಗೆ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ ನಡೆಯುತ್ತದೆ. ಅದರಂತೆ ಕರ್ನಾಟಕ ರಾಜ್ಯದಾದ್ಯಂತ ಒಂದು ವಾರಗಳ ಕಾಲ ಸಹಕಾರ ಸಪ್ತಾಹದ ಒಂದೊಂದು ದಿನಕ್ಕೂ ಒಂದೊಂದು ವಿಷಯಗಳಿಗೆ ಸಂಬಂಧಿಸಿದಂತೆ, ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಚರಿಸಲಾಗುತ್ತಿದೆ.

ಪ್ರಸ್ತುತ ರಾಷ್ಟ್ರೀಯ ಸಹಕಾರ ಯೂನಿಯನ್ ನವದೆಹಲಿ ಇವರು ದಿನಾಂಕ 14 ರಿಂದ 20ನೇ ನವೆಂಬರ್ 2025ರ ವರೆಗೆ 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯನ್ನು ಆಚರಿಸಲು ಸೂಚಿಸಲಾಗಿದ್ದು, ಪ್ರತಿ ದಿನದ ವಿಷಯವು ಕೆಳಕಂಡತ್ತಿದೆ.

**72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಧ್ಯೇಯ :**

**"ಆತ್ಮನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರಿಗಳ ಸಂಸ್ಥೆಗಳು"**

**"Coopertatives as Vechicles for Atmanirbhar Bharat"**

| ದಿನಾಂಕ | ವಿಷಯ |
|---|---|
| 14.11.2025 | ಕಾರ್ಯದಕ್ಷತೆ, ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು ಡಿಜಿಟಲೀಕರಣವನ್ನು ಪ್ರೋತ್ಸಾಹಿಸುವುದು.<br>Promoting Digitalisation to enhance operation efficiency, Accountability and Transparency. |
| 15.11.2025 | ತ್ರಿಭುವನ್ ಸಹಕಾರ ವಿಶ್ವವಿದ್ಯಾಲಯ ಸಂಶೋಧನೆ ಮತ್ತು ತರಬೇತಿಯಿಂದ ಸಹಕಾರ ಶಿಕ್ಷಣದಲ್ಲಿ ಪರಿವರ್ತನೆ<br>Tribhuvan Sahakar University Research, and Training Transforming Cooperative Education |
| 16.11.2025 | ಸಹಕಾರಿ ಸಂಸ್ಥೆಗಳ ಮೂಲಕ ಗ್ರಾಮೀಣ ಅಭಿವೃದ್ಧಿಯ ಬಲವರ್ಧನೆ.<br>Strengthening Rural Development Through Cooperatives. |
| 17.11.2025 | ರಾಷ್ಟ್ರೀಯ ಸಹಕಾರಿ ನೀತಿಯ ಪರಿಸರ ವ್ಯವಸ್ಥೆ, ಭಾರತದ ಸಹಕಾರ ಸಂಸ್ಥೆಗಳಿಗೆ ರಚನಾತ್ಮಕ ಮಾರ್ಗಸೂಚಿ.<br>National Cooperative Policy Ecosystem, Structured Roadmap for india's Cooperative. |
| 18.11.2025 | ಸಹಕಾರಿ ಉದ್ಯಮ ಶೀಲತೆಯಿಂದ ಯುವಕರು, ಮಹಿಳೆಯರು ಮತ್ತು ಅಬಲ ವರ್ಗದ ಸಬಲೀಕರಣ (ಕರಕುಶಲ, ಕೈಮಗ್ಗ, ಕಾರ್ಮಿಕ, ಮೀನುಗಾರಿಕೆ ಇತ್ಯಾದಿ)<br>Empowering youth, women and weaker sectors (Handicrafts, handloom, labour, fisherier etc.) throuth Cooperative Entrepreneurship. |
| 19.11.2025 | ಪ್ರವಾಸೋದ್ಯಮ, ಆರೋಗ್ಯ, ಹಸಿರು ಇಂಧನ, ಪ್ಲಾಟ್‌ಫಾರಂ ಸಹಕಾರಿ ಸಂಸ್ಥೆಗಳು, ಕಿಚನ್ ಸಹಕಾರ ಸಂಘಗಳು ಮತ್ತಿತರ ಉದಯೋನ್ಮುಖ ಸಹಕಾರ ಸಂಘಗಳನ್ನು ಅನುಕೂಲಕರ ಪ್ರದೇಶಗಳಿಗೆ ವಿಸ್ತರಣೆ.<br>Expanding cooperative in emerging areas such as Tourism, Health, Green Energy, Platform coops, Kitchen coops and any other conceivable area. |
| 20.11.2025 | ಜಾಗತಿಕ ಸ್ಪರ್ಧಾತ್ಮಕತೆಗಾಗಿ ನವನಾವೀನ್ಯತೆಯ ಸಹಕಾರಿ ವ್ಯವಹಾರದ ಮಾದರಿಗಳು.<br>Innvotive Cooperative Business models for global competitiveness. |

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಅವಗಾಹನೆಗಾಗಿ ಹಾಗೂ ವ್ಯವಸ್ಥಿತವಾಗಿ ಸಹಕಾರ ಸಪ್ತಾಹವನ್ನು ಅರ್ಥಪೂರ್ಣವಾಗಿ ಆಚರಿಸಲು ವಿನಂತಿಯೊಂದಿಗೆ ಕಳುಹಿಸಲಾಗಿದೆ.

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು

# ಸೆಪ್ಟೆಂಬರ್ 2025 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

## ಸಮಾಪನಾಧಿಕಾರಿ ನೇಮಕವಾಗಿರುವ ಸೌಹಾರ್ದ ಸಹಕಾರಿಗಳ ವಿವರ :

| ಕ್ರ. ಸಂ. | ಸಹಕಾರಿಯ ಹೆಸರು | ನೇಮಕಾತಿ ಪ್ರಾಧಿಕಾರ | ಆದೇಶದ ದಿನಾಂಕ | ಸಮಾಪನಾಧಿಕಾರಿಯ ಹೆಸರು |
|---|---|---|---|---|
| 1 | ಶ್ರೀ ಗುರುಕಿರಣ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಾನಂದ ಫರ್ಟಿಲೈಝರ್ಸ್ ಏಜೆನ್ಸಿ, ಮುಖ್ಯ ರಸ್ತೆ, ಎಂ.ಕೆ. ಹುಬ್ಬಳ್ಳಿ, ಬೈಲಹೊಂಗಲ ತಾಲೂಕು, ಬೆಳಗಾವಿ ಜಿಲ್ಲೆ | ಸಹಕಾರಿಗಳ ಸಹಾಯಕ ನಿಬಂಧಕರು, ಬೈಲಹೊಂಗಲ | 24.06.2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೈಲಹೊಂಗಲ, ಸವದತ್ತಿ, ಗೋಕಾಕ, ರಾಮದುರ್ಗ, ಚೆನ್ನಮ್ಮನ ಕಿತ್ತೂರ ಹಾಗೂ ಯರಗಟ್ಟಿ |
| 2 | ಪಾರಸಗಡ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಗದೇಕರ ಕಾಂಪ್ಲೆಕ್ಸ್, ಹನುಮಗಿರಿ ಓಣಿ, ಸವದತ್ತಿ ತಾಲೂಕು, ಬೆಳಗಾವಿ ಜಿಲ್ಲೆ | | | |
| 3 | ಶ್ರೀ ಕಾಮಧೇನು ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ವೀರಭದ್ರೇಶ್ವರ ದೇವಸ್ಥಾನ, ಬಸವನಗರ, ಗೋಕಾಕ ತಾಲೂಕು, ಬೆಳಗಾವಿ ಜಿಲ್ಲೆ | | | |
| 4 | ಶ್ರೀ ರಾಮ ಪತ್ತಿನ ಸೌಹಾರ್ದ ಸಹಕಾರಿ ನಿ., ಖೋದಾನಪೂರ, ಬೈಲಹೊಂಗಲ ತಾಲೂಕು, ಬೆಳಗಾವಿ ಜಿಲ್ಲೆ | | | |
| 5 | ಶ್ರೀ ದೂಧಗಂಗಾ ಸೌಹಾರ್ದ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ. ಚರಿಗಲ್ಲಿ, ಚಿಕ್ಕೋಡಿ ತಾಲೂಕು, ಬೆಳಗಾವಿ ಜಿಲ್ಲೆ | ಸಹಕಾರಿಗಳ ಸಹಾಯಕ ನಿಬಂಧಕರು, ಚಿಕ್ಕೋಡಿ | 22.08.2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಚಿಕ್ಕೋಡಿ ತಾಲೂಕು |
| 6 | ಶ್ರೀ ಸಿದ್ದಗಜಾನನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ನಾಗರಮುನ್ನೋಳಿ, ಚಿಕ್ಕೋಡಿ ತಾಲೂಕು, ಬೆಳಗಾವಿ ಜಿಲ್ಲೆ | | | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಚಿಕ್ಕೋಡಿ ತಾಲೂಕು |
| 7 | ಶ್ರೀ ಪಂಚಾಕ್ಷರಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ತಾಂಬೋಳಿ ಬಿಲ್ಡಿಂಗ್, ಹರಿಪ್ರಸಾದ್ ಹೋಟೆಲ್ ಎದುರು, ಎಂ.ಜಿ. ಮಾರ್ಕೆಟ್, ಅಥಣಿ ತಾಲೂಕು, ಬೆಳಗಾವಿ ಜಿಲ್ಲೆ | | | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಅಥಣಿ ತಾಲೂಕು |
| 8 | ಮದಭಾವಿ ಶ್ರೀ ಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಮದಭಾವಿ, ಕಾಗವಾಡ ತಾಲೂಕು, ಬೆಳಗಾವಿ ಜಿಲ್ಲೆ | | | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಅಥಣಿ ತಾಲೂಕು |
| 9 | ಶ್ರೀ ದುರ್ಗಾಮಾತಾ ಸೌಹಾರ್ದ ಸಹಕಾರಿ ನಿ., ಕಾಗವಾಡ, ಅಥಣಿ ತಾಲೂಕು, ಬೆಳಗಾವಿ ಜಿಲ್ಲೆ | | | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಕಾಗವಾಡ ತಾಲೂಕು |
| 10 | ದಿ ಜೀವನಜ್ಯೋತಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ನಿಪ್ಪಾಣಿ, ಚಿಕ್ಕೋಡಿ ತಾಲೂಕು, ಬೆಳಗಾವಿ ಜಿಲ್ಲೆ | | 28.08.2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಚಿಕ್ಕೋಡಿ ತಾಲೂಕು |
| 11 | ರಾಣಿಬೆನ್ನೂರ ತಾಲೂಕ ಸಾವಯವ ಕೃಷಿ ಸೌಹಾರ್ದ ಸಹಕಾರಿ ನಿ., ಗೌರಿಶಂಕರ ನಗರ, ಎಸ್.ಎಂ.ಜಿ. ಕಾಂಪ್ಲೆಕ್ಸ, ಪಿ.ಬಿ. ರಸ್ತೆ, ರಾಣೇಬೆನ್ನೂರು ತಾಲೂಕು, ಹಾವೇರಿ ಜಿಲ್ಲೆ | ಸಹಕಾರಿಗಳ ಉಪ ನಿಬಂಧಕರು, ಹಾವೇರಿ ಜಿಲ್ಲೆ | 12.08.2025 | ಶ್ರೀ ಪ್ರವೀಣ ಬಾರ್ಕಿ, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಹಾವೇರಿ ಜಿಲ್ಲೆ |
| 12 | ನಿಸರ್ಗ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಮಾರ್ಕೆಟ್ ರೋಡ್, ಸವಣೂರು, ಸವಣೂರು ತಾಲೂಕು, ಹಾವೇರಿ ಜಿಲ್ಲೆ | | | |
| 13 | ಶ್ರೀ ಶಿವಗಂಗೆ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ನಾಗೇಂದ್ರನವಾಟಿ, ಕರಡಿಗುಡ್ಡದ ರಸ್ತೆ, ಹಾವೇರಿ ತಾಲೂಕು, ಹಾವೇರಿ ಜಿಲ್ಲೆ | | | |

| | | | | |
|---|---|---|---|---|
| 14 | ಶ್ರೀ ಚಂದ್ರಶೇಖರ ಪಾಟೀಲ ರೇವೂರ ಸೌಹಾರ್ದ ಪತ್ತಿನ ಸಹಕಾರಿ ನಿ., ಲಾಲಗೇರಿ ಕ್ರಾಸ್, ತಾ. & ಜಿ. ಕಲಬುರಗಿ | ಸಹಕಾರಿಗಳ ಸಹಾಯಕ ನಿಬಂಧಕರು, ಕಲಬುರಗಿ | 07.08.2025 | ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಕಲಬುರಗಿ |
| 15 | ಸ್ವರ್ಣಗೌರಿ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ನಿ., ಮನೆ ನಂ. 11-1814/8, "ರಾಜು ಬಿಲ್ಡಿಂಗ್", ವಿದ್ಯಾನಗರ, ತಾ. & ಜಿ. ಕಲಬುರಗಿ | | | |
| 16 | ಶ್ರೀ ಶಾಂತಲಿಂಗೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಮಾದನ ಹಿಪ್ಪರಗಾ, ಆಳಂದ ತಾಲೂಕು, ಕಲಬುರಗಿ ಜಿಲ್ಲೆ | | | |
| 17 | ಶ್ರೀ ಏಕದಂತ ಸೌಹಾರ್ದ ಪತ್ತಿನ ಸಹಕಾರಿ ನಿ., ಬಸ್ ಸ್ಟಾಂಡ್ ಎದುರು, ಟಿ.ಎ.ಪಿ.ಸಿ.ಎಂ.ಎಸ್. ಕಟ್ಟಡ, ಅಫಜಲಪೂರ ತಾಲೂಕು, ಕಲಬುರಗಿ ಜಿಲ್ಲೆ | | | |
| 18 | ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಕೊಸಗಿ ಬಿಲ್ಡಿಂಗ್, ಭೋವಿಗಲ್ಲಿ, ಸರಾಫ್ ಬಜಾರ್, ತಾ. & ಜಿ. ಕಲಬುರಗಿ | | | |
| 19 | ಗುಲಬರ್ಗಾ ರಾಜ್ಯ ಲೆಕ್ಕ ಪತ್ರ ಇಲಾಖೆ ನೌಕರರ ಸೌಹಾರ್ದ ಪತ್ತಿನ ಸಹಕಾರಿ ನಿ., ನೆಲಮಹಡಿ, ಅಂಗಡಿ ಸಂಖ್ಯೆ. 01, ಶ್ರೀರಾಮ ಆರ್ಕೇಡ್, ಗಣೇಶ ನರ್ಸಿಂಗ್ ಹೋಮ್ ಪಕ್ಕ, ಹಳೇ ಜೇವರ್ಗಿ ರಸ್ತೆ, ತಾ. & ಜಿ. ಕಲಬುರಗಿ | | | |
| 20 | ಶ್ರೀ ವಿಕಸನ ಸೌಹಾರ್ದ ಪತ್ತಿನ ಸಹಕಾರಿ ನಿ., ನೆಲೋಗಿ, ಜೇವರ್ಗಿ ತಾಲೂಕು, ಕಲಬುರಗಿ ಜಿಲ್ಲೆ | | | |
| 21 | ಸಿರಿ ಸಮೃದ್ಧಿ ಸೌಹಾರ್ದ ಪತ್ತಿನ ಸಹಕಾರಿ ನಿ., ನಂ.04, ಖಣಗೆ ಕಾಂಪ್ಲೆಕ್ಸ್, 2ನೇ ಮಹಡಿ, ಸೂಪರ್ ಮಾರ್ಕೆಟ್, ತಾ. & ಜಿ. ಕಲಬುರಗಿ | | | |
| 22 | ಮೆಹಕನಾಜ ಅಲ್ಪಸಂಖ್ಯಾತರ ಸೌಹಾರ್ದ ಪತ್ತಿನ ಸಹಕಾರಿ ನಿ., ಸರಕಾರಿ ಜೂನಿಯರ್ ಕಾಲೇಜು ಹಿಂದೆ, ಎನ್.ಹೆಚ್. 218, ಪ್ಲಾಟ್ ನಂ. 48, ಜೇವರ್ಗಿ ತಾಲೂಕು, ಕಲಬುರಗಿ ಜಿಲ್ಲೆ | | | |
| 23 | ಅಭಿನವ ಮಲ್ಲಿಕಾರ್ಜುನ ಸೌಹಾರ್ದ ಪತ್ತಿನ ಸಹಕಾರಿ ನಿ., ಸರಕಾರಿ ಆಸ್ಪತ್ರೆ ಎದುರು, ಜೇರಟಗಿ, ಜೇವರ್ಗಿ ತಾಲೂಕು, ಕಲಬುರಗಿ ಜಿಲ್ಲೆ | | | |
| 24 | ಅರ್ಬನ ಸೌಹಾರ್ದ ಸಹಕಾರಿ ನಿ., ಮನೆ ನಂ. 9-1-79, ಅತನೂರ, ಅಫಜಲಪೂರ ತಾಲೂಕು, ಕಲಬುರಗಿ ಜಿಲ್ಲೆ | | | |
| 25 | ಸ್ವರಾಜ ಸೌಹಾರ್ದ ಪತ್ತಿನ ಸಹಕಾರಿ ನಿ., ಘಂಟೆ ಬಿಲ್ಡಿಂಗ್, ನೆಹರು ಗಂಜ್, ಬಂಬೂ ಬಜಾರ, ಕಲಬುರಗಿ | | | |
| 26 | ಅನ್ಸಾರಿ ಅಲ್ಪಸಂಖ್ಯಾತರ ಸೌಹಾರ್ದ ಸಹಕಾರಿ ನಿ., ಹಾಗರಗಾ ಕ್ರಾಸ್, ಕಲಬುರಗಿ | | | |
| 27 | ಜೀವನಾಧಾರ ಮಹಿಳಾ ಸೌಹಾರ್ದ ಕೋ-ಆಪರೇಟಿವ್ ಲಿ., ಹಳೇಶೆಟ್ಟಿ ಕಾಂಪ್ಲೆಕ್ಸ್, ಶೆಟ್ಟಿ ಥಿಯೇಟರ್ ಹತ್ತಿರ, ಆಳಂದ ರೋಡ್, ಕಲಬುರಗಿ | | | |

| | | | | |
|---|---|---|---|---|
| 28 | ಮಾತೋಶ್ರೀ ಸೌಹಾರ್ದ ಪತ್ತಿನ ಸಹಕಾರಿ ನಿ., ಮಳಿಗೆ ಸಂಖ್ಯೆ ಸಿಎಸ್ 30, ಕೆಎಚ್‌ಬಿ ಸಂಕೀರ್ಣ, ಕೇಂದ್ರ ಬಸ್ ನಿಲ್ದಾಣದ ಎದುರು, ತಾ. & ಜಿ. ಕಲಬುರಗಿ | ಸಹಕಾರಿಗಳ ಉಪ ನಿಬಂಧಕರು, ಕಲಬುರಗಿ | 25.08.2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಕಲಬುರಗಿ ಜಿಲ್ಲೆ |
| 29 | ಶ್ರಮಜೀವಿ ಸೌಹಾರ್ದ ಪತ್ತಿನ ಸಹಕಾರಿ ನಿ., ನಂ. ಜಿ–25, ಕೆಎಸ್‌ಎಸ್‌ಐಡಿಸಿ ಸಂಕೀರ್ಣ, ಜೇವರ್ಗಿ ಅಡ್ಡರಸ್ತೆ, ಎಂಎಸ್‌ಕೆ ಮಿಲ್ ರಸ್ತೆ, ತಾ. & ಜಿ. ಕಲಬುರಗಿ | | | |
| 30 | ದುರ್ಗಾ ಗುಲ್ಬರ್ಗಾ ತಾಲೂಕ ಸಾವಯವ ಕೃಷಿ ಸೌಹಾರ್ದ ಸಹಕಾರಿ ನಿ., ಗೋಂದಿಕೇರಿ ತಾಂಡಾ, ಪೋಸ್ಟ್ ಶ್ರೀನಿವಾಸ ಸರಡಗಿ, ಕಲಬುರಗಿ ತಾಲೂಕು, ಕಲಬುರಗಿ ಜಿಲ್ಲೆ | | | |
| 31 | ಆಳಂದ ತಾಲೂಕ ಸಾವಯವ ಕೃಷಿ ಸೌಹಾರ್ದ ಸಹಕಾರಿ ನಿ., ಕೋ/ಆಫ್ ಸಂತೋಷ್, ವಿ.ಕೆ. ಸಲಕಾರ್, ಕಮಲಪುರ ತಾಲೂಕು, ಕಲಬುರಗಿ ಜಿಲ್ಲೆ | | | |

## ನೋಂದಣಿ ರದ್ದತಿಯಾಗಿರುವ ಸೌಹಾರ್ದ ಸಹಕಾರಿಗಳ ವಿವರ

| ಕ್ರ.ಸಂ. | ಸಹಕಾರಿಯ ಹೆಸರು | ಜಿಲ್ಲೆ |
|---|---|---|
| 1 | ನಂದಗೋಕುಲ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ನಂ. 27, 1ನೇ ಮುಖ್ಯ ರಸ್ತೆ, ಆಚಾರ್ಯ ಕಾಲೇಜು ರಸ್ತೆ, ರಾಘವೇಂದ್ರ ಬಡಾವಣೆ, ಚಿಕ್ಕಬಾಣಾವರ, ಬೆಂಗಳೂರು | ಬೆಂಗಳೂರು ನಗರ |
| 2 | ದಿ ರಾಜಾಜಿನಗರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ನಂ. 95, 17ನೇ ಅಡ್ಡ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು | |
| 3 | ಶ್ರೀ ಅಮರನಾರಾಯಣಸ್ವಾಮಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು ಗ್ರಾಮಾಂತರ ಜಿಲ್ಲೆ | ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 4 | ಆಶ್ರಿತ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ನಂ.85, ವೆಂಕಮ್ಮ ಕಾಂಪ್ಲೆಕ್ಸ್, ಕೆ.ಆರ್.ರೋಡ್, ತಾಲೂಕು ಕಛೇರಿ ಎದುರು, ಹೊಸಕೋಟೆ, ಬೆಂಗಳೂರು ಗ್ರಾಮಾಂತರ | |
| 5 | ದಿ ವೈಸ್‌ಮೆನ್ ಸೌಹಾರ್ದ ಪತ್ತಿನ ಸಹಕಾರಿ ನಿ., # 5, ಮೊದಲನೇ ಮಹಡಿ, ಲಕ್ಷ್ಮೀ ಕಾಂಪ್ಲೆಕ್ಸ್, (ಹಳೇ ವಿಜಯಾ ಬ್ಯಾಂಕ್ ಬಿಲ್ಡಿಂಗ್) ಮಾರ್ಕೆಟ್ ಸ್ಕೂಲ್ ಹತ್ತಿರ, ಮುಖ್ಯ ರಸ್ತೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ | |
| 6 | ಆಚಾರ್ಯ ವಿದ್ಯಾಸಾಗರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸದಲಗಾ, ತಾ. ಚಿಕ್ಕೋಡಿ ಜಿ. ಬೆಳಗಾವಿ | ಬೆಳಗಾವಿ ಜಿಲ್ಲೆ |
| 7 | ಆದರ್ಶ ಸೌಹಾರ್ದ ಪತ್ತಿನ ಸಹಕಾರಿ ನಿ., ಶ್ರೀ ಚಾಮುಂಡೇಶ್ವರಿ ಹಾಸ್ಟೇಲ್, ಗಣೇಶ ದೇವಸ್ಥಾನದ ಎದುರು, ಆದರ್ಶ ನಗರ, ವಿಜಯಪುರ | ವಿಜಯಪುರ ಜಿಲ್ಲೆ |

## ಸಮಾಪನೆ ಪಟ್ಟಿಯಿಂದ ಪುನಶ್ಚೇತನ ಆದೇಶವಾಗಿರುವ ಸೌಹಾರ್ದ ಸಹಕಾರಿಗಳ ವಿವರ

| ಕ್ರ.ಸಂ. | ಸದಸ್ಯತ್ವ ಸಂಖ್ಯೆ | ಸಹಕಾರಿಯ ಹೆಸರು | ಷರಾ |
|---|---|---|---|
| 1 | ಬಿಜೆಪಿ–0178 | ಚಬನೂರ ಶ್ರೀ ಅಮೋಘಸಿದ್ದೇಶ್ವರ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಚಬನೂರ, ಬಸವನ ಬಾಗೇವಾಡಿ, ವಿಜಯಪುರ | ಸಹಾಯಕ ನಿಬಂಧಕರು, ವಿಜಯಪುರ ಇವರು ಸಹಕಾರಿಯ ಪುನಶ್ಚೇತನಕ್ಕೆ ಆದೇಶ ಮಾಡಿರುತ್ತಾರೆ. |

**ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಿರುವ ಕುರಿತು.**

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ ಹಿನ್ನಲೆಯಲ್ಲಿ ಸೆಪ್ಟೆಂಬರ್ ಮಾಹೆಯಲ್ಲಿ ಒಟ್ಟು 05 ಸೌಹಾರ್ದ ಸಹಕಾರಿಗಳಿಗೆ ಕರ್ನಾಟಕ ಸೌಹಾರ್ದ ಕಾಯ್ದೆ 1997ರ ಕಲಂ 38ಎ ರನ್ವಯ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

# ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2025

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು
ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ, ೧೨ ಸೆಪ್ಟೆಂಬರ್, ೨೦೨೫ (ಭಾದ್ರಪದ ೨೧, ಶಕವರ್ಷ ೧೯೪೭)<br>BENGALURU, FRIDAY, 12 SEPTEMBER, 2025 (BHADRAPADA 21, SHAKAVARSHA 1947) | ನಂ. ೫೯೧<br>No. 591 |

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಂವ್ಯಶಾಇ 51 ಶಾಸನ 2025, ಬೆಂಗಳೂರು, ದಿನಾಂಕ: 12.09.2025**

ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2025 ಇದಕ್ಕೆ 2025ರ ಸೆಪ್ಟೆಂಬರ್ ತಿಂಗಳ 11ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2025ರ ಕರ್ನಾಟಕ ಅಧಿನಿಯಮ ಸಂಖ್ಯೆ: 74 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 74**

(2025 ರ ಸೆಪ್ಟೆಂಬರ್ ತಿಂಗಳ 12ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 2025**

(2025 ರ ಸೆಪ್ಟೆಂಬರ್ ತಿಂಗಳ 11ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 (2000ರ ಕರ್ನಾಟಕ ಅಧಿನಿಯಮ 17)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 (2000ರ ಕರ್ನಾಟಕ ಅಧಿನಿಯಮ 17)ರ (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು

(೧)

೨

ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ, ಖಂಡ (ವೈ) ನಂತರ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಜೆಡ್) "**ರಾಜ್ಯ ಶಾಸನಬದ್ಧ ದ್ರವ್ಯತಾ ಮೀಸಲು"** ಎಂದರೆ ಅಧಿನಿಯಮದ ಪ್ರಕರಣ 17ಬಿ ರಲ್ಲಿ ನಿರ್ದಿಷ್ಟಪಡಿಸಿದಂತೆ."

**3. ಪ್ರಕರಣ 17ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 17ರಲ್ಲಿ ಎರಡನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೆ ಪರಂತು, ಪತ್ತಿನ ಚಟುವಟಿಕೆ ನಡೆಸುವ ಯಾವುದೇ ಸಹಕಾರಿಯು ತಾನು ಸಂಗ್ರಹಿಸಿದ ಠೇವಣಿಯನ್ನು ಸಾಲ ನೀಡಿಕೆ ಅಥವಾ ಹೂಡಿಕೆಯ ಹೊರತಾಗಿ ಯಾವುದೇ ಪತ್ತೇತರ ಚಟುವಟಿಕೆಗೆ ವಿನಿಯೋಗಿಸತಕ್ಕದ್ದಲ್ಲ".

**4. ಹೊಸ ಪ್ರಕರಣ 17ಬಿ ನ ಸೇರ್ಪಡೆ.-** ಮೂಲ ಅಧಿನಿಯಮದ ಪ್ರಕರಣ 17ಎ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು. ಎಂದರೆ:-

"**17ಬಿ. ರಾಜ್ಯ ಶಾಸನಬದ್ಧ ದ್ರವ್ಯತಾ ಮೀಸಲು ನಿರ್ವಹಣೆ.-** ಸೌಹಾರ್ದ ಸಹಕಾರಿ ಬ್ಯಾಂಕುಗಳನ್ನು ಹೊರತುಪಡಿಸಿ, ಪ್ರತಿಯೊಂದು ಸಹಕಾರಿಯು ಪ್ರತಿ ಸಹಕಾರಿ ವರ್ಷದ ಅಂತ್ಯಕ್ಕೆ ಹೊಂದಿರುವ ಒಟ್ಟು ಠೇವಣಿಯ ಶೇ.20 ರಷ್ಟನ್ನು ರಾಜ್ಯ ಶಾಸನಬದ್ಧ ದ್ರವ್ಯತಾ ಮೀಸಲು ರೂಪದಲ್ಲಿ ಕಡ್ಡಾಯವಾಗಿ ಪ್ರಕರಣ 18ರಂತೆ ನಿರ್ವಹಣೆ ಮಾಡತಕ್ಕದ್ದು."

**5. ಪ್ರಕರಣ 18ರ ತಿದ್ದುಪಡಿ.-** ಮೂಲ ಅಧಿನಿಯಮದ 18ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**18.ನಿಧಿಗಳ ಹೂಡಿಕೆ.-** ಸಹಕಾರಿಯ ತಕ್ಷಣದ ಬಳಕೆಗೆ ಅಗತ್ಯವಾಗಿರದಂಥ ಅದರ ನಿಧಿಗಳನ್ನು ಅದರ ವ್ಯವಹಾರದ ಹೊರಗೆ ಹೂಡತಕ್ಕದ್ದು ಅಥವಾ ಠೇವಣಿ ಇರಿಸತಕ್ಕದ್ದು, ಎಂದರೆ:-

(ಎ) ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿ. ಅಥವಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ ಅಥವಾ ಪಟ್ಟಣ ಸಹಕಾರಿ ಬ್ಯಾಂಕ್ ; ಮತ್ತು

(ಬಿ) ರಿಜಿಸ್ಟ್ರಾರ್ ಅವರ ಪೂರ್ವಾನುಮತಿಯೊಂದಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ನಿಯಂತ್ರಣಕ್ಕೊಳಪಡುವ ಯಾವುದೇ ಶೆಡ್ಯೂಲ್ಡ್ ಬ್ಯಾಂಕ್.";

**6. ಪ್ರಕರಣ 20-ಬಿ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 20-ಬಿ ರ**,** ಖಂಡ (ಸಿ) ರಲ್ಲಿನ ಉಪ ಖಂಡ **(ii)**ರ ತರುವಾಯ ಮುಂದಿನ ಉಪ ಖಂಡವನ್ನು ಸೇರಿಸತಕ್ಕದ್ದು**,** ಎಂದರೆ:-

"(iii) ಈ ಅಧಿನಿಯಮ ಅಥವಾ ಅದರಡಿ ರಚಿಸಿದ ಉಪ ವಿಧಿಗಳಲ್ಲಿ ಏನೇ ಒಳಗೊಂಡಿದ್ದರೂ, ಮಾಧ್ಯಮಿಕ ಸಹಕಾರಿ, ಫೆಡರಲ್ ಸಹಕಾರಿ ಅಥವಾ ಅಪೆಕ್ಸ್ ಸಹಕಾರಿಗಳ ಮಂಡಲಿಯ ಚುನಾವಣೆಯಲ್ಲಿ ಮೀಸಲಾತಿ ಸ್ಥಾನಗಳಿಗೆ, ಸದರಿ ಸಹಕಾರಿಗಳ ಯಾವುದೇ ಮತದಾರರ ವರ್ಗದವರಾದರೂ ನಿಯಮಿಸಬಹುದಾದ ವಿಧಾನದಲ್ಲಿ ತಮ್ಮ ಮತಗಳನ್ನು ಚಲಾಯಿಸಲು ಅರ್ಹರಾಗಿರತಕ್ಕದ್ದು."

**7. ಪ್ರಕರಣ 23ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 23 ರಲ್ಲಿ**,** ಉಪಪ್ರಕರಣ (3)ರ ಖಂಡ (ಕೆ-3) ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಕೆ-4) ಸಹಕಾರಿಯಿಂದ ಸಾಲ ಪಡೆದ ಎಲ್ಲ ಆಡಳಿತ ಮಂಡಲಿಯ ನಿರ್ದೇಶಕರು ಹಾಗೂ ಇತರೆ ಅಗ್ರ ಇಪ್ಪತ್ತು ಸುಸ್ತಿಯಾದ ಸಾಲಗಾರರ ಪುನರೀಕ್ಷಣೆ."

೩

**8. ಪ್ರಕರಣ 24ರ ತಿದ್ದುಪಡಿ.-** ಮೂಲ ಅಧಿನಿಯಮದ 24ನೇ ಪ್ರಕರಣದ ಪ್ರಾರಂಭದ ಖಂಡಿಕೆ ಮತ್ತು (1)ನೇ ಖಂಡ ಹಾಗೂ ಅದರ ನಮೂದುಗಳವ ಬದಲಿಗೆ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಸೌಹಾರ್ದ ಸಹಕಾರಿ ಮಂಡಲಿಯು ಮುಖ್ಯ ಕಾರ್ಯನಿರ್ವಾಹಕನನ್ನು ಹೊರತುಪಡಿಸಿ ಹದಿಮೂರಕ್ಕಿಂತ ಕಡಿಮೆಯಲ್ಲದ ಸದಸ್ಯರನ್ನು ಹೊಂದಿರತಕ್ಕದ್ದು, ಆದರೆ ನಿಯಮಿಸಬಹುದಾದಂತೆ ಸದಸ್ಯರ ಸಂಖ್ಯೆಯನ್ನು ಮೀರತಕ್ಕದ್ದಲ್ಲ.

ಪರಂತು, ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ ಪ್ರತಿಯೊಂದು ಪ್ರಾಥಮಿಕ, ಮಾಧ್ಯಮಿಕ ಅಥವಾ ಒಕ್ಕೂಟ ಮತ್ತು ಅಪೆಕ್ಸ್ ಸಹಕಾರಿಗಳ ಸಂಘದ ಮಂಡಲಿಯಲ್ಲಿ ಅನುಸೂಚಿತ ಜಾತಿಗೆ ಸೇರಿದ ಸದಸ್ಯನಿಗೆ ಒಂದು ಸ್ಥಾನವನ್ನು ಮತ್ತು ಅನುಸೂಚಿತ ಪಂಗಡಕ್ಕೆ ಸೇರಿದ ಸದಸ್ಯನಿಗೆ ಒಂದು ಸ್ಥಾನವನ್ನು, ಮಹಿಳಾ ಸದಸ್ಯರಿಗಾಗಿ ಎರಡು ಸ್ಥಾನಗಳನ್ನು ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಸದಸ್ಯರಿಗೆ ಎರಡು ಸ್ಥಾನಗಳನ್ನು ಮೀಸಲಿಡತಕ್ಕದ್ದು.

ಮತ್ತು ಪರಂತು ಮಾಧ್ಯಮಿಕ ಅಥವಾ ಒಕ್ಕೂಟ ಮತ್ತು ಸಂಯುಕ್ತ ಸಹಕಾರಿ ಆಡಳಿತ ಮಂಡಲಿಯಲ್ಲಿ ನಿರ್ದೇಶಕರ ಸಂಖ್ಯೆಯ ಗರಿಷ್ಠ ಪ್ರಮಾಣವು 24ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿಗದಿಪಡಿಸಿದ ಪ್ರಮಾಣಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಅಗತ್ಯಬಿದ್ದರೆ, ರಿಜಿಸ್ಟ್ರಾರರ ಪೂರ್ವಾನುಮೋದನೆಯೊಂದಿಗೆ ಗರಿಷ್ಠ ಸಂಖ್ಯೆಯನ್ನು ಆಯಾ ಸಹಕಾರಿಗಳು ತಮ್ಮ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ನಿಗದಿಪಡಿಸಿಕೊಳ್ಳತಕ್ಕದ್ದು.

ಅಲ್ಲದೇ ಪರಂತು, ಪ್ರತಿಯೊಂದು ಸಹಕಾರಿಯು ಬ್ಯಾಂಕಿಂಗ್, ವ್ಯವಸ್ಥಾಪನೆ, ಹಣಕಾಸು ನಿರ್ವಹಣೆಯ ಕ್ಷೇತ್ರದಲ್ಲಿ ಅನುಭವವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರೆ ಯಾವುದೇ ಕ್ಷೇತ್ರದಲ್ಲಿ ಪರಿಣಿತಿಯನ್ನು ಹೊಂದಿರುವ ವ್ಯಕ್ತಿಗಳನ್ನು, ಅಂಥ ಸಹಕಾರಿಯ ಮಂಡಲಿಯ ಸದಸ್ಯರನ್ನಾಗಿ ಸಹಮತದಿಂದ (ಕೋಆಪ್ಟ್) ಸೇರಿಸಿಕೊಳ್ಳತಕ್ಕದ್ದು, ಹಾಗೆ ಸಹಮತದಿಂದ ಸೇರಿಸಿಕೊಂಡ ಅಂಥ ಸಹಮತದ ಸದಸ್ಯರು ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುವುಳ್ಳವರಾಗಿರತಕ್ಕದ್ದಲ್ಲ ಅಥವಾ ಮಂಡಲಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ.

ಅಲ್ಲದೇ ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಗರಿಷ್ಠ ಸಂಖ್ಯೆಯ ನಿರ್ದೇಶಕರಿಗೆ ಹೆಚ್ಚುವರಿಯಾಗಿ ಇಬ್ಬರನ್ನು ಮೀರತಕ್ಕದ್ದಲ್ಲ:

ಅಲ್ಲದೇ ಪರಂತು, ಒಂದು ಸಹಕಾರಿಯು ಅವಶ್ಯವಿದ್ದಲ್ಲಿ ಮೂರಕ್ಕೆ ಮೀರದ ಕಾರ್ಯಾನುಗುಣ ನಿರ್ದೇಶಕರು (functional directors) ಸಹ ಮಂಡಲಿಯ ಸದಸ್ಯರಾಗಿರತಕ್ಕದ್ದು, ಹಾಗೂ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಟ್ಟು ನಿರ್ದೇಶಕರ ಸಂಖ್ಯೆಯನ್ನು ಎಣಿಸುವಾಗ ಅಂಥ ನಿರ್ದೇಶಕರನ್ನು ಹೊರತುಪಡಿಸತಕ್ಕದ್ದು."

**9. ಪ್ರಕರಣ 25ರ ತಿದ್ದುಪಡಿ.-** ಮೂಲ ಅಧಿನಿಯಮದ 25ನೇ ಪ್ರಕರಣದಲ್ಲಿ ಉಪ-ಪ್ರಕರಣ (1) ರ ಖಂಡ (ಎಫ್) ತರುವಾಯ ಮುಂದಿನ ಹೊಸ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಜಿ) ಪ್ರತಿ ಸಹಕಾರಿ ವರ್ಷದ ಅಂತ್ಯಕ್ಕೆ ಅವನು/ಅವಳು ಮತ್ತು ಅವನ/ಅವಳ ಕುಟುಂಬದವರ ಆಸ್ತಿ ಮತ್ತು ಹೊಣೆಗಾರಿಕೆಗಳ ವಿವರಣೆ ಪಟ್ಟಿಯನ್ನು ಘೋಷಿಸಲು ಅಥವಾ ಸಲ್ಲಿಸಲು ವಿಫಲವಾದರೆ;

**ವಿವರಣೆ.-** ಈ ಖಂಡದ ಉದ್ದೇಶಕ್ಕಾಗಿ 'ಕುಟುಂಬ' ಎಂದರೆ ನಿರ್ದೇಶಕ ಮತ್ತು ಅವನ/ಅವಳ ಪತಿ/ಪತ್ನಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ."

೪

**10. ಪ್ರಕರಣ 26ರ ತಿದ್ದುಪಡಿ.-** ಮೂಲ ಅಧಿನಿಯಮದ, 26ನೇ ಪ್ರಕರಣದಲ್ಲಿ,-

**(i)** ಉಪ-ಪ್ರಕರಣ (1) ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1ಎ) ಮಂಡಲಿಯ ಚುನಾವಣೆಗೆ ಸ್ಪರ್ಧಿಸುವ ಪ್ರತಿಯೊಬ್ಬ ಅಭ್ಯರ್ಥಿಯು ನಾಮಪತ್ರ ಸಲ್ಲಿಸುವಾಗ ನಿಯಮಿಸಬಹುದಾದ ವಿಧಾನದಲ್ಲಿ ಅವನು/ಅವಳು ಮತ್ತು ಅವನ/ಅವಳ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸತಕ್ಕದ್ದು.

"(1ಬಿ) ಮಂಡಲಿಯ ಪ್ರತಿಯೊಬ್ಬ ಚುನಾಯಿತ ನಿರ್ದೇಶಕ ಆತನ ಅಧಿಕಾರಾವಧಿಯ ಪ್ರತಿ ಹಣಕಾಸು ವರ್ಷದ ಅಂತ್ಯಕ್ಕೆ ನಿಯಮಿಸಬಹುದಾದ ವಿಧಾನದಲ್ಲಿ ಅವನು/ಅವಳು ಮತ್ತು ಅವನ/ಅವಳ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸತಕ್ಕದ್ದು.

**ವಿವರಣೆ.-** ಈ ಖಂಡದ ಉದ್ದೇಶಕ್ಕಾಗಿ 'ಕುಟುಂಬ' ಎಂದರೆ ಅಭ್ಯರ್ಥಿ, ಅವನ/ಅವಳ ಪತ್ನಿ/ಪತಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ."

(ii) ಉಪಪ್ರಕರಣ (2) ರ ಬದಲಿಗೆ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಸೌಹಾರ್ದ ಸಹಕಾರಿ ಸಂಘಗಳ ಚುನಾವಣೆಗಳನ್ನು ನಡೆಸುವ ಕಾರ್ಯವಿಧಾನ ಮತ್ತು ಮಾರ್ಗಸೂಚಿಗಳು ಸಹಕಾರಿ ಚುನಾವಣಾ ಪ್ರಾಧಿಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು".

**11. ಪ್ರಕರಣ 27ರ ತಿದ್ದುಪಡಿ.-** ಮೂಲ ಅಧಿನಿಯಮದ 27ನೇ ಪ್ರಕರಣದ ಖಂಡ (ಜೆ) ನ ತರುವಾಯ ಈ ಮುಂದಿನ ಖಂಡಗಳಾದ (ಕೆ), (ಎಲ್) ಮತ್ತು (ಎಮ್) ಅನ್ನು ಸೇರಿಸತಕ್ಕದ್ದು, ಎಂದರೆ:-

"(ಕೆ) ಮಂಡಲಿಯ ಪ್ರತಿಯೊಬ್ಬ ಚುನಾಯಿತ ನಿರ್ದೇಶಕರು ತಮ್ಮ ಅಧಿಕಾರಾವಧಿಯ ಪ್ರತಿ ಹಣಕಾಸು ವರ್ಷ ನಿಯಮಿಸಬಹುದಾದ ವಿಧಾನದಲ್ಲಿ ಅವನು/ಅವಳು ಮತ್ತು ಅವನ/ಅವಳ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸತಕ್ಕದ್ದು;

(ಎಲ್) ಸೌಹಾರ್ದ ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಾಹಕನ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಪಡೆಯುವುದು ಮತ್ತು ಪರಾಮರ್ಶಿಸುವುದು;

(ಎಮ್) ಮುಖ್ಯ ಕಾರ್ಯನಿರ್ವಾಹಕರು ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಸಲ್ಲಿಸಲು ವಿಫಲವಾದಲ್ಲಿ ಆಡಳಿತ ಮಂಡಲಿಯು ನಿಯಮಿಸಬಹುದಾಂಥ ವಿಧಾನದಲ್ಲಿ ಶಿಸ್ತುಕ್ರಮ ಕೈಗೊಳ್ಳತಕ್ಕದ್ದು;

**ವಿವರಣೆ.-** ಈ ಖಂಡದ ಉದ್ದೇಶಕ್ಕಾಗಿ 'ಕುಟುಂಬ' ಎಂದರೆ ಅಭ್ಯರ್ಥಿ/ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ/ನಿರ್ದೇಶಕ ಮತ್ತು ಅವನ/ಅವಳ ಪತ್ನಿ / ಪತಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ."

**12. ಪ್ರಕರಣ 28ರ ತಿದ್ದುಪಡಿ.-** ಮೂಲ ಅಧಿನಿಯಮದ, 28ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಮುಖ್ಯ ಕಾರ್ಯನಿರ್ವಾಹಕನು ಮಂಡಲಿಯ ರಚನೆಯಾದ ದಿನಾಂಕದಿಂದ ಅಥವಾ ಸಾಮಾನ್ಯ ಚುನಾವಣೆಯ ನಂತರ ಮಂಡಲಿಯು ರಚನೆಯಾಗಿದೆಯೆಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ, ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಪದಾವಧಿಯು ಮುಕ್ತಾಯವಾಗುವ ನಿಕಟ ಪೂರ್ವದಲ್ಲಿ, ತಕ್ಷಣವೇ ಸಹಕಾರಿ ಸಂಘಗಳ ಉಪವಿಧಿಗಳ ಮೇರೆಗೆ ಚುನಾಯಿಸಬೇಕಾದ ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಮತ್ತು ಅಗತ್ಯಪಡಿಸಲಾದಂಥ ಇತರ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ ನಿಯಮಿಸಬಹುದಾದ ವಿಧಾನಲ್ಲಿ ಮಂಡಲಿಯ ಎಲ್ಲಾ ಸದಸ್ಯರ

ಸಭೆಯನ್ನು ಕರೆಯತಕ್ಕದ್ದು. ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಚುನಾವಣೆಗಾಗಿ ಅಭ್ಯರ್ಥಿಯಾಗಿರದ ಸದಸ್ಯರಲ್ಲಿ ಒಬ್ಬರನ್ನು ಅಂಥ ಸಭೆಯ ಅಧ್ಯಕ್ಷತೆ ವಹಿಸುವುದಕ್ಕೆ ಆಯ್ಕೆ ಮಾಡತಕ್ಕದ್ದು:

ಪರಂತು ಸಹಕಾರಿಯ ನೋಂದಣಿಯ ತರುವಾಯ ನಡೆದ ಮೊದಲ ಸಾಮಾನ್ಯ ಸಭೆಯಲ್ಲಿ ಚುನಾಯಿತರಾದ ಪ್ರಥಮ ಮಂಡಲಿಯ ಸದಸ್ಯರು ನಿಯಮಿಸಬಹುದಾದಂಥ ರೀತಿಯಲ್ಲಿ ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಮತ್ತು ಇತರೆ ಪದಾಧಿಕಾರಿಗಳನ್ನು ಆಯ್ಕೆ ಮಾಡತಕ್ಕದ್ದು.

(2) ಮುಖ್ಯ ಕಾರ್ಯನಿರ್ವಾಹಕನು ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪ ಚೇರ್‌ಪರ್ಸನ್ ಅಥವಾ ಇತರ ಪದಾಧಿಕಾರಿಗಳ ಪದವು ಆಕಸ್ಮಿಕವಾಗಿ ಖಾಲಿಯಾದಾಗಲೆಲ್ಲಾ, ಅಂಥ ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿಮಾಡುವ ಉದ್ದೇಶಕ್ಕಾಗಿ ಮಂಡಲಿಯ ಸದಸ್ಯರ ಸಭೆಯನ್ನು ಕರೆಯತಕ್ಕದ್ದು ಮತ್ತು ಉಪಪ್ರಕರಣ (1)ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(3) ಮುಖ್ಯ ಕಾರ್ಯನಿರ್ವಾಹಕನು, ಸಭೆಯ ದಿನಾಂಕದಿಂದ ಮೂರು ದಿನಗಳ ಒಳಗಾಗಿ ಸಭೆ ಕರೆಯುವ ನೋಟೀಸಿನ ಒಂದು ಪ್ರತಿಯನ್ನು ಹಾಗೂ ಸಭೆಯ ನಡಾವಳಿಗಳ ಒಂದು ಪ್ರತಿಯನ್ನು ಸಹ ರಿಜಿಸ್ಟ್ರಾರರಿಗೆ ಹಾಗೂ ಸಹಕಾರಿ ಚುನಾವಣಾ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(4) ಮುಖ್ಯ ಕಾರ್ಯನಿರ್ವಾಹಕನು ಉಪಪ್ರಕರಣ (1) ಮತ್ತು (2)ರ ಅನುಸಾರವಾಗಿ ಸಭೆ ಕರೆಯಲು ವಿಫಲವಾದರೆ ಸಹಕಾರಿ ಚುನಾವಣಾ ಪ್ರಾಧಿಕಾರ ಅಥವಾ ಸಭೆಯನ್ನು ಕರೆಯಲು ಅದರ ಮೂಲಕ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಸದರಿ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಲಾದ ಉದ್ದೇಶಗಳಿಗಾಗಿ ಸಭೆಯನ್ನು ಕರೆಯತಕ್ಕದ್ದು."

**(ii)** ಹಾಗೆ ಪ್ರತಿಯೋಜಿಸಲಾದ ಉಪಪ್ರಕರಣ (1), (2), (3) ಮತ್ತು (4)ರ ತರುವಾಯ ಅಸ್ತಿತ್ವದಲ್ಲಿರುವ ಉಪಪ್ರಕರಣಗಳಾದ (2) ಮತ್ತು (3)ನ್ನು ಉಪಪ್ರಕರಣ (5) ಮತ್ತು (6)ಗಳೆಂದು ಮರುಸಂಖ್ಯೆ ನೀಡತಕ್ಕದ್ದು.

**13. ಪ್ರಕರಣ 29ರ ತಿದ್ದುಪಡಿ.-** ಮೂಲ ಅಧಿನಿಯಮದ 29ನೇ ಪ್ರಕರಣದಲ್ಲಿ,-

(i) "ಭರ್ತಿ ಮಾಡಿಕೊಳ್ಳಬಹುದು" ಎಂಬ ಪದಗಳ ಬದಲಾಗಿ "ಭರ್ತಿ ಮಾಡತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) "ಮಂಡಲಿಯು ತನ್ನ ಮೂಲ ಪದಾವಧಿಯ ಅರ್ಧದಷ್ಟಕ್ಕಿಂತ ಕಡಿಮೆ ಉಳಿದಿದ್ದಾಗ ಮಾತ್ರ," ಎಂಬ ಪದಗಳು ಮತ್ತು ಅಲ್ಪವಿರಾಮ ಚಿಹ್ನೆಯನ್ನು ಬಿಟ್ಟುಬಿಡತಕ್ಕದ್ದು.

**14. ಪ್ರಕರಣ 31ರ ತಿದ್ದುಪಡಿ.-** ಮೂಲ ಅಧಿನಿಯಮದ 31 ನೇ ಪ್ರಕರಣದ ಉಪಪ್ರಕರಣ (2) ರ ಖಂಡ (ಐ-6) ರ ತರುವಾಯ ಈ ಮುಂದಿನ (ಐ-7) ಅನ್ನು ಸೇರಿಸತಕ್ಕದ್ದು, ಎಂದರೆ:-

"(ಐ-7) ಪ್ರತಿ ಆರ್ಥಿಕ ವರ್ಷದ ಅಂತ್ಯಕ್ಕೆ ಅವನು/ಅವಳು ಮತ್ತು ಅವಳ/ಅವನ ಕುಟುಂಬದವರ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸಲು ವಿಫಲರಾದ್ದಲ್ಲಿ.

**ವಿವರಣೆ.-** ಈ ಖಂಡದ ಉದ್ದೇಶಕ್ಕಾಗಿ 'ಕುಟುಂಬ' ಎಂದರೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಅವನ/ಅವಳ ಪತ್ನಿ/ಪತಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ."

೬

**15. ಪ್ರಕರಣ 33ರ ತಿದ್ದುಪಡಿ.-** ಮೂಲ ಅಧಿನಿಯಮದ 33ನೇ ಪ್ರಕರಣದಲ್ಲಿ (1)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1ಎ) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಅರ್ಬನ್ ಕೋ ಅಪರೇಟಿವ್ ಬ್ಯಾಂಕುಗಳನ್ನು ಹೊರತುಪಡಿಸಿ, ಪ್ರತಿಯೊಂದು ಸಹಕಾರಿಯು ಸಹಕಾರಿ ಲೆಕ್ಕ ಪರಿಶೋಧನಾ ನಿರ್ದೇಶಕರಿಂದ ಮೂರು ವರ್ಷಗಳಲ್ಲಿ ಒಂದು ಬಾರಿ ತನ್ನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಮಾಡಿಸತಕ್ಕದ್ದು."

**16. ಪ್ರಕರಣ 38ರ ತಿದ್ದುಪಡಿ.-** ಮೂಲ ಅಧಿನಿಯಮದ 38ನೇ ಪ್ರಕರಣದಲ್ಲಿನ (1)ನೇ ಉಪ ಪ್ರಕರಣದ ಎರಡನೇ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**17. ಪ್ರಕರಣ 38ಎ ತಿದ್ದುಪಡಿ.-** ಮೂಲ ಅಧಿನಿಯಮದ 38ಎ ಪ್ರಕರಣದಲ್ಲಿನ, (4)ನೇ ಉಪ ಪ್ರಕರಣದ ನಂತರ ಈ ಮುಂದಿನ ಉಪ-ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"(5) ಪ್ರಕರಣ 48ರ ಉಪ-ಪ್ರಕರಣ (6ಎ) ರಡಿಯಲ್ಲಿ ಉಪಬಂಧಿಸಲಾದಂತೆ ಸೌಹಾರ್ದ ಸಹಕಾರಿ ಸಂಘದ ಚುನಾವಣೆಯನ್ನು ನಡೆಸಲು ಸಂಯುಕ್ತ ಸಹಕಾರಿಯು ಒಬ್ಬ ವಿಶೇಷಾಧಿಕಾರಿಯನ್ನು ನೇಮಿಸತಕ್ಕದ್ದು."

**18. ಪ್ರಕರಣ 48ರ ತಿದ್ದುಪಡಿ.-** ಮೂಲ ಅಧಿನಿಯಮದ 48ನೇ ಪ್ರಕರಣದಲ್ಲಿನ (6)ನೇ ಉಪ ಪ್ರಕರಣದ ತರುವಾಯ ಈ ಮುಂದಿನ ಉಪ-ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"(6ಎ) ರಿಜಿಸ್ಟ್ರಾರ್‌ನು ಸೌಹಾರ್ದ ಸಹಕಾರಿ ಸಂಘದ ಸಮಾಪನೆಯ ಆದೇಶವನ್ನು ರದ್ದುಪಡಿಸುವ ಆದೇಶವನ್ನು ಹೊರಡಿಸಿದ ನಂತರ ಫೆಡರಲ್ ಸಹಕಾರಿಯು ಸಹಕಾರ ಸಂಘದ ಚುನಾವಣೆಯನ್ನು ನಡೆಸಲು ಒಬ್ಬ ವಿಶೇಷಾಧಿಕಾರಿಯನ್ನು ನೇಮಿಸತಕ್ಕದ್ದು."

**19. ಪ್ರಕರಣ 53ರ ತಿದ್ದುಪಡಿ.-** ಮೂಲ ಅಧಿನಿಯಮದ 53ನೇ ಪ್ರಕರಣದ, (7)ನೇ ಉಪಪ್ರಕರಣದ ಖಂಡ (ಯು) ರ ತರುವಾಯ ಈ ಮುಂದಿನ ಖಂಡಗಳನ್ನು ಸೇರಿಸತಕ್ಕದ್ದು, ಎಂದರೆ:-

"(ವಿ) ಸೌಹಾರ್ದ ಸಹಕಾರಿಯ ಆಡಳಿತ ಮಂಡಲಿಯ ನಿರ್ದೇಶಕರು ಅಥವಾ ನೌಕರರು ಯಾವುದೇ ಅಕ್ರಮ ಅಥವಾ ದುರ್ವಿನಿಯೋಗ ಅಥವಾ ವಂಚನೆ ಮಾಡಿರುವುದು ಪ್ರಕರಣ 33 ಅಥವಾ 35 ಅಥವಾ ಪ್ರಕರಣ 53ರ ಉಪಪ್ರಕರಣ (7)ರ ಖಂಡ (ಯು) ರಡಿ ನೀಡಿದ ವರದಿಯಲ್ಲಿ ಕಂಡುಬಂದರೆ ಫೆಡರಲ್ ಸೌಹಾರ್ದ ಸಹಕಾರಿಯು ಸದರಿ ವರದಿಯಲ್ಲಿ ಒಳಗೊಂಡಿರುವ ವ್ಯಕ್ತಿಯ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡತಕ್ಕದ್ದು;

(ಡಬ್ಲ್ಯೂ) ಸದಸ್ಯ ಸಹಕಾರಿಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿ ಈ ಅಧಿನಿಯಮ ಮತ್ತು ಅದರಡಿ ರಚಿಸಿದ ನಿಯಮಗಳ ಉಪಬಂಧಗಳಡಿ ಸುತ್ತೋಲೆಗಳು/ನಿರ್ದೇಶನಗಳನ್ನು ಹೊರಡಿಸತಕ್ಕದ್ದು."

**20. ಪ್ರಕರಣ 54ರ ತಿದ್ದುಪಡಿ.-** ಮೂಲ ಅಧಿನಿಯಮದ 54ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿನ ಮೂರನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2-ಎ) ಮಂಡಲಿಯಲ್ಲಿ ಗರಿಷ್ಠ ಸದಸ್ಯರ ಸಂಖ್ಯೆ ಮತ್ತು ಸ್ಥಾನಗಳ ಮೀಸಲಾತಿಗೆ ಸಂಬಂಧಿಸಿದ 24ನೇ ಪ್ರಕರಣದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಫೆಡರಲ್ ಸಹಕಾರಿಗೆ ಅನ್ವಯವಾಗತಕ್ಕದ್ದು."

೭

**21. ಪ್ರಕರಣ 55ರ ತಿದ್ದುಪಡಿ.-** ಮೂಲ ಅಧಿನಿಯಮದ 55ನೇ ಪ್ರಕರಣದ (2)ನೇ ಉಪಪ್ರಕರಣದ ಖಂಡ (ಇ) ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಎಫ್) ಪ್ರತಿ ಆರ್ಥಿಕ ವರ್ಷದ ಅಂತ್ಯಕ್ಕೆ ಅವನು/ಅವಳು ಮತ್ತು ಅವಳ/ಅವನ ಕುಟುಂಬದವರ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸಲು ವಿಫಲವಾದರೆ;

**ವಿವರಣೆ**.- ಈ ಖಂಡದ ಉದ್ದೇಶಕ್ಕಾಗಿ 'ಕು ಂಬ' ಎಂದರೆ ``ನಿರ್ದೇಶಕ ಅವನ/ಅವಳ ಪತ್ನಿ/ಪತಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ."

**22. 58ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ, 58ನೇ ಪ್ರಕರಣದ,-

(i) (1)ನೇ ಉಪ ಪ್ರಕರಣದಲ್ಲಿನ "ಮತ್ತು ಪದಾಧಿಕಾರಿಗಳ ಪದಕ್ಕೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ii) (4)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(5) ಮುಖ್ಯ ಕಾರ್ಯನಿರ್ವಾಹಕನು ಮಂಡಲಿಯು ರಚನೆಯಾದ ದಿನಾಂಕದಿಂದ ಅಥವಾ ಸಾಮಾನ್ಯ ಚುನಾವಣೆಯ ನಂತರ ಮಂಡಲಿಯು ರಚನೆಯಾಗಿದೆಯೆಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ, ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಪದಾವಧಿಯು ಮುಕ್ತಾಯವಾಗುವ ನಿಕಟ ಪೂರ್ವದಲ್ಲಿ, ತಕ್ಷಣವೇ ಸಹಕಾರ ಸಂಘಗಳ ಉಪವಿಧಿಗಳ ಮೇರೆಗೆ ಚುನಾಯಿಸಬೇಕಾದ ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಮತ್ತು ಅಗತ್ಯಪಡಿಸಲಾದಂಥ ಇತರ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ ನಿಯಮಿಸಿದ ರೀತಿಯಲ್ಲಿ ಮಂಡಲಿಯ ಎಲ್ಲಾ ಸದಸ್ಯರ ಸಭೆಯನ್ನು ಕರೆಯತಕ್ಕದ್ದು. ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಚುನಾವಣೆಗಾಗಿ ಅಭ್ಯರ್ಥಿಯಾಗಿರದ ಸದಸ್ಯರಲ್ಲಿ ಒಬ್ಬರನ್ನು ಅಂಥ ಸಭೆಯ ಅಧ್ಯಕ್ಷತೆ ವಹಿಸುವುದಕ್ಕೆ ಆಯ್ಕೆ ಮಾಡತಕ್ಕದ್ದು:

ಪರಂತು ಸಹಕಾರಿಯ ನೋಂದಣಿಯ ತರುವಾಯ ನಡೆದ ಮೊದಲ ಸಾಮಾನ್ಯ ಸಭೆಯಲ್ಲಿ ಚುನಾಯಿತರಾದ ಪ್ರಥಮ ಮಂಡಲಿಯ ಸದಸ್ಯರು ನಿಯಮಿಸಬಹುದಾದಂಥ ರೀತಿಯಲ್ಲಿ ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಮತ್ತು ಇತರೆ ಪದಾಧಿಕಾರಿಗಳನ್ನು ಆಯ್ಕೆ ಮಾಡತಕ್ಕದ್ದು.

(6) ಮುಖ್ಯ ಕಾರ್ಯನಿರ್ವಾಹಕನು ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪ ಚೇರ್‌ಪರ್ಸನ್ ಅಥವಾ ಇತರ ಪದಾಧಿಕಾರಿಗಳ ಪದವು ಆಕಸ್ಮಿಕವಾಗಿ ಖಾಲಿಯಾದಾಗಲೆಲ್ಲಾ, ಅಂಥ ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿಮಾಡುವ ಉದ್ದೇಶಕ್ಕಾಗಿ ಮಂಡಲಿಯ ಸದಸ್ಯರ ಸಭೆಯನ್ನು ಕರೆಯತಕ್ಕದ್ದು ಮತ್ತು ಉಪಪ್ರಕರಣ (5)ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(7) ಮುಖ್ಯ ಕಾರ್ಯನಿರ್ವಾಹಕನು, ಸಭೆಯ ದಿನಾಂಕದಿಂದ ಮೂರು ದಿನಗಳ ಒಳಗಾಗಿ ಸಭೆ ಕರೆಯುವ ನೋಟೀಸಿನ ಒಂದು ಪ್ರತಿಯನ್ನು ಹಾಗೂ ಸಭೆಯ ನಡಾವಳಿಗಳ ಒಂದು ಪ್ರತಿಯನ್ನು ಸಹ ರಿಜಿಸ್ಟ್ರಾರರಿಗೆ ಹಾಗೂ ಸಹಕಾರಿ ಚುನಾವಣಾ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(8) ಮುಖ್ಯ ಕಾರ್ಯನಿರ್ವಾಹಕನು ಉಪಪ್ರಕರಣ (5) ಮತ್ತು (6)ರ ಅನುಸಾರವಾಗಿ ಸಭೆ ಕರೆಯಲು ವಿಫಲವಾದರೆ ಸಹಕಾರಿ ಚುನಾವಣಾ ಪ್ರಾಧಿಕಾರ ಅಥವಾ ಸಭೆಯನ್ನು ಕರೆಯಲು ಅದರ

೮

ಮೂಲಕ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಸದರಿ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಲಾದ ಉದ್ದೇಶಗಳಿಗಾಗಿ ಸಭೆಯನ್ನು ಕರೆಯತಕ್ಕದ್ದು."

**23. 59ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ, 59ನೇ ಪ್ರಕರಣದಲ್ಲಿನ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**24. 60ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ, 60ನೇ ಪ್ರಕರಣದಲ್ಲಿನ ಉಪಪ್ರಕರಣ (3ಎ) ರಲ್ಲಿನ "ಶೇಕಡಾ ಇಪ್ಪತ್ತಕ್ಕಿಂತ ಕಡಿಮೆ ಇರತಕ್ಕದ್ದಲ್ಲ" ಎಂಬ ಪದಗಳ ಬದಲಿಗೆ " ಶೇಕಡಾ ಹತ್ತಕ್ಕಿಂತ ಕಡಿಮೆಯಿಲ್ಲದ ಅಥವಾ ಒಂದು ಸಾವಿರ ಯಾವುದು ಕಡಿಮೆಯೋ ಅದು" ಎಂಬ ಪದಗಳನ್ನು ಪ್ರತಿಯೋಜಿಸಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

## ರಾಜ್ಯದ ಸೌಹಾರ್ದ ಸಹಕಾರಿಗಳ ಗಮನಕ್ಕೆ

ಇತ್ತೀಚೆಗೆ ಜಿಎಸ್‌ಟಿ ಕೌನ್ಸಿಲ್ ತನ್ನ 56ನೇ ಸಭೆಯಲ್ಲಿ ದಿನ ಬಳಕೆ ವಸ್ತುಗಳ ಮೇಲೆ, ಐಷಾರಾಮಿ ವಸ್ತುಗಳ ಮೇಲೆ ಮತ್ತು ತಂಬಾಕು ಉತ್ಪನ್ನಗಳ ಮೇಲೆ ಇರುವ ಜಿಎಸ್‌ಟಿ ದರದಲ್ಲಿ ಗಮನಾರ್ಹ ಬದಲಾವಣೆಗಳನ್ನು ತಂದಿರುವ ಸಂಗತಿ ತಮಗೆ ತಿಳಿದಿರುತ್ತದೆ.

ಆದರೆ ಈ ಮೂಲಕ ತಮಗೆ ಸ್ಪಷ್ಟಪಡಿಸುವುದೆಂದರೆ ಸಂಯುಕ್ತ ಸಹಕಾರಿಗೆ ಪಾವತಿಸುವ ವಾರ್ಷಿಕ ಶುಲ್ಕ, ತರಬೇತಿಯ ಪ್ರತಿನಿಧಿ ಶುಲ್ಕ ಹಾಗು ಶಾಖೆಗಳ ಪ್ರಮಾಣ ಪತ್ರದ ಶುಲ್ಕಗಳ ಮೇಲೆ ವಿಧಿಸುವ ಜಿಎಸ್‌ಟಿ ದರದಲ್ಲಿ ಯಾವುದೇ ಬದಲಾವಣೆ ಆಗಿರುವುದಿಲ್ಲ ಹಾಗೂ ಮುದ್ರಾಂಕ ಶುಲ್ಕ (Stamp Duty) ಗೆ ಜಿ.ಎಸ್.ಟಿ ಅನ್ವಯವಾಗುವುದಿಲ್ಲ. ಆದರೆ ಇ-ಸ್ಟ್ಯಾಂಪ್ ಬಾಂಡ್‌ಗಳನ್ನು ಒದಗಿಸಿ ಪಡೆಯುವ ಸೇವಾ ಶುಲ್ಕ ಹಾಗೂ ಕಮಿಷನ್ ಮೊತ್ತಕ್ಕೆ ಶೇ.18% ಜಿ.ಎಸ್.ಟಿ ಅನ್ವಯವಾಗುತ್ತದೆ ಹೀಗಾಗಿ ಸಹಕಾರಿಗಳು ಸಂಯುಕ್ತ ಸಹಕಾರಿಯಿಂದ ಪಡೆಯುವ ಸೇವೆಗಳಿಗೆ ಜಿಎಸ್‌ಟಿ ದರವು ಶೇ.18% ಯನ್ನು ಯಥಾವತ್ತಾಗಿ ಪಾವತಿಸಬೇಕಿರುತ್ತದೆ.

**- ಹಣಕಾಸು ವಿಭಾಗದ ಮುಖ್ಯಸ್ಥರು**

## ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ

**ಉಡುಪಿ :** ಮೂಕಾಂಬಿಕಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಹಕ್ಕುಗಳು, ಕರ್ತವ್ಯಗಳ ಕುರಿತು ಹಾಗೂ ಸಹಕಾರಿಯ ಕಾರ್ಯಚಟುವಟಿ-ಕೆಗಳ ಕುರಿತು ಉಡುಪಿ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ವಿಜಯ್ ಬಿ.ಎಸ್ ರವರು ಮಾಹಿತಿ ನೀಡಿದರು.

## ರಾಜ್ಯದ ಪ್ರಥಮ ಸಿ.ಎಸ್.ಸಿ ಕೇಂದ್ರ ಪ್ರಾರಂಭ

**ಉಡುಪಿ :** ರಾಜ್ಯದಲ್ಲಿ ಪ್ರಥಮ ಸಿ.ಎಸ್.ಸಿ ಕೇಂದ್ರವನ್ನು ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಆತ್ಮಿಕಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಇದರಲ್ಲಿ ಪ್ರಾರಂಭಿಸಲಾಗಿದ್ದು ಸದರಿ ಸಹಕಾರಿಯು ಸಿ.ಎಸ್.ಸಿ ಸೆಂಟರ್ ನ ಸೌಲಭ್ಯವನ್ನು ಸಹಕಾರಿ ಸದಸ್ಯರಿಗೆ ನೀಡುತ್ತಿದೆ.

# ಕೇಂದ್ರ ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಸುತ್ತೋಲೆಯ ಮಾದರಿಯಲ್ಲಿ ಸೌಹಾರ್ದ ಸಹಕಾರಿಗಳು ಠೇವಣಿ ಸ್ವೀಕರಿಸುವ ಬಗ್ಗೆ ಪ್ರದರ್ಶಿಸುವ ಕುರಿತು ಸುತ್ತೋಲೆ

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಒ 141 ಪಿಎಂಸಿ 2025

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ
ಬೆಂಗಳೂರು, ದಿನಾಂಕ: 16-09-2025

**ಸುತ್ತೋಲೆ**

**ವಿಷಯ:-** ಕೇಂದ್ರ ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಸುತ್ತೋಲೆಯ ಮಾದರಿಯಲ್ಲಿ ಸೌಹಾರ್ದ ಸಹಕಾರಿಗಳು ಠೇವಣಿ ಸ್ವೀಕರಿಸುವ ಬಗ್ಗೆ ಪ್ರದರ್ಶಿಸುವ ಕುರಿತು.

**ಉಲ್ಲೇಖ:-**
1. ಕೇಂದ್ರ ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಸುತ್ತೋಲೆ ಸಂಖ್ಯೆ: R-11017/12(1)/2021-L&M ದಿನಾಂಕ: 25-06-2021
2. ಸಹಕಾರ ಸಂಘಗಳ ನಿಬಂಧಕರ ಕಛೇರಿ ಕಡತ ಸಂಖ್ಯೆ: RCS/RSR/SOU/1/2025-MLPB

*************

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಡಿ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳು ಠೇವಣಿಯ ಮೇಲೆ ಅಧಿಕ ಬಡ್ಡಿದರವನ್ನು ನೀಡಿ ಸಾರ್ವಜನಿಕರಿಂದ/ ಸದಸ್ಯರಿಂದ ಠೇವಣಿಯನ್ನು ಸಂಗ್ರಹಿಸುತ್ತಿರುವುದು ಮತ್ತು ಸಂಗ್ರಹಿಸಿದ ಠೇವಣಿಯನ್ನು ವಿವೇಕಯುತವಾಗಿ/ ಗುಣಾತ್ಮಕವಾಗಿ ವ್ಯವಹಾರ ಮಾಡದೆ ಠೇವಣಿದಾರರಿಗೆ ಠೇವಣಿ ಹಣವನ್ನು ಮರುಪಾವತಿ ಮಾಡದೆ ಇರುವ ಪ್ರಕರಣಗಳು ಕಂಡು ಬರುತ್ತಿವೆ.

ಉಲ್ಲೇಖಿತ (1) ರ ಸುತ್ತೋಲೆಯ ಮೂಲಕ ಕೇಂದ್ರ ಸಹಕಾರ ಸಂಘಗಳ ನಿಬಂಧಕರು ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆ 2002 ರಡಿ ನೋಂದಣಿಗೊಂಡು ಠೇವಣಿ ಸ್ವೀಕರಿಸುತ್ತಿರುವ ಸಹಕಾರ ಸಂಘಗಳಿಗೆ ಅವುಗಳ ಕೇಂದ್ರ ಕಛೇರಿ , ಎಲ್ಲಾ ಶಾಖೆಗಳ ಪ್ರವೇಶ ದ್ವಾರದಲ್ಲಿ ಮತ್ತು ತಮ್ಮ ವೆಬ್‌ಸೈಟ್‌ಗಳಲ್ಲಿ ಪ್ರಾದೇಶಿಕ/ಸ್ಥಳೀಯ ಭಾಷೆಗಳಲ್ಲಿ ಈ ಕೆಳಗಿನಂತೆ ಪ್ರದರ್ಶಿಸತಕ್ಕದ್ದು ಎಂದು ನಿರ್ದೇಶಿಸಿರುತ್ತಾರೆ.

" Multi-State Cooperative Societies are functioning as autonomous cooperative organizations accountable to their members and not under the administrative control of the Central Registrar, Ministry of Agriculture and Farmers' Welfare. Therefore, the depositors / members are advised to take decision for investing deposits based on the performance of the society at their own risk. Central Registrar, Ministry of Agriculture and Farmers' Welfare does not provide any guarantee for these deposits".

ಸೌಹಾರ್ದ ಸಹಕಾರಿಗಳು ಸ್ವಯಂ ಆಡಳಿತ, ಸ್ವಾಯತ್ತತೆ ಹಾಗೂ ಸ್ವಯಂ ನಿಯಂತ್ರಣವನ್ನು ಧ್ಯೇಯವಾಗಿರಿಸಿಕೊಂಡು ಕಾರ್ಯನಿರ್ವಹಿಸುತ್ತಿವೆ. ಆದ್ದರಿಂದ ಬಹುರಾಜ್ಯ ಸಹಕಾರ ಸಂಘಗಳಿಗೆ ಉಲ್ಲೇಖಿತ (1) ರ ಸುತ್ತೋಲೆಯಲ್ಲಿ ನೀಡಿದ ನಿರ್ದೇಶನದ ಮಾದರಿಯಂತೆ ಸೌಹಾರ್ದ ಸಹಕಾರಿಗಳಿಗು ಸಹ ಅವುಗಳ ಕೇಂದ್ರ ಕಛೇರಿ, ಎಲ್ಲಾ ಶಾಖೆಗಳ ಪ್ರವೇಶ ದ್ವಾರದಲ್ಲಿ ಮತ್ತು ತಮ್ಮ ವೆಬ್‌ಸೈಟ್‌ಗಳಲ್ಲಿ ಈ ಕೆಳಕಂಡಂತೆ ಪ್ರದರ್ಶಿಸುವ ಕುರಿತು ಅಗತ್ಯ ಕ್ರಮವಿಡುವಂತೆ ಈ ಮೂಲಕ ಸೂಚಿಸಿದೆ.

**"ಸೌಹಾರ್ದ ಸಹಕಾರಿ ಸಂಘಗಳು ತಮ್ಮ ಸದಸ್ಯರಿಗೆ ಜವಾಬ್ದಾರರಾಗಿರುವ ಸ್ವಯಂ ಆಡಳಿತ, ಸ್ವಾಯತ್ತತೆ ಹಾಗೂ ಸ್ವಯಂ ನಿಯಂತ್ರಣವನ್ನು ಧ್ಯೇಯವಾಗಿರಿಸಿಕೊಂಡು ಕಾರ್ಯನಿರ್ವಹಿಸುತ್ತಿವೆ. ಆದ್ದರಿಂದ, ಠೇವಣಿದಾರರು/ ಸದಸ್ಯರು ತಮ್ಮ ಸ್ವಂತ ಜವಾಬ್ದಾರಿಯಲ್ಲಿ ಸೌಹಾರ್ದ ಸಹಕಾರಿ ಸಂಘದ ವಿವೇಕಯುತ / ಗುಣಾತ್ಮಕ ಕಾರ್ಯನಿರ್ವಹಣೆಯ ಕ್ಷಮತೆಯ ಆಧಾರದ ಮೇಲೆ ಠೇವಣಿಗಳನ್ನು ಹೂಡಿಕೆ ಮಾಡುವ ನಿರ್ಧಾರ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ. ಸಹಕಾರ ಇಲಾಖೆಯು ಈ ಠೇವಣಿಗಳಿಗೆ ಯಾವುದೇ ಗ್ಯಾರಂಟಿ ನೀಡುವುದಿಲ್ಲ".**

ಮುಂದುವರೆದು ಈ ಬಗ್ಗೆ ಸರ್ಕಾರದಿಂದ ಕಾಲಕಾಲಕ್ಕೆ ನೀಡಿದ ನಿರ್ದೇಶನ/ಮಾರ್ಗಸೂಚಿಗಳನ್ನೂ ಸಹ ಕಡ್ಡಾಯವಾಗಿ ಪಾಲಿಸತಕ್ಕದ್ದು.

16/9/25

**(ಎ.ಸಿ.ದಿವಾಕರ್)**
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ

## ಉದ್ಘಾಟನೆ





**ತುಮಕೂರು** : ದಿನಾಂಕ 03.09.2025ರಂದು ಶ್ರೀ ಮಾತಾ ವಿವಿದೋದ್ದೇಶ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ಪಾವಗಡ ಸಹಕಾರಿಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ಜರುಗಿತು. ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವರು ಹಾಗೂ ಮಾಜಿ ಶಾಸಕರಾದ ಶ್ರೀ ವೆಂಕಟರಮಣಪ್ಪ ರವರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು, ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ. ಎಸ್. ರಾಮಮೂರ್ತಿ ರವರನ್ನು ಸಂಯುಕ್ತ ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿ ವರ್ಗ ಮತ್ತು ಸಹಕಾರಿಯ ಸದಸ್ಯರು ಭಾಗವಹಿಸಿದ್ದರು.

---



**ತುಮಕೂರು** : ದಿನಾಂಕ 03.09.2025ರಂದು ದಿ ಪಾವಗಡ ಮಲ್ಟಿಪರ್ಪಸ್ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿ, ಪಾವಗಡ ಶಾಖೆ ಇಲ್ಲಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಹಾಗೂ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಪಾವಗಡ ಸೌಹಾರ್ದ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ನಿರ್ದೇಶಕರನ್ನು ಸನ್ಮಾನಿಸಲಾಯಿತು. ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್. ರವರು ಭಾಗವಹಿಸಿದ್ದರು.

---



**ಬೆಳಗಾವಿ** : ನಾಗನೂರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ನಾಗನೂರ ಇದರ 18ನೇ ಶಾಖೆಯು ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಮುಗಳಖೋಡ ಗ್ರಾಮದಲ್ಲಿ ಪರಮ ಪೂಜ್ಯರ ದಿವ್ಯ ಸಾನಿಧ್ಯದಲ್ಲಿ ಮತ್ತು ಮಾಜಿ ಸಚಿವರಾದ ಮಾನ್ಯ ಶ್ರೀ ಮುರುಗೇಶ ನಿರಾಣಿ ಅವರ ಉಪಸ್ಥಿತಿಯಲ್ಲಿ ದಿನಾಂಕ 04.08.2025ರಂದು ವಿಜೃಂಭಣೆಯಿಂದ ಉದ್ಘಾಟನೆಗೊಂಡಿತು. ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು, ಪ್ರಧಾನ ವ್ಯವಸ್ಥಾಪಕರು, ಸಿಬ್ಬಂದಿ ವರ್ಗ ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

ನಾಗನೂರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ನಾಗನೂರ ಇದರ 19ನೇ ಶಾಖೆಯು ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಹಲ್ಯಾಳ ಗ್ರಾಮದಲ್ಲಿ ಪರಮ ಪೂಜ್ಯರ ದಿವ್ಯ ಸಾನಿಧ್ಯದಲ್ಲಿ ಮತ್ತು ರಾಜಕೀಯ ಗಣ್ಯರ ಉಪಸ್ಥಿತಿಯಲ್ಲಿ ಇಂದು ವಿಜೃಂಭಣೆಯಿಂದ ಉದ್ಘಾಟನೆ ಗೊಂಡಿತು. ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು, ಪ್ರಧಾನ ವ್ಯವಸ್ಥಾಪಕರು, ಸಿಬ್ಬಂದಿ ವರ್ಗ ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

ನಾಗನೂರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ನಾಗನೂರ ಇದರ 15ನೇ ಶಾಖೆಯು ಬೆಳಗಾವಿ ಜಿಲ್ಲೆಯ ಯರಗಟ್ಟಿ ತಾಲೂಕಿನ ಸಾಲಹಳ್ಳಿ ಗ್ರಾಮದಲ್ಲಿ ಪರಮ ಪೂಜ್ಯರ ದಿವ್ಯ ಸಾನಿಧ್ಯದಲ್ಲಿ ಮತ್ತು ರಾಜಕೀಯ ಗಣ್ಯರ ಉಪಸ್ಥಿತಿಯಲ್ಲಿ ದಿನಾಂಕ: 25.07.2025ರಂದು ವಿಜೃಂಭಣೆಯಿಂದ ಉದ್ಘಾಟನೆಗೊಂಡಿತು. ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು, ಪ್ರಧಾನ ವ್ಯವಸ್ಥಾಪಕರು, ಸಿಬ್ಬಂದಿ ವರ್ಗ ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

## 25ನೇ ವರ್ಷದ ಬೆಳ್ಳಿ ಮಹೋತ್ಸವ



**ಹಾವೇರಿ** : ದಿನಾಂಕ 12/09/2025 ರಂದು ಶ್ರೀ ಸುವರ್ಣ ಪತ್ತಿನ ಸೌಹಾರ್ದ ಸಹಕಾರಿ ನಿ, ಹಾವೇರಿ ಸಹಕಾರಿಯ 25ನೇ ವರ್ಷದ ಬೆಳ್ಳಿ ಮಹೋತ್ಸವ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪರಮಪೂಜ್ಯ ಶ್ರೀ ಮ. ನಿ. ಪ್ರ. ಸದಾಶಿವ ಮಹಾಸ್ವಾಮಿಗಳು, ಶ್ರೀ ಹುಕ್ಕೇರಿಮಠ ಹಾವೇರಿ ಹಾಗೂ ಉಪಾಧ್ಯಕ್ಷರು, ಶ್ರೀ ಶಿವಯೋಗ ಮಂದಿರ ಸಂಸ್ಥೆ ತಾ!! ಬದಾಮಿ ಇವರು ವಹಿಸಿದ್ದರು.

ಉದ್ಘಾಟನೆಯನ್ನು ಸನ್ಮಾನ್ಯ ಶ್ರೀ ಬಸವರಾಜ್ ಎಸ್. ಬೊಮ್ಮಾಯಿ, ಲೋಕಸಭಾ ಸದಸ್ಯರು ಹಾಗೂ ಮಾಜಿ ಮುಖ್ಯಮಂತ್ರಿಗಳು ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಉದಯ್ ಡಿ, ಕುರುಡೇಕರ್, ಮಾನ್ಯ ಅಧ್ಯಕ್ಷರು, ಶ್ರೀ ಸುವರ್ಣ ಪತ್ತಿನ ಸೌಹಾರ್ದ ಸಹಕಾರಿ ನಿ,. ಹಾವೇರಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ,. ಬೆಂಗಳೂರು. ಮತ್ತು ಶ್ರೀ ಕೆ. ಶಿವಲಿಂಗಪ್ಪ, ಮಾನ್ಯ ನಿರ್ದೇಶಕರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ,. ಬೆಂಗಳೂರು ಇವರು ಉಪಸ್ಥಿತರಿದ್ದರು. ಆಹ್ವಾನಿತರಾಗಿ ಶ್ರೀಮತಿ ವಿದ್ಯಾ ವನಶೆಟ್ಟಿ, ಉಪನಿರ್ದೇಶಕರು, ಸಹಕಾರಿ ಸಂಘಗಳ ಲೆಕ್ಕಪ–ರಿಶೋಧನಾ ಇಲಾಖೆ, ಹಾವೇರಿ, ಸನ್ನದು ಲೆಕ್ಕ ಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ, ನ್ಯಾಯವಾದಿಗಳಾದ ಶ್ರೀ ಎಸ್. ಆರ್. ಹೆಗಡೆ ಹಾಗೂ ಸಹಕಾರಿಯ ಸದಸ್ಯರು ಮತ್ತು ಸಿಬ್ಬಂದಿ ವರ್ಗ ಭಾಗವಹಿಸಿದ್ದರು.

## ಪುತ್ಥಳಿ ಅನಾವರಣ ಮತ್ತು ಉತ್ತಮ ಸೌಹಾರ್ದ ಸಹಕಾರಿ ಸಂಘ ಪ್ರಶಸ್ತಿ ಪ್ರದಾನ



**ಮೈಸೂರು** : 31–08–2025 ರಂದು ಸಪ್ತರ್ಷಿ ಸೌಹಾರ್ದ ಸಹಕಾರಿ ಸಂಘ ನಿಯಮಿತ. ಮೈಸೂರು ಇದರ 28ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ಮತ್ತು ಪುತ್ಥಳಿ ಅನಾವರಣ ಹಾಗೂ ಸಹಕಾರಿ ಮೊಬೈಲ್ ಅಪ್ಲಿಕೇಶನ್ ಬಿಡುಗಡೆಯನ್ನು ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಹೆಚ್ ವಿ ರಾಜೀವ್ ರವರು ನೆರವೇರಿಸಿದರು. ಪ್ರಾಂತೀಯ ಅಧಿಕಾರಿಯವರಾದ ಶ್ರೀ ಗುರುಪ್ರಸಾದ್ ಬಂಗೇರ ಮೈಸೂರು ಇವರು ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಕಾಯ್ದೆಯ ಕುರಿತು ಹಾಗೂ ಸದಸ್ಯರ ಹಕ್ಕುಗಳು ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರು ಉಪಾಧ್ಯಕ್ಷರು ನಿರ್ದೇಶಕರುಗಳಾದ ಸದಸ್ಯರುಗಳು ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

ದಿನಾಂಕ 12.09.2025ರಂದು ನಡೆದ ಮೈಸೂರು ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಇದರ 71ನೇ ವಾರ್ಷಿಕ ಮಹಾಸಭೆಯಲ್ಲಿ ಸಪ್ತರ್ಷಿ ಸೌಹಾರ್ದ ಸಹಕಾರಿ ಸಂಘ ನಿ., ಮೈಸೂರು ಈ ಸಹಕಾರಿಯನ್ನು ಉತ್ತಮ ಸೌಹಾರ್ದ ಸಹಕಾರಿ ಸಂಘ ಎಂದು ಗುರುತಿಸಿ ಪ್ರಶಸ್ತಿ ಪ್ರದಾನವನ್ನು ಸಹಕಾರಿಯ ಪರವಾಗಿ ಉಪಾಧ್ಯಕ್ಷರಾದ ಶ್ರೀಮತಿ ಎಸ್. ಶ್ಯಾಮಲ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಯವರಾದ ಶ್ರೀ ಹೆಚ್.ಎ.ಪುರುಷೋತ್ತಮ ಇವರಿಗೆ ನೀಡಿ ಸನ್ಮಾನಿಸಿದರು ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರುಗಳು ಹಾಗೂ ಸಿಬ್ಬಂದಿಗಳು ಹಾಜರಿದ್ದರು.



**ಶಿವಮೊಗ್ಗ** : ದಿನಾಂಕ 15.09.2025ರಂದು ಶಿವಮೊಗ್ಗ ಜಿಲ್ಲೆಯ ಸಹ್ಯಾದ್ರಿ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ, ಶಿವಮೊಗ್ಗ ಇದರ 2024–25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ಒಕ್ಕೂಟದ ಅಧ್ಯಕ್ಷರು ಮತ್ತು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ 40 ಜನ ಸದಸ್ಯರು ಭಾಗವಹಸಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಉಪಸ್ಥಿರಿದ್ದರು.




**ಕಲಬುರಗಿ :** ದಿನಾಂಕ 07.09.2025 ರಂದು ಓಂ ಶ್ರೀ ವೀರಭದ್ರೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಕಲಬುರಗಿ .ಸದರಿ ಸಹಕಾರಿಯ ನೂತನ ಕಟ್ಟಡದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಭಾಗವಹಿಸಿದರು. ಕಟ್ಟಡದ ಉದ್ಘಾಟನೆಯನ್ನು ಮಾನ್ಯ ಸಚಿವರಾದ ಶ್ರೀ ಶರಣಬಸಪ್ಪಗೌಡ ದರ್ಶನಾಪುರ, ಶಾಸಕರಾದ ಶ್ರೀ ಬಸವರಾಜ ಮತ್ತಿಮೂಡ, ಶ್ರೀ ಬಸವಗೌಡ ಪಾಟೀಲ ಯತ್ನಾಳ, ಹಾಗೂ ಶಶಿಲ್ ನಮೋಶಿ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾ–ರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ್, ಶ್ರೀಮತಿ ಶೈಲಜಾ ತಪಲಿ. ಶ್ರೀ ಜಿ. ಶ್ರೀಧರ ರವರು ಹಾಗೂ ಮಾನ್ಯ ವ್ಯವಸ್ಥಾಪಕರಾದ ಶ್ರೀ ಶರಣಗೌಡ ಜಿ ಪಾಟೀಲರವರು, ಕಲಬುರಗಿ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಎಸ್ ಪಾಟೀಲರವರು, ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಉಪಸ್ಥಿತರಿದ್ದರು, ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಿವಕಾಂತ ಎನ್ ರವರು, ಹಿರಿಯ ಸಹಕಾರಿಗಳು ಸದಸ್ಯರುಗಳು ಉಪಸ್ಥಿತರಿದ್ದರು




**ಚಿತ್ರದುರ್ಗ :** ದಿನಾಂಕ 20.09.2025ರಂದು ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ, ಚಿತ್ರದುರ್ಗ ಜಿಲ್ಲೆ ಇದರ ವಾರ್ಷಿಕ ಸಾಮಾನ್ಯ ಸಭೆಯು ಮರ್ಚೆಂಟ್ಸ್ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ನಿ, ಇದರ ಕೇಂದ್ರ ಕಚೇರಿಯಲ್ಲಿ ಜರುಗಿತು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮ ರೆಡ್ಡಿ ರವರು ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ವೀರಭದ್ರ ಬಾಬು ರವರು ವಹಿಸಿದ್ದರು. ವೇದಿಕೆಯಲ್ಲಿ ಶ್ರೀ ತಿಪ್ಪೇಸ್ವಾಮಿ ರವರು ಹಾಗೂ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



**ಕೋಲಾರ :** ದಿನಾಂಕ 20.09.2025 ರಂದು ಸ್ವರ್ಣವಿಲಾಸ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ, ಕೆಜಿಎಫ್, ಕೋಲಾರ ಸಹಕಾರಿಯ 8ನೇ ವರ್ಷದ ಸರ್ವ ಸದಸ್ಯರ ಸಾಮಾನ್ಯ ಸಭೆ ಜರುಗಿತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ಎಮ್. ರವರು ಭಾಗವಹಿಸಿದ್ದರು.



**ದಾವಣಗೆರೆ :** ದಿನಾಂಕ 22.09.2025ರಂದು ವಂದೇ ಮಾತರಂ ಸೌಹಾರ್ದ ಸಹಕಾರಿ ಸಂಘ ನಿ, ಮಲೇಬೆನ್ನೂರು, ಹರಿಹರ ತಾಲೂಕು, ದಾವಣಗೆರೆ ಜಿಲ್ಲೆ. ಇದರ ವಾರ್ಷಿಕ ಸಾಮಾನ್ಯ ಸಭೆಯು ಶ್ರೀ ವಿಶ್ವಕರ್ಮ ಸಮುದಾಯ ಭವನ, ಮಲೇಬೆನ್ನೂರು ಇಲ್ಲಿ ಜರುಗಿತು. ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರಿ ಸಂಘಗಳ ಅಗತ್ಯತೆ ಮತ್ತು ಸಹಕಾರಿ ಸಂಘಗಳಲ್ಲಿ ವ್ಯವಹಾರದಿಂದ ಆಗುವ ಲಾಭಗಳು ವಿಷಯದ ಕುರಿತು ಮಾಹಿತಿ ನೀಡಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ಮುಖ್ಯ ಅತಿಥಿಗಳಾಗ ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಕೊಟ್ರಪ್ಪ ರೆಡ್ಡಿ ಬಿ. ರವರು ವಹಿಸಿದ್ದರು. ವೇದಿಕೆಯ ಮೇಲೆ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಶಂಕರಾಚಾರ್ ಕೆ. ರವರು, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ಉಪಸ್ಥಿತರಿದ್ದರು.



**ಬೆಳಗಾವಿ :** ದಿನಾಂಕ 01.09.2025 ರಂದು ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕೋಡಿ ಸಹಕಾರಿಯ 12ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ಶ್ರೀ ಎಂ.ಕೆ.ಕವಟಗಿಮಠ ಕನ್ವೆನ್ಷನ್ ಹಾಲ್, ಚಿಕ್ಕೋಡಿ ಇಲ್ಲಿ ಜರುಗಿಸಲಾಯಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪೂ. ಶ್ರೀ ಶಿವಪ್ರಸಾದ ದೇವರು, ಚಿಂಚಣಿ ಸಿದ್ಧ ಸಂಸ್ಥಾನ ಮಠ, ಚಿಂಚಣಿ ರವರು ವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಮೂಗೇರಿ ರವರು ಹಾಗೂ ಆಡಳಿತ ಮಂಡಳಿ ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಸತೀಶ ಪಾಟೀಲ, ಶಾಖಾ ವ್ಯವಸ್ಥಾಪಕರು, ಸಿಬ್ಬಂದಿಗಳು ಹಾಗೂ ಸಹಕಾರಿಯ ಸದಸ್ಯರು ಉಪಸ್ಥಿತರಿದ್ದರು.



**ಧಾರವಾಡ :** ದಿನಾಂಕ 13.09.2025 ರಂದು ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ನಿ, ಧಾರವಾಡ ಸಹಕಾರಿಯ 17ನೇ ವರ್ಷದ ವಾರ್ಷಿಕ ಸಾಮಾನ್ಯ ಸಭೆ ಜರುಗಿತು. ಸಭೆಯ ದಿವ್ಯ ಸಾನಿಧ್ಯವನ್ನು ಶ್ರೀ ಶ್ರೀ ಶ್ರೀ ಮು.ನಿ.ಪ್ರ ಪೂಜ್ಯ ಕುಮಾರ ವಿರೂಪಾಕ್ಷ ಮಹಾಸ್ವಾಮಿಗಳು ಮೂರುಸಾವಿರ ಮಠ,ಉಪ್ಪಿನ ಬೆಟಗೇರಿ, ಶ್ರೀ ಮ.ನಿ.ಪ್ರ ಪೂಜ್ಯ ಅಭಿನವ ಬಸವಣ್ಣನವರು ಕಲ್ಯಾಣಪುರ ಮಠ ಕುಂದಗೋಳ ಇವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಹುಬ್ಬಳ್ಳಿ-ಧಾರವಾಡ ಪಶ್ಚಿಮ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ವಿರೋಧ ಪಕ್ಷದ ಉಪನಾಯಕರಾದ ಶ್ರೀ ಅರವಿಂದ ಬೆಲ್ಲದ ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿ ಇವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಹು-ಧಾ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಮಹೇಶ್ ಟೆಂಗಿನಕಾಯಿ, ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಸುನೀತಾ ಮಾಳಾದಕರ್ ಇವರು ಆಗಮಿಸಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರು, ಸಿಬ್ಬಂದಿ ವರ್ಗ ಮತ್ತು ಸಹಕಾರಿ ಸದಸ್ಯರು ಉಪಸ್ಥಿತರಿದ್ದರು.



**ಉಡುಪಿ :** ದಿನಾಂಕ 06.09.2025ನೇ ಶನಿವಾರದಂದು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ವಾರ್ಷಿಕ ಮಹಾಸಭೆಯನ್ನು ಉಡುಪಿ ಡಯಾನ ಹೋಟೆಲಿನಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್. ಕೆ. ರವರು ಆಗಮಿಸಿ ಪ್ರಸ್ತುತ ಸೌಹಾರ್ದ ಕಾಯ್ದೆಯ ಮಹತ್ವವನ್ನು ಮತ್ತು ಸೌಹಾರ್ದ ಕಾಯ್ದೆಗೆ ರಾಜ್ಯ ಸರ್ಕಾರವು ಮಾಡಿರುವ ತಿದ್ದುಪಡಿಗೆ ಸಂಬಂಧಿಸಿದ ಮಾಹಿತಿಯನ್ನು ತಿಳಿಸಿದರು. ನಂತರ ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ವಿಜಯ್ ಬಿ. ಎಸ್. ಇವರು ಒಕ್ಕೂಟದ ಸದಸ್ಯರಿಗೆ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸದಸ್ಯರ ಕರ್ತವ್ಯಗಳು ಮತ್ತು ಹಕ್ಕುಗಳ ಕುರಿತು ಮಾಹಿತಿಯನ್ನು ನೀಡಿದರು.



**ತುಮಕೂರು :** ದಿನಾಂಕ 24.09.2025 ರಂದು ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ, ತುಮಕೂರು ಇದರ 2024-25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ತುಮಕೂರು ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಲಕ್ಷ್ಮೀನಾರಾಯಣ ರವರು ವಹಿಸಿದ್ದರು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ, ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಲ್ಯಾನ್ಸಿ ಹೆಚ್ ಪಾಯಸ್ ರವರು ಉಪಸ್ಥಿತರಿದ್ದರು. ಒಕ್ಕೂಟದ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಬಿ.ಓ. ಕಾಮರಾಜು, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಭಾಗವಹಿಸಿದ್ದರು.



**ದಕ್ಷಿಣ ಕನ್ನಡ :** ದಿನಾಂಕ 19.09.2025 ರಂದು ದಕ್ಷಿಣ ಕನ್ನಡ ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿ ನಿ., ಇದರ ವಾರ್ಷಿಕ ಮಾಹಾಸಭೆಯು ಜರುಗಿತು. ಈ ಸಭೆಯಲ್ಲಿ ಒಕ್ಕೂಟದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಒಕ್ಕೂಟದ ನಿರ್ದೇಶಕರು ಹಾಜರಿದ್ದರು, ಸದರಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್ ರವರು ಮತ್ತು ಉಡುಪಿ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವಿಜಯ್ ಬಿ.ಎಸ್ ರವರು ಸದಸ್ಯರಿಗೆ ಸೌಹಾರ್ದ ಕಾಯ್ದೆ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅದಿಕಾರಿಯಾದ ನಂದನ್ ಬಿ.ಎಸ್ ರವರು ಉಪಸ್ಥಿತರಿದ್ದರು.

**ಉಡುಪಿ :** ದಿನಾಂಕ 21.09.2025ನೇ ಭಾನುವಾರದಂದು ಆಥರ್ವ ಸೇವಾ ಸಹಕಾರಿ ಸಂಘ ಇದರ ನಾಲ್ಕನೇ ವಾರ್ಷಿಕ ಸಭೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್. ಕೆ. ರವರು ಆಗಮಿಸಿ ಪ್ರಸ್ತುತ ಸೌಹಾರ್ದ ಕಾಯ್ದೆಯ ಮಹತ್ವವನ್ನು ಮತ್ತು ಸೌಹಾರ್ದ ಕಾಯ್ದೆಗೆ ರಾಜ್ಯ ಸರ್ಕಾರವು ಮಾಡಿರುವ ತಿದ್ದುಪಡಿಗೆ ಸಂಬಂಧಿಸಿದ ಮಾಹಿತಿಯನ್ನು ತಿಳಿಸಿದರು. ನಂತರ ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ವಿಜಯ್ ಬಿ. ಎಸ್. ಇವರು ಸದಸ್ಯರಿಗೆ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸದಸ್ಯರ ಕರ್ತವ್ಯಗಳು ಮತ್ತು ಹಕ್ಕುಗಳ ಕುರಿತು ಮಾಹಿತಿಯನ್ನು ನೀಡಿದರು.



**ಚಾಮರಾಜನಗರ :** ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘ ನಿ., ಚಾಮರಾಜನಗರ, ಇದರ ದಶಮಾನೋತ್ಸವ ಹಾಗೂ ನೂತನ ಕಟ್ಟಡ ಉದ್ಘಾಟನಾ ಸಮಾರಂಭ ಕಾರ್ಯಕ್ರಮವು ದಿನಾಂಕ 24–9–2025 ರಂದು ಸೌಹಾರ್ದ ಸೌಧ ಸಿಂಹ ಇನ್ ಕ್ಲೈವ್, ರೈಲು ನಿಲ್ದಾಣದ ರಸ್ತೆ, ಚಾಮರಾಜನಗರ ಇಲ್ಲಿ ಜರುಗಿತು. ಈ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನಕುಮಾರ್ ರವರು ಉದ್ಘಾಟಕರಾಗಿ ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಎಸ್ ಕೆ ಮಂಜುನಾಥ್ ಹಾಗೂ ಶ್ರೀಮತಿ ಭಾರತಿ ಜಿ. ಭಟ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಶ್ರೀ ಗುರು ಪ್ರಸಾದ್ ಬಂಗೇರ, ಪ್ರಾಂತೀಯ ಅಧಿಕಾರಿ ಮೈಸೂರು ಇವರು ಉಪಸ್ಥಿತರಿದ್ದರು ಹಾಗೂ ಸದರಿ ಕಾರ್ಯಕ್ರಮದಲ್ಲಿ ಬಲರಾಮ್ ಎನ್ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ಭಾಗವಹಿಸಿದ್ದರು.



**ಚಿಕ್ಕಮಗಳೂರು :** ದಿನಾಂಕ 14.09.2025 ರಂದು ದೈವಜ್ಞ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕಮಗಳೂರು ಇವರು ತಮ್ಮ ಸಹಕಾರಿಯ 25ನೇ ವರ್ಷದ ಬೆಳ್ಳಿ ಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಇದರ ಅಧ್ಯಕ್ಷತೆಯನ್ನು ಶ್ರೀಮತಿ ಶಾಲಿನಿ ಅಶೋಕ್ ರಾಯ್ಕರ್, ಅಧ್ಯಕ್ಷರು ದೈವಜ್ಞ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಇವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ರವಿ ಗಾಂವ್ಕರ್, ಅಧ್ಯಕ್ಷರು ಕರ್ನಾಟಕ ದೈವಜ್ಞ ಬ್ರಾಹ್ಮಣ ಸಂಘ, ಬೆಂಗಳೂರು ಇವರು ಹಾಜರಿದ್ದರು. ಕಾರ್ಯಕ್ರಮದ ವಿಶೇಷ ಆಹ್ವಾನಿತರಾಗಿ ಶ್ರೀಮತಿ ಭಾರತಿ ಜಿ ಭಟ್, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀ ಸತ್ಯ ನಾರಾಯಣ ಸನ್ನದು ಲೆಕ್ಕ ಪರಿಶೋಧಕರು ಬೆಂಗಳೂರು, ಶ್ರೀ ವೈ. ಎಸ್. ಸುಬ್ರಹ್ಮಣ್ಯ, ಮಾನ್ಯ ಅಧ್ಯಕ್ಷರು, ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ, ಶ್ರೀ ಟಿ.ಎಲ್. ರಮೇಶ್, ನಿರ್ದೇಶಕರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಚಿಕ್ಕಮಗಳೂರು ಹಾಗೂ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರಾ ರವರು ಮತ್ತು ಸಹಕಾರಿಯ ಎಲ್ಲಾ ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರನ್ನು ಮತ್ತು ನಿರ್ದೇಶಕರನ್ನು ಸಹಕಾರಿಯ ಆಡಳಿತ ಮಂಡಳಿಯ ವತಿಯಿಂದ ಸನ್ಮಾನಿಸಲಾಯಿತು, ಈ ಸಂದರ್ಭದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಅಶೋಕ ಜಿ ಇವರು ಉಪಸ್ಥಿತರಿದ್ದರು.



**ಉಡುಪಿ :** ದಿನಾಂಕ 13.09.2025ನೇ ಶನಿವಾರದಂದು ಉಡುಪಿಯ ಶ್ರೀ ಕೃಷ್ಣ ಸೌಹಾರ್ದ ಸಹಕಾರಿ ಸಂಘ ನಿ., ಸಾಲಿಗ್ರಾಮ ಇದರ ವಾರ್ಷಿಕ ಮಹಾಸಭೆಯು ಸಾಲಿಗ್ರಾಮ ಗಿರಿಜಾ ಕಲ್ಯಾಣ ಮಂಟಪದ ಸಭಾಭವನದಲ್ಲಿ ಜರುಗಿತು. ಸದರಿ ಸಭೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್. ಕೆ. ರವರು ಆಗಮಿಸಿ ಪ್ರಸ್ತುತ ಸೌಹಾರ್ದ ಕಾಯ್ದೆಯ ಮಹತ್ವವನ್ನು ಮತ್ತು ಸೌಹಾರ್ದ ಕಾಯ್ದೆಗೆ ರಾಜ್ಯ ಸರ್ಕಾರವು ಮಾಡಿರುವ ತಿದ್ದುಪಡಿಗೆ ಸಂಬಂಧಿಸಿದ ಮಾಹಿತಿಯನ್ನು ತಿಳಿಸಿದರು. ನಂತರ ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ವಿಜಯ್ ಬಿ. ಎಸ್. ಇವರು ಸದಸ್ಯರಿಗೆ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸದಸ್ಯರ ಕರ್ತವ್ಯಗಳು ಮತ್ತು ಹಕ್ಕುಗಳ ಕುರಿತು ಮಾಹಿತಿಯನ್ನು ನೀಡಿದರು.



**ಕಲಬುರಗಿ :** ಶ್ರೀ ಧನಲಕ್ಷ್ಮೀ ಸೌಹಾರ್ದ ಸಹಕಾರಿ ನಿ., ಸರಸಂಬಾ ಸಹಕಾರಿಯ 23ನೇಯ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ರತ್ನಬಾಯಿ ಅಲೂರೆ ಯವರು ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು, ಆಳಂದ ತಾಲೂಕಿನ ಮಾಜಿ ಶಾಸಕರಾದ ಶ್ರೀ ಸುಭಾಷ ಗುತ್ತೇದಾರವರು, ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸುರ್ಯಕಾಂತ ರ‍್ಯಾಕಲೆಯವರು ಭಾಗವಹಿಸಿರುತ್ತಾರೆ. ಸಭೆಯಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರುಗಳು. ಸರ್ವ ಸದಸ್ಯರುಗಳು ಹಾಗೂ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.



**ಕೊಪ್ಪಳ :** ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಗಂಗಾವತಿ ಇದರ 7ನೇ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಮಹಾಲಿಂಗಪ್ಪ ಧೊತಿಹಾಳ ವಹಿಸಿದ್ದರು. ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ ಶ್ರೀಧರರವರು ನೆರವೆರಿಸಿದರು. ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾಜಿ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ಸಹಕಾರಿಯ ಆಡಳಿತ ಮಂಡಳಿ ಸದಸ್ಯರುಗಳು, ಸಿಬ್ಬಂದಿಗಳು, ಸರ್ವಸದಸ್ಯರು ಹಾಗೂ ಕೊಪ್ಪಳ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಓಂಕಾರವರು ವಹಿಸಿದ್ದರು.

## 77ನೇ ಕಲ್ಯಾಣ ಕರ್ನಾಟಕ ಉತ್ಸವ



**ಕಲಬುರಗಿ :** ದಿನಾಂಕ 17.09.2025 ರಂದು ಪ್ರಾಂತೀಯ ಕಛೇರಿ ಕಲಬುರಗಿಯಲ್ಲಿ 77ನೇಯ ಕಲ್ಯಾಣ ಕರ್ನಾಟಕ ಉತ್ಸವದ ಕಾರ್ಯಕ್ರಮದ ಧ್ವಜಾರೋಹಣವನ್ನು ಹಿರಿಯ ಸಹಕಾರಿಗಳಾದ ಶ್ರೀ ಬಾಬುರಾವ್ ಕುಲಕರ್ಣಿ ಮತ್ತು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ನೆರವೇರಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು, ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಎಸ್ ಪಾಟೀಲರವರು ಸ್ಥಳೀಯ ಸಹಕಾರಿಯ ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರು, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಕಲಬುರಗಿ ಮತ್ತು ಬೆಳಗಾವಿ ಪ್ರಾಂತದ ಟಾಸ್ಕ ಪೋರ್ಸ ಅಧಿಕಾರಿಗಳಾದ ಶ್ರೀ ಗಂಗಾರಾಮರವರು ಹಾಗೂ ಪ್ರಾಂತದ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ



**ತಿಪಟೂರು** : ದಿನಾಂಕ 14–09–2025 ರಂದು ಶ್ರೀ ಜಗಜ್ಯೋತಿ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ, ತಿಪಟೂರು ಇದರ 2024–25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್ ರವರು ಭಾಗವಹಿಸಿ ಸೌಹಾರ್ದ ಕಾಯ್ದೆ ಹಾಗೂ ಸದಸ್ಯರ ಹಕ್ಕುಗಳು ಮತ್ತು ಜವಾಬ್ದಾರಿಗಳು ಹಾಗೂ ಆಡಳಿತ ಮಂಡಳಿ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಎಂ.ಸಿ ಮಮತ ರವರು, ಉಪಾಧ್ಯಕ್ಷರಾದ ಶ್ರೀ ನವೀನ್ ಕುಮಾರ್ ಎಸ್.ಆರ್ ರವರು ಹಾಗೂ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕಿಯಾದ ಶ್ರೀಮತಿ ಭವ್ಯಶ್ರೀ ಎಸ್.ಜೆ ರವರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಈ ಸಭೆಯಲ್ಲಿ ಸಹಕಾರಿಯ 58 ಸದಸ್ಯರು ಭಾಗವಹಿಸಿದ್ದರು.



**ಶಿವಮೊಗ್ಗ** : ಸರಸ್ವತಿ ಸೌಹಾರ್ದ ಸಹಕಾರಿ ಸಂಘ ನಿಯಮಿತ, ತೀರ್ಥಹಳ್ಳಿ (ಎಸ್‌ಎಂಜಿ–35) ಯ "ಹದಿನಾರನೇ ಸರ್ವ ಸದಸ್ಯರ ಮಹಾಸಭೆ" ದಿನಾಂಕ 09–09–2025ರ ಮಂಗಳವಾರ ತೀರ್ಥಹಳ್ಳಿಯ ವಿದ್ಯಾಧಿರಾಜ ಸಭಾಗೃಹದಲ್ಲಿ ನಡೆಯಿತು. ಬೆಳಿಗ್ಗೆ 11 ಗಂಟೆಗೆ ಸಹಕಾರಿಯ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಳೇಬೈಲು ರಾಘವೇಂದ್ರರವರು, ಆಡಳಿತ ಮಂಡಳಿ ಸದಸ್ಯರು ಮತ್ತು ಸಹಕಾರಿಯ ಹಿರಿಯ ಸದಸ್ಯರು ದೀಪ ಬೆಳಗುವುದರ ಮೂಲಕ ಚಾಲನೆ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಳೇಬೈಲು ರಾಘವೇಂದ್ರರವರು ವಹಿಸಿದ್ದರು. ಉಪಾಧ್ಯಕ್ಷರಾದ ಶ್ರೀ ಸಂದೇಶ್ ಜವಳಿ ರವರು ಸರ್ವರನ್ನೂ ಸ್ವಾಗತಿಸಿದರು.

2024–25ನೇ ಸಾಲಿನಲ್ಲಿ ಸಹಕಾರಿಯು ರೂ.60,50,535/– ಲಾಭ ಗಳಿಸಿದ್ದು, ಶೇ15ರಂತೆ ಸದಸ್ಯರಿಗೆ ಲಾಭಾಂಶ ಘೋಷಿಸಲಾಯಿತು. ಶಿವಮೊಗ್ಗ ಮ್ಯಾಮ್ಕೋಸ್‌ನ ಉಪಾಧ್ಯಕ್ಷರಾದ ಶ್ರೀ ಮಹೇಶ್ ಹುಲ್ಕುಳಿ ಸೇರಿದಂತೆ ಅನೇಕ ಹಿರಿಯ ಸಹಕಾರಿಗಳು ಭಾಗವಹಿಸಿದ್ದರು.

ಸಹಕಾರಿಯ ಸದಸ್ಯರ ಮಕ್ಕಳಲ್ಲಿ ಅತ್ಯುತ್ತಮ ಶೈಕ್ಷಣಿಕ ಸಾಧನೆಗೈದ ವಿದ್ಯಾರ್ಥಿಗಳಿಗೆ ಸರಸ್ವತಿ ಪ್ರತಿಭಾ ಪುರಸ್ಕಾರನೀಡಿ ಪ್ರೋತ್ಸಾಹಿಸಲಾಯಿತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಚ್ಯುತ್‌ನಾಯಕ್ ಬಿ.ಎಸ್. ರವರು ಕಾರ್ಯಕ್ರಮವನ್ನು ನಿರೂಪಿಸಿದರು.



**ಮಣಿಪಾಲ** : ಸಾರಸ್ವತ ಸೌಹಾರ್ದ ಸಹಕಾರಿ ಸಂಘ ನಿಯಮಿತ ಮಣಿಪಾಲ ಇದರ ಮಹಾಸಭೆಯು 30.08.2025ರಂದು ಶನಿವಾರ ಮಣಿಪಾಲದ ಆರ್.ಎಸ್.ಬಿ ಭವನದ ಮೊದಲನೇ ಮಹಡಿಯಲ್ಲಿ ಸಹಕಾ–ರಿಯ ಅಧ್ಯಕ್ಷರಾದ ವಾಸುದೇವ ಕೃಷ್ಣ ನಾಯಕ್ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯಕ್ರಮಕ್ಕೆ ನಿರ್ದೇಶಕರಾದ ಶ್ರೀರಾಮರಾಯ ಪಾಟ್ಕರ್ ಬಂಟಕಲ್ಲು ಇವರು ಸ್ವಾಗತಿಸಿದರು. ಲೆಕ್ಕ ಪರಿಶೋಧನಾ ವರದಿ ವಾಚನೆ ಮತ್ತು ನಿರೂಪಣೆಯನ್ನು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಭುವನೇಶ್‌ಪ್ರಭು ಇವರು ನೆರವೇರಿಸಿದರು. ಈ ಸಂದರ್ಭ ಸಮಾಜದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಮಾಜದ ವಿಶೇಷ ಸಾಧಕರಾದ ಶ್ರೀ ವೈ. ಉಪೇಂದ್ರ ಪ್ರಭು ಮಾಣಿಯೂರು (ಸಮಾಜ ಸೇವೆ), ಡಾ| ನಿತ್ಯಾನಂದ ನಾಯಕ್ (ವೈದ್ಯಕೀಯ), ಶ್ರೀ ಬಾಲಕೃಷ್ಣ ನಾಯಕ್‌ಕಡ್ತಾಲ್ (ಭೂಸೇನೆ), ಶ್ರೀ ಸಂಜಯ್‌ಆರ್.ನಾಯಕ್, ಕುಕ್ಕಿಕಟ್ಟೆ (ವಾಯು ಸೇನೆ), ಶ್ರೀ ಅನಂತ ಪದ್ಮನಾಭ ನಾಯಕ್, ಎರ್ಲಪಾಡಿ (ಭೂಸೇನೆ), ಕು| ಸ್ತುತಿಕಾಮತ್, ಎಳ್ಳಾರೆ (ಶಿಕ್ಷಣ ಕ್ಷೇತ್ರದಲ್ಲಿ ಎಸ್.ಎಸ್.ಸಿ.ಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ) ಇವರೆಲ್ಲರನ್ನೂ ಸನ್ಮಾನಿಸಲಾಯಿತು. ಒಟ್ಟು ಮೂವರು ಯೋಧರನ್ನು, ಒಬ್ಬರು ಸಮಾಜ ಸೇವಕರು, ಒಬ್ಬರು ವೈದ್ಯಕೀಯ ಮತ್ತು ಒಬ್ಬಳು ಶಿಕ್ಷಣ ಕ್ಷೇತ್ರದವರನ್ನು ಸನ್ಮಾನಿಸಲಾಯಿತು. ನಂತರ ಅಧ್ಯಕ್ಷೀಯ ಭಾಷಣ ಮಾಡಿದ ಸಹಕಾರಿಯ ಅಧ್ಯಕ್ಷರಾದ ವಾಸುದೇವ ಕೃಷ್ಣ ನಾಯಕ್‌ನಮ್ಮ ಸಹಕಾರಿಯು 20.02.2020 ರಂದು ಎಸ್. ರಮಾನಾಥ ನಾಯಕ್‌ಇವರು ಪೂಜಾಕೈಂಕರ್ಯದಲ್ಲಿ ಭಾಗವಹಿಸಿ ಪ್ರಾರಂಭವಾದ ಸಂಸ್ಥೆಯು ಐದು ವರ್ಷ ಪೂರ್ಣಗೊಳಿಸಿ ಒಟ್ಟಾರೆ 12 ಕೋಟಿ ಠೇವಣಿ ಸಂಗ್ರಹಿಸಿ 10.65 ಕೋಟಿ ಸಾಲ ಕೊಟ್ಟಿರುತ್ತೇವೆ ಈಗಾಗಲೇ ಒಂದು ಮುದರಂಗಡಿ

ಶಾಖೆಯನ್ನೂ ಪ್ರಾರಂಭಿಸಿರುತ್ತೇವೆ ಎಂದರು ತಮ್ಮೆಲ್ಲರ ಸಹಕಾರದಿಂದ ನಿರ್ದೇಶಕ ಮಂಡಳಿಯ ಸಹಾಯದಿಂದ ಐದು ವರ್ಷಗಳಲ್ಲಿ ಪ್ರಾರಂಭವಾದ ಸಂಸ್ಥೆಯನ್ನು ಸಮಾಜಕ್ಕೆ ನೀಡಿದ್ದೇವೆ ಇನ್ನೂ ಅಭಿವೃದ್ಧಿಯಾಗಿ ಇನ್ನು 5 ವರ್ಷಗಳಲ್ಲಿ 30 ರಿಂದ 35 ಕೋಟಿಯಷು ಠೇವಣಿ ಸಂಗ್ರಹವಾಗಿ ಉತ್ತಮ ಸಾಲ ನೀಡುವ ಉದ್ದೇಶ ನಮ್ಮಲ್ಲಿದೆ ಎಂದರು. ಈಗ ನಿಧಿ ಕಡಿಮೆ ಇದ್ದು ಮುಂಬರುವ ದಿನಗಳಲ್ಲಿ ನಿಧಿಗಳನ್ನು ಹೆಚ್ಚು ಮಾಡಿ ಶೈಕ್ಷಣಿಕ, ವೈದ್ಯಕೀಯ ಇನ್ನಿತರ ಸಮಾಜಕ್ಕೆ ಸಹಾಯ ಮಾಡುವ ಇರಾದೆ ಇದೆ ಎಂದು ತಿಳಿಸಿದರು. ಉಪಾಧ್ಯಕ್ಷರಾದ ಶ್ರೀ ಮನೋಹರ ಮರಾಠೆ, ಕೊಡಿಬೆಟ್ಟು, ನಿರ್ದೇಶಕರುಗಳಾದ ಶ್ರೀ ರಾಮರಾಯ ಪಾಟ್ಕರ್ ಬಂಟಕಲ್ಲು, ಶ್ರೀ ಪಾಂಡುರಂಗ ನಾಯಕ್ ಮಾಣಿಬೆಟ್ಟು, ಶ್ರೀ ದೇವೇಂದ್ರನಾಯಕ್ ಸೂಡಾ, ಶ್ರೀ ರಾಮದಾಸ್‌ಪ್ರಭು 80 ಬಡಗಬೆಟ್ಟು, ಶ್ರೀ ಗಣಪತಿ ನಾಯಕ್ ಮಂಚಿ, ಶ್ರೀಮತಿ ಜ್ಯೋತಿ ಡಿ. ಪ್ರಭುದೇವಿನಗರ, ಶ್ರೀಮತಿ ಗೀತಾಎಸ್. ಪ್ರಭು ಪುತ್ತೂರು, ಮುಖ್ಯಕಾರ್ಯನಿರ್ವಾಹಕರಾದ ಭುವನೇಶ್ ಪ್ರಭು, ಸಿಬ್ಬಂದಿ ವರ್ಗದವರು ಹಾಗೂ ಸಹಕಾರಿಯ ಸದಸ್ಯರು ಉಪಸ್ಥಿತರಿದ್ದರು. ಧನ್ಯವಾದವನ್ನು ನಿರ್ದೇಶಕರಾದ ರಾಮದಾಸ್ ಪ್ರಭು 80 ಬಡಗಬೆಟ್ಟು ಇವರು ಸಲ್ಲಿಸಿದರು.

---



**ತುಮಕೂರು :** ದಿನಾಂಕ 31-08-2025 ರಂದು ಶ್ರೀ ಗುರುಕುಲ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತುಮಕೂರು ಇದರ 2024-25ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ತುಮಕೂರಿನ ಶ್ರೀ ಗುರುಕುಲ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಅಂಗವಾಗಿ ಸಂಯುಕ್ತ ಸಹಕಾರಿಯ ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ ವಿಜಯ್ ರವರು ಸದರಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ಮಲ್ಲಿಕಾರ್ಜುನಯ್ಯ ರವರನ್ನು ಭೇಟಿ ಮಾಡಿ ಸಹಕಾರಿಯ ಬೆಳವಣಿಗೆ ಹಾಗೂ ಸಂಘವು ಲಾಭ ಗಳಿಸಿರುವ ಹಿನ್ನೆಲೆಯಲ್ಲಿ ಅಭಿನಂದನೆಗಳನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು.

---



**ಬಂಕಾಪೂರ :** ಶ್ರೀ ಪುಟ್ಟರಾಜ ಗವಾಯಿ-ಸಚೇತನ ವಿವಿದ್ಯೋದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿಯಮಿತ ಬಂಕಾಪೂರ ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆಯು ಸರಕಾರಿ ಹಿರಿಯ ಪ್ರಾಥಮಿಕ ಪ್ರೌಢಶಾಲೆ ಕೊಟ್ಟಿಗೇರಿ-ಬಂಕಾಪೂರದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಹನುಮಂತಪ್ಪ. ಯು. ವಡ್ಡರ ಅದ್ಯಕ್ಷತೆಯಲ್ಲಿ ಜರುಗಿತು. ಕಾರ್ಯಕ್ರಮದ ಉದ್ಘಾಟಕರಾಗಿ ಶ್ರೀ ಅನಿಲ ರಾಠೋಡ ಸಿಪಿಐ ಹಾಗೂ ಮುಖ್ಯ ಅತಿಥಿಗಳಾಗಿ ಡಾ. ರಮೇಶ ತವರಿ ಪ್ರಾಂಶುಪಾಲರು ಸರಕಾರಿ ಪ್ರಥಮ ದರ್ಜೆ ಕಾಲೇಜು ಬಂಕಾಪೂರ ಮತ್ತು ಸಹಕಾರಿಯ ಶ್ರೀ ಸುಭಾಷ್‌ಗೌಡ ಆರ್ ಪಾಟೀಲ ಸಹಕಾರಿಯ ಸರ್ವ ಆಡಳಿತ, ಸಿಬ್ಬಂದಿ ವರ್ಗ ಹಾಗೂ ಸದಸ್ಯರು ಉಪಸ್ಥಿತರಿದ್ದರು. ಸಭೆಯಲ್ಲಿ ಸಹಕಾರಿಯ ಸದಸ್ಯರ ವಿಕಲ ಚೇತನ ಮಗುವಿಗೆ ಸನ್ಮಾಸಿ ಧನಸಹಾಯ ನೀಡಲಾಯಿತು.

---



**ಬೆಂಗಳೂರು :** ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ಸಂಘ, ಯಲಹಂಕ ಉಪನಗರ ಇದರ 2024-25ನೇ ಸಾಲಿನ 16ನೇ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ದಿನಾಂಕ 21.09.2025ರಂದು ಭಾನುವಾರ ಡಾ॥ ಬಿ ಆರ್‌ಅಂಬೇಡ್ಕರ್ ಭವನ ಯಲಹಂಕ ಉಪನಗರ, ಬೆಂಗಳೂರು-64. ಇಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಎಂ ಮುನಿರೆಡ್ಡಿರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಮಹತ್ವದ ಸಭೆಗೆ 1700 ಕ್ಕೂ ಹೆಚ್ಚು ಸದಸ್ಯರು ಪಾಲ್ಗೊಂಡು, ವಿವಿಧ ವಿಷಯಗಳನ್ನು ಮಂಡಿಸಿ, ಚರ್ಚಿಸಿದ ನಂತರ ಸದಸ್ಯರಿಂದ ಸರ್ವಾನುಮತದ ತೀರ್ಮಾನಗಳನ್ನು ತೆಗೆದುಕೊಂಡು ದಾಖಲು ಮಾಡಲಾಯಿತು. ಸಹಕಾರಿಯು 2023-24ನೇ ಸಾಲಿನಲ್ಲಿ ರೂ. 2,91,85,434/- (ಎರಡು ಕೋಟಿ ತೊಂಬತ್ತೊಂದು ಲಕ್ಷದ ಎಂಬತ್ತೈದು ಸಾವಿರದ ನಾಲ್ಕು ನೂರ ಮೂವತ್ತ ನಾಲ್ಕು ರೂಪಾಯಿ) ಗಳ ನಿವ್ವಳ ಲಾಭಾಂಶವನ್ನು ದಾಖಲಿಸಿದ್ದು, ಇದರಲ್ಲಿ ಷೇರು ಬಂಡವಾಳದ ಮೇಲೆ ಶೇ.12% ರಂತೆ ಡಿವಿಡೆಂಡ್‌ನ್ನು ಘೋಷಿಸಲಾಯಿತು. ಹೆಚ್ಚಿನ ಸದಸ್ಯರು ಭಾಗವಹಿಸಿ ತಮ್ಮ ಅಮೂಲ್ಯವಾದ ಸಲಹೆ, ಸೂಚನೆಗಳನ್ನು ನೀಡುವುದರ ಮೂಲಕ 16ನೇ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಯಶಸ್ವಿಗೊಳಿಸಿದರು.




**ರಾಯಚೂರು :** ನಾಗಲಾಂಬಿಕೆ ಪತ್ತಿನ ಸೌಹಾರ್ದ ಸಹಕಾರಿಯ 11ನೇ ವಾರ್ಷಿಕ ಮಾಹಾಸಭೆಯ ಉದ್ಘಾಟನೆಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಶ್ರೀ ಬಸವಪ್ರಭು ಪಾಟೀಲ ಬೆಟ್ಟದೂರು ನೆರವೇರಿಸಿದರು. ಸಹಕಾರಿಯ ಅಧ್ಯಕ್ಷೆ ಶ್ರೀಮತಿ ನಾಗರತ್ನಮ್ಮ ಬಿ. ಪಾಟೀಲ ಮಾತನಾಡಿ 2024-25ನೇ ಸಾಲಿನಲ್ಲಿ 66 ಲಕ್ಷ ನಿವ್ವಲ ಲಾಭ ಗಳಿಸಿದ್ದು ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಶೇರುದಾರರಿಗೆ ಶೇ. 20 ರಷ್ಟು ಲಾಭಾಂಶ ವಿತರಿಸಲಾಗುವುದು. 2014ರಲ್ಲಿ ರೂ. 39 ಲಕ್ಷ ಶೇರು ಬಂಡವಾಳದೊಂದಿಗೆ ಆರಂಭವಾದ ಈ ಸಂಸ್ಥೆ, ಪ್ರಸ್ತುತ ರೂ. 61.45 ಲಕ್ಷ ಶೇರು ಬಂಡವಾಳ ಹಾಗೂ ರೂ. 25 ಕೋಟಿ ದುಡಿಯುವ ಬಂಡವಾಳ ಹೊಂದಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




**ಬೆಲ್ಲದ ಬಾಗೇವಾಡಿ :** ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ ನಿಯಮಿತ ಬೆಲ್ಲದ ಬಾಗೇವಾಡಿ ಬ್ಯಾಂಕಿನ 2024-25ನೇ ಸಾಲಿನ 81ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ದಿನಾಂಕ-10.09.2025ರಂದು ಬ್ಯಾಂಕಿನ ದಿ. ವಿಶ್ವನಾಥ ಕತ್ತಿ ಸ್ಮಾರಕ ಸಭಾ ಭವನದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕುಶ ರಮೇಶ ಕತ್ತಿ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಅಧ್ಯಕ್ಷೀಯ ಭಾಷಣದಲ್ಲಿ ಮಾತನಾಡಿ ಬ್ಯಾಂಕಿನ ಪ್ರಗತಿಯ ಬಗ್ಗೆ ಸದಸ್ಯರಿಗೆ ಸವಿಸ್ತಾರವಾಗಿ ವಿವರಿಸಿ ಬ್ಯಾಂಕು ಮುಂದಿನ ಕೆಲವೇ ವರ್ಷಗಳಲ್ಲಿ 1000 ಕೋಟಿ ದುಡಿಯುವ ಬಂಡವಾಳದೊಂದಿಗೆ ಹೊಸ ದಾಖಲೆ ಮಾಡುತ್ತದೆ ಎಂದು ಹೇಳಿದರು. ಬ್ಯಾಂಕಿನ ಪ್ರಗತಿಗೆ ಎಲ್ಲ ಸದಸ್ಯರು ಕಾರಣಿಕರ್ತರು ಅಂತಾ ತಿಳಿಸಿ ಸದಸ್ಯರಿಗೆ ಬ್ಯಾಂಕಿನ ಪರವಾಗಿ ಧನ್ಯವಾದಗಳನ್ನು ಸಲ್ಲಿಸಿದರು.

ವಾರ್ಷಿಕ ಮಹಾ ಸಭೆಗೆ ಮುಖ್ಯ ಅತಿಥಿಯಾಗಿ ಬ್ಯಾಂಕಿನ ಸದಸ್ಯರು, ಯುವ ನಾಯಕರು, ಖ್ಯಾತ ಉದ್ಯಮಿಗಳು ಹಾಗೂ ಹುಕ್ಕೇರಿ ವಿದ್ಯುತ್ ಸಹಕಾರಿ ಸಂಘದ ನಿರ್ದೇಶಕರಾದ ಶ್ರೀ ಲವ ರಮೇಶ ಕತ್ತಿ ಇವರು ಆಗಮಿಸಿ ಬ್ಯಾಂಕು ಪ್ರಗತಿಪಥದಲ್ಲಿ ಸಾಗುತ್ತಿರುವ ಕುರಿತು ಮತ್ತು ಸದಸ್ಯರು ಬ್ಯಾಂಕು ನೀಡುತ್ತಿರುವ ಹೊಸ ಹೊಸ ತಂತ್ರಜ್ಞಾನಗಳನ್ನು ಬಳಸಿಕೊಂಡು ಇನ್ನೂ ಹೆಚ್ಚಿನ ಸಹಾಯ ಸಹಕಾರ ನೀಡಿ ಬ್ಯಾಂಕನ್ನು ದೊಡ್ಡ ಮಟ್ಟದಲ್ಲಿ ಅಭಿವೃದ್ಧಿಗೊಳಿಸಲು ವಿನಂತಿಸಿದರು.

ಬ್ಯಾಂಕಿನ ಆಡಳಿತ ಸಲಹೆಗಾರರಾದ ಶ್ರೀ ಎಮ್.ಕೆ.ಅಮ್ಮಣಗಿ ಇವರು ವರದಿ ಮಂಡನೆ ಮಾಡಿ 340.04 ಲಕ್ಷ ಶೇರು ಬಂಡವಾಳ 4029.08 ಲಕ್ಷ ನಿಧಿಗಳೊಂದಿಗೆ 49159.28 ಲಕ್ಷ ಠೇವು ಸಂಗ್ರಹಿಸಿ 27653.30 ಲಕ್ಷ ಸಾಲ ವಿತರಿಸಿ 54388.37 ಲಕ್ಷ ದುಡಿಯುವ ಬಂಡವಾಳದೊಂದಿಗೆ 275.04 ಲಕ್ಷ ನಿವ್ವಳ ಲಾಭ ಗಳಿಸಿ ಸದಸ್ಯರಿಗೆ ಶೇ.15 ರಂತೆ ಲಾಭಾಂಶ ವಿತ-ರಿಸಲಾಗುವುದು ಎಂದು ತಿಳಿಸಿದರು. ಬ್ಯಾಂಕಿನ ಪ್ರಗತಿಗೆ ಸಹಕರಿಸಿದ ಎಲ್ಲ ಸದಸ್ಯರು, ಠೇವುದಾರರು, ಗ್ರಾಹಕರು ಮತ್ತು ಹಿತೈಷಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ಸಭೆಯಲ್ಲಿ ಬ್ಯಾಂಕಿನ ಎಲ್ಲ ನಿರ್ದೇಶಕ ಮಂಡಳಿಯ ಸದಸ್ಯರು, ವ್ಯವಸ್ಥಾಪನಾ ಸಮಿತಿ ಸದಸ್ಯರು, ಶಾಖಾ ಸಲಹಾ ಸಮಿತಿ ಸದಸ್ಯರು, ಪತ್ರಿಕಾ ಮಾದ್ಯಮ ಮಿತ್ರರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಸುನೀಲ ಶ್ರೀ ಬೆಲ್ಲದ ಇವರು ಕಾರ್ಯಕ್ರಮ ನಿರೂಪಿಸಿದರು. ಬ್ಯಾಂಕಿನ ಹಿರಿಯ ವ್ಯವಸ್ಥಾಪಕರಾದ ಶ್ರೀ ಶ್ರೀಶೈಲ ವಿ.ಚರಾಟಿ ಇವರು ಸ್ವಾಗತಿಸಿದರು. ಕೊನೆಯದಾಗಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ವಿನಾಯಕ ಶ.ಬುರ್ಜಿ ಇವರು ಸಭೆಗೆ ಆಗಮಿಸಿದ ಎಲ್ಲ ಸದಸ್ಯರನ್ನು ಮತ್ತು ಗಣ್ಯರನ್ನು ವಂದಿಸಿದರು.



**ಹಾಸನ :** ದಿನಾಂಕ 07.09.2025 ರಂದು ಸಹನಾ ವಿವಿದೋದ್ದೇಶ ಸೌಹಾರ್ದ ಸಹಕಾರಿಯ 21ನೇ ವಾರ್ಷಿಕ ಮಹಾಸಭೆಯು ನಡೆಯಿತು.



**ಬೆಂಗಳೂರು:** ದಿನಾಂಕ 07.09.2025ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಂ. ಬೆಂಗಳೂರು ಇವರು ಶ್ರೀ ಯಶಸ್ವಿನಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ಬೆಂಗಳೂರು ಇದರ 11ನೇ ವರ್ಷದ ಸರ್ವ ಸದಸ್ಯರ ಮಹಾಸಭೆಯಲ್ಲಿ ಭಾಗವಹಿಸಿದರು.



**ಶಿವಮೊಗ್ಗ:** ದಿನಾಂಕ 20.09.2025ರಂದು ಸಹ್ಯಾದ್ರಿ ರೈತ ಮಿತ್ರ ಸೌಹಾರ್ದ ವಿವಿಧೋದ್ದೇಶ ಸಹಕಾರಿ ಸಂಘ ನಿ, ಆಯನೂರು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಭಾಗವಹಿಸಿ ಸದಸ್ಯರ ಹಕ್ಕು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಮುಖ್ಯ ಅತಿಥಿಗಳಾಗಿ ಪ್ರಗತಿಪರ ರೈತ ಮಹಿಳೆಯಾದ ಶ್ರೀಮತಿ ಆಶಾ ಶೇಷಾದ್ರಿ ರವರು ಭಾಗವಹಿಸಿದ್ದರು. ಸಭೆಯಲ್ಲಿ 400 ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದರು.

---



**ರಾಯಚೂರು :** ಜನತಾ ಸೌಹಾರ್ದ ಸಹಕಾರಿ ಸಂಘವು 2024-25 ರ ಸಾಲಿನಲ್ಲಿ ರೂ. 152 ಕೋಟಿ ವ್ಯವಹಾರವನ್ನು ದಾಖಲಿಸಿದ್ದು ರೂ 2.08 ಕೋಟಿ ಲಾಭಗಳಿಸಿರುತ್ತದೆ. ಆಡಳಿತ ಮಂಡಳಿ ನಿರ್ಣಯದ ಪ್ರಕಾರ ಸದಸ್ಯರಿಗೆ ಶೇ. 10% ಲಾಭಾಂಶ (Dividend) ವನ್ನು ನೀಡಲು ನಿರ್ಧರಿಸಲಾಗಿದೆ.

ಸಂಘದ ಅಧ್ಯಕ್ಷರಾದ ಶ್ರೀ ಅಭಿಷೇಕ ಸಿಂಗನಾಳ ಅವರು ದಿನಾಂಕ 20-09-2025 ರಂದು ಶನಿವಾರ ಸಂಜೆ 4.30 ಘಂಟೆಗೆ ಜನತಾ ಸೌಹಾರ್ದ ಸಹಕಾರಿ ಸಂಘ, ಸಿಂಧನೂರು ಇದರ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಮಾತನಾಡುತ್ತಾ ಈ ವಿಷಯವನ್ನು ಘೋಷಿಸಿದರು. ಸಂಘದ ವಾರ್ಷಿಕ ವರದಿಯನ್ನು ಮುಖ್ಯಕಾರ್ಯ ನಿರ್ವಹಣಾಧಿಕಾರಿಯಾದ ಶ್ರೀ ಗಿರೀಶ್ ಎಂ ಅವರು ಪ್ರಸ್ತುತಪಡಿಸಿ ಮಾತನಾಡಿ ಸಂಘವು ರೂ. 152 ಕೋಟಿ ವ್ಯವಹಾರವನ್ನು ತಲುಪಲು ಕಾರಣೀಭೂತರಾದ ಸದಸ್ಯರು, ನಿರ್ದೇಶಕರು , ಸಿಬ್ಬಂದಿಗಳು ಹಾಗೂ ಪಿಗ್ಮಿ ಎಜೆಂಟರನ್ನು ಅಭಿನಂದಿಸಿದರು.

ಜೂನ್ ತಿಂಗಳಿನಲ್ಲಿ ಅಳವಡಿಸಿಕೊಂಡಿರುವ "Automation Cloud"ನ Smart Ogle ತಂತ್ರಾಂಶದ ಮೂಲಕ ಸದಸ್ಯರ ಖಾತೆಗಳ ಮೊತ್ತ ಮತ್ತು Statement ಅನ್ನು ಸದಸ್ಯರೇ ತಮ್ಮ ಮೊಬೈಲ್ ಮೂಲಕ ನೋಡಿಕೊಳ್ಳಲು ಸಿದ್ಧಪಡಿಸಿರುವ "ಸಹಕಾರಿ ಆಪ್" ಅನ್ನು ಸಹ ಈ ಶುಭ ಘಳಿಗೆಯಲ್ಲಿ ಅಧ್ಯಕ್ಷರು, ಎಲ್ಲಾ ನಿರ್ದೇಶಕರು ಮತ್ತು ಗಣ್ಯರ ಸಮ್ಮುಖದಲ್ಲಿ ಬಿಡುಗಡೆ ಮಾಡಲಾಯಿತು. ಸದಸ್ಯರು, ಗ್ರಾಹಕರು ಇದರ ಸದುಪಯೋಗಪಡೆಯಲು ಅಧ್ಯಕ್ಷರು ವಿನಂತಿಸಿದರು.

ಸಂಘದ ಲೆಕ್ಕಪರಿಶೋಧನಾ ವರದಿಯನ್ನು ಶಾಸನಬದ್ಧ ಲೆಕ್ಕಪರಿಶೋಧಕರಾದ ಶ್ರೀ ಮಧುಕರ್ ಹೆಗ್ಡೆ ರವರು ಪ್ರಸ್ತುತಪಡಿಸಿದರು. ಸಂಘದ ಒಟ್ಟು ವ್ಯವಹಾರ ಶೇ. 7% ರಷ್ಟು ವೃದ್ಧಿಯಾಗಿದ್ದು ಒಟ್ಟು ಆದಾಯದಲ್ಲಿ ಶೇ. 1.30% ಏರಿಕೆಯಾಗಿದೆ. ದುಡಿಯುವ ಬಂಡವಾಳವು ಶೇ. 7 %ರಷ್ಟು ಏರಿಕೆಯಾಗಿದ್ದು ಸಂಘವು 'ಉತ್ತಮ ಸಂಘ" ವಾಗಿ ಬೆಳೆಯುವ ನಿಟ್ಟಿನಲ್ಲಿ ಹೆಜ್ಜೆ ಹಾಕುತ್ತಿದೆ ಎಂದರು. ವಸೂಲಾತಿಯನ್ನು ಇನ್ನೂ ಹೆಚ್ಚು ತೀವ್ರಗೊಳಿಸಲು ಹಾಗೂ ಸಾಲಗಾರರು ಮರುಪಾವತಿಯನ್ನು ಅವಧಿಯೊಳಗೆ ನಿರ್ವಹಿಸಿ ಸಹಕರಿಸಲು ಕೋರಿದರು.

ಲಾಭಾಂಶದ ಘೋಷಣೆ ಕುರಿತು ಅವರು ಮಾತನಾಡಿ ಸಂಘಗಳು ಹೆಚ್ಚಿನ ಲಾಭಾಂಶ ನೀಡುವದಕ್ಕಿಂತ ತಮ್ಮ ತಮ್ಮ ಸಂಘದ ಮೀಸಲು ನಿಧಿಯನ್ನು ಹೆಚ್ಚಿಸುವತ್ತ ಹಾಗೂ ಅಥಾವೆ ಪತ್ರಿಕೆಯನ್ನು ಹೆಚ್ಚು ಧೃಡವಾಗಿಸುವತ್ತ ಗಮನ ನೀಡಬೇಕು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ತನ್ನ ಗ್ರಾಹಕರಿಗೆ ಠೇವಣಿ ಮೇಲೆ ನೀಡುವ ಬಡ್ಡಿದರಕ್ಕಿಂತ ಶೇ. 2 ರಿಂದ 3% ಹೆಚ್ಚು ಲಾಭಾಂಶ ಘೋಷಿಸುವುದು ಸೂಕ್ತ ಎಂದರು. ಜನತಾ ಸಂಘವು ಶೇ. 10% ಲಾಭಾಂಶ ಘೋಷಿಸಿರುವುದು ಉತ್ತಮ ನಿರ್ಧಾರವಾಗಿದೆ ಎಂದು ಶ್ಲಾಘಿಸಿದರು.

ಸಂಘದ ಆಂತರಿಕ ಲೆಕ್ಕ ಪರಿಶೋಧಕರಾದ ಶ್ರೀ ಆರ್. ಜಿ. ದೇಶಪಾಂಡೆ ಅವರು ಜನತಾ ಸೇವಾ ಟ್ರಸ್ಟ್ ನ ವಾರ್ಷಿಕ ವರದಿಯನ್ನು ಮಂಡಿಸಿ ಈ ವರ್ಷ ರಾಯಚೂರಿನಲ್ಲಿ ಮುಕ್ತಿರಥದ ಸೇವೆಯನ್ನು ಲೋಕಾರ್ಪಣೆ ಮಾಡಲು ಆಡಳಿತ ಮಂಡಳಿ ನಿರ್ಧರಿಸಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಸಂಘಕ್ಕೆ ಉತ್ತಮ ಸಲಹೆ ಮತ್ತು ಸೂಚನೆಗಳನ್ನು ಕಾಲ ಕಾಲಕ್ಕೆ ನೀಡುತ್ತಾ ಬಂದಿರುವ ಶಾಸನಬದ್ಧ ಲೆಕ್ಕ ಪರಿಶೋಧಕರಾದ ಶ್ರೀ ಮಧುಕರ್ ಹೆಗ್ಡೆ ಅವರನ್ನು ಸನ್ಮಾನಿಸಲಾಯಿತು. ಮುಕ್ತಿರಥದ ಮೂಲಕ ಮೃತರಾದ ವ್ಯಕ್ತಿಗಳ ಅಂತ್ಯಕ್ರಿಯೆಗೆ ಹಗಲು, ರಾತ್ರಿ ಅನ್ನದೇ ಸೇವೆ ಸಲ್ಲಿಸುತ್ತಿರುವ ಸಿಂಧನೂರಿನ ಮುಕ್ತಿರಥದ ವಾಹನ ಚಾಲಕ ಶ್ರೀ ಸಮೀರ್ ಅಹ್ಮದ್ ಅವರನ್ನು ಕೂಡ ಸನ್ಮಾನಿಸಲಾಯಿತು.

---



**ತುಮಕೂರು :** ದಿನಾಂಕ 30-09-2025 ರಂದು ದಸರಾ ಹಬ್ಬದ ಪ್ರಯುಕ್ತ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ತುಮಕೂರು ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಪೂಜಾ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ ವಿಜಯ್ ರವರು, ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್ ರವರು, ಕಿರಿಯ ಸಹಾಯಕರಾದ ಶ್ರೀ ಗೋವಿಂದ ರವರು ಹಾಗೂ ಸ್ಥಳೀಯ ಸೌಹಾರ್ದ ಸಹಕಾರಿಗಳು ಉಪಸ್ಥಿತರಿದ್ದರು.



**ದಾವಣಗೆರೆ :** ಶರಣ ಮಾಗನೂರು ಬಸಪ್ಪ ಸೌಹಾರ್ದ ಸಹಕಾರಿಯ 2024–25ನೇ ಸಾಲಿನ 5ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 03.08.2025 ರಂದು ಸಹಕಾರಿಯ ಅಧ್ಯಕ್ಷರಾದ ಡಾ. ಹೆಚ್. ಎನ್ ಮಂಜುನಾಥ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯ ಸದಸ್ಯರು 759, ಶೇರು ಬಂಡವಾಳ 22.50 ಲಕ್ಷ, ಆಪದ್ಧನ ಮತ್ತು ಇತರೆ ನಿಧಿಗಳು 34.99, ಠೇವಣಿಗಳು 1729.06, ಸಾಲಗಳು 1298.05, ದುಡಿಯುವ ಬಂಡವಾಳ 1828.46, ಲಾಭ 40.50 (ಲಕ್ಷಗಳಲ್ಲಿ) ಸಹಕಾರಿಯ ಸಾಲದ ವಸೂಲಿಯನ್ನು ಶೇ. 98.99% ವಸೂಲಿ ಆಗಿದ್ದು, ಎನ್.ಪಿ.ಎ 0% ಇರುತ್ತದೆ.



**ದಕ್ಷಿಣ ಕನ್ನಡ :** ದಿನಾಂಕ 06.09.2025 ರಂದು ಜಯ ಭಾರತ ಸೌಹಾರ್ದ ಸಹಕಾರಿ ನಿ. ತೊಕೋಟ್ಟು ಮಂಗಳೂರು, ಇವರು ತಮ್ಮ ಸಹಕಾರಿಯ 2024–25ನೇ ವರ್ಷದ ಸಾಮಾನ್ಯ ಸಭೆಯು ಶ್ರೀ, ವಿಕ್ರಮ್ ಬಂಗೇರ ಅಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಸದರಿ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ನಂದನ್ ಬಿ.ಎನ್. ರವರು ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಿದರು, ಸದರಿ ಸಭೆಯಲ್ಲಿ 84 ಜನ ಸದಸ್ಯರು ಹಾಜರಿದರು.



**ಹಾಸನ :** ದಿನಾಂಕ : 20.09.2025 ರಂದು ಅರಕಲಗೂಡು ತಾಲೂಕಿನ ವೀರಶೈವ ಲಿಂಗಾಯತ ಜನೋಪಯೋಗಿ ಸೌಹಾರ್ದ ಸಹಕಾರಿ ಸಂಘ ಇದರ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಸದಸ್ಯರಿಗೆ ಸೌಹಾರ್ದ ಸಹಕಾರಿ ಕಾಯ್ದೆ, ಇತ್ತೀಚಿನ ಹೊಸ ತಿದ್ದುಪಡಿ ಹಾಗೂ ಸದಸ್ಯರ ಕರ್ತವ್ಯಗಳು ಮತ್ತು ಹಕ್ಕುಗಳ ಕುರಿತು ಮಾಹಿತಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ಅಶೋಕ ಜಿ ರವರು ನೀಡಿದರು. ಸದರಿ ಸಭೆಯಲ್ಲಿ ಸಹಕಾರಿಯ ಎಲ್ಲಾ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಸದಸ್ಯರು ಭಾಗವಹಿಸಿದ್ದರು.



ಹಾಸನ : ದಿನಾಂಕ : 12.09.2025 ರಂದು ಹಾಸನದ ಜೀವನ ಜ್ಯೋತಿ ಸ್ರೀ ಶಕ್ತಿ ಸೌಹಾರ್ದ ಸಹಕಾರಿ ಸಂಘ ನಿ.. ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಲಾಯಿತು. ಸದರಿ ಸಭೆಯಲ್ಲಿ ಡಾ. ಅಂತೋಣಿ ಸ್ವಾಮಿ, ಅಧ್ಯಕ್ಷರು, ಸಿ.ಎಂ.ಎಸ್.ಎಸ್ ಸೇವಾ ಸಂಸ್ಥೆ, ಹಾಸನ ಹಾಗೂ ಹಾಸನ ಜಿಲ್ಲೆಯ ಸೌಹಾರ್ದ ಅಭಿವೃದ್ದಿ ಅಧಿಕಾರಿ ಶ್ರೀ ಅಶೋಕ ಜಿ ಇವರು ಮತ್ತು ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು ಮತ್ತು ಸದಸ್ಯರು ಭಾಗವಹಿಸಿದರು.

ದಿನಾಂಕ: 13.09.2025 ರಂದು ಹಾಸನದ ಮಂಜುನಾಥೇಶ್ವರ ಸೌಹಾರ್ದ ಸಹಕಾರಿ ಸಂಘ ನಿ., ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹಾಸನ ಜಿಲ್ಲೆಯ ಸೌಹಾರ್ದ ಅಭಿವೃದ್ದಿ ಅಧಿಕಾರಿ ಶ್ರೀ ಅಶೋಕ ಜಿ ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಲಾಯಿತು. ಸದರಿ ಸಭೆಯಲ್ಲಿ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು ಮತ್ತು ಸದಸ್ಯರು ಭಾಗವಹಿಸಿದರು.

**ರಾಯಚೂರು :** ದಿನಾಂಕ 08.09.2025 ರಂದು ತುಂಗಭದ್ರಾ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸದರಿ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಆಡಳಿತ ಮಂಡಳಿ ಸದಸ್ಯರುಗಳು. ಸಿಬ್ಬಂದಿಗಳು ಹಾಗೂ 150 ಸಹಕಾರಿಯ ಸದಸ್ಯರುಗಳು ಭಾಗವಹಿಸಿದ್ದರು.




**ಚಿಕ್ಕಮಗಳೂರು :** ದಿನಾಂಕ:23.09.2025 ರಂದು ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ 2ನೇ ವರ್ಷದ ಸಾಮಾನ್ಯ ಸಭೆಯನ್ನು ಕೊಪ್ಪದ ಯಸ್ಕಾನ್ ವಾಣಿಜ್ಯ ಸಂಕೀರ್ಣದಲ್ಲಿ ಆಯೋಜಿಸಲಾಗಿತ್ತು, ಈ ಸಾಮಾನ್ಯ ಸಭೆಯಲ್ಲಿ ಒಕ್ಕೂಟದ ಅಧ್ಯಕ್ಷರಾದ ಶ್ರೀಯುತ ವೈ.ಎಸ್. ಸುಬ್ರಹ್ಮಣ್ಯ ಹಾಗೂ ಆಡಳಿತ ಮಂಡಳಿಯ ನಿರ್ದೇಶಕರು ಭಾಗವಹಿಸಿದ್ದರು, ಸದರಿ ಕಾರ್ಯಕ್ರಮದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಅಶೋಕ ಜಿ ರವರು ಒಕ್ಕೂಟದ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಸದಸ್ಯರಿಗೆ ಸೌಹಾರ್ದ ಸಹಕಾರಿ ಕಾಯ್ದೆ, ಇತ್ತೀಚಿನ ಹೊಸ ತಿದ್ದುಪಡಿ ಹಾಗೂ ಸದಸ್ಯರ ಕರ್ತವ್ಯಗಳು ಮತ್ತು ಹಕ್ಕುಗಳ ಕುರಿತು ಮಾಹಿತಿ ನೀಡಲಾಯಿತು.



**ಕಲಬುರಗಿ :** ಕೃಷ್ಣಾ ಪರಿವಾರ ಸೌಹಾರ್ದ ಸಹಕಾರಿ ನಿ., ಕಲಬುರಗಿ ಸಹಕಾರಿಯ 4ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಕರ್ನಾಟಕ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಕುರಿತು ಬೆಳೆದು ಬಂದ ದಾರಿ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಕಲಬುರಗಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಜಿ.ಸಿ ಶೆಟಗಾರರವರು ಕೃಷ್ಣಾ ಪರಿವಾರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಎಸ್ ಪಾಟೀಲರವರು ಉಪಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ರವರು ಆಡಳಿತ ಮಂಡಳಿ ಸದಸ್ಯರುಗಳು ಭಾಗವಹಿಸಿದ್ದರು. ಕಲಬುರಗಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶಿವಕಾಂತರವರು ಉಪಸ್ಥಿತರಿದ್ದರು.



**ಚಿಕ್ಕಮಗಳೂರು :** ದಿನಾಂಕ 15-09-2025 ನೇ ಸೋಮವಾರ ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 26 ನೇ ಸರ್ವಸದಸ್ಯರ ಸಭೆಯು ಕೊಪ್ಪದ ಗಾಯತ್ರಿ ಮಂದಿರದಲ್ಲಿ ಸಹಕಾರಿಯ ಅಧ್ಯಕ್ಷರಾದ ಮಂಗಳಾ ಕೆ.ಸಿ. ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಸಕ್ತ ಸಾಲಿನಲ್ಲಿ ಸಹಕಾರಿಯು ರೂ 44.91 ಲಕ್ಷ ಲಾಭಗಳಿಸಿದ್ದು ಸದಸ್ಯರಿಗೆ 12% ಡಿವಿಡೆಂಡ್ ನೀಡಲು ತೀರ್ಮಾನಿಸಲಾಯಿತು. 2024-25 ನೇ ಸಾಲಿನಲ್ಲಿ ಎಸ್.ಎಸ್. ಎಲ್.ಸಿ ಹಾಗೂ ದ್ವಿತೀಯ ಪಿ.ಯು.ಸಿ ಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.. ಸಹಕಾ-ರಿಯ ಉಪಾಧ್ಯಕ್ಷರಾದ ಶ್ರೀಯುತ ದಿವಾಕರ ಎ ಇವರು ಸರ್ವ ಸದಸ್ಯರನ್ನು ಹಾಗೂ ಗಣ್ಯರನ್ನು ಸ್ವಾಗತಿಸಿದರು. ಸಹಕಾರಿಯ ಎಲ್ಲಾ ನಿರ್ದೇಶಕರು, ಲೆಕ್ಕಪರಿಶೋಧಕರು, ಸಹಕಾರಿಯ ನ್ಯಾಯವಾದಿಗಳು ಮುಖ್ಯ ಕಾರ್ಯನಿರ್ವಾಹಕ ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು ಶ್ರೀ ಕೆ.ಆರ್. ರಾಘವೇಂದ್ರ ಇವರು ಸರ್ವರಿಗೂ ವಂದನಾರ್ಪಣೆ ಸಲ್ಲಿಸಿದರು.



**ಚಿತ್ರದುರ್ಗ:** ದಿನಾಂಕ 23.09.2025 ರಂದು ಭರಮಸಾಗರ ಸೌಹಾರ್ದ ಸಹಕಾರಿ ಸಂಘ ನಿ., ಇದರ ಹೊಳಲ್ಕೆರೆ ಪಟ್ಟಣದ ಶಾಖೆಯನ್ನು ಪ್ರಾರಂಭಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

### ಹರಿಹರ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಸಂಘ ನಿ., ಹರಿಹರ



ಶ್ರೀ ಹೆಚ್. ಎಮ್ ನಾಗರಾಜ
ಅಧ್ಯಕ್ಷರು



ಶ್ರೀ ಜಿ. ಕೆ ವೀರಣ್ಣ
ಉಪಾಧ್ಯಕ್ಷರು



**ಪುತ್ತೂರು :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ಪುತ್ತೂರು ಇದರ ಸಹಸಂಸ್ಥೆ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಪ್ರಕಾಶನಗೊಳ್ಳುತ್ತಿರುವ 8ನೇ ಕೃತಿ ಬಿ.ವಿ.ಸೂರ್ಯನಾರಾಯಣ–ರವರು ಬರೆದ 'ಮೊಗ್ಗು ಅರಳುವ ಮುನ್ನ' ಕೃತಿಯ ಲೋಕಾರ್ಪಣಾ ಸಮಾರಂಭ ಸೆ.25 ರಂದು ದರ್ಬೆಯ ವಿನಾಯಕನಗರ ದಲ್ಲಿರುವ ಸಚ್ಚಿದಾನಂದ ಸೇವಾಸದನದಲ್ಲಿ ನಡೆಯಿತು.

ಸಭಾಧ್ಯಕ್ಷತೆ ವಹಿಸಿದ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತದ ಅಧ್ಯಕ್ಷರೂ ಆಗಿರುವ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ಮ್ಯಾನೇ–ಜಿಂಗ್ ಟ್ರಸ್ಟಿ ಎಸ್. ಆರ್. ಸತೀಶ್ಚಂದ್ರ ರವರು ಮಾತನಾಡಿ, ಹೊಸತನ ತರುವ ನಿಟ್ಟಿನಲ್ಲಿ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ಪ್ರಾರಂಭಿಸಲಾಯಿತು. ಇದರಡಿ ಅನೇಕ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಈ ಪೈಕಿ ಪುಸ್ತಕ ಬಿಡುಗಡೆ ಕಾರ್ಯಕ್ರಮವೂ ಒಂದು. ಮೊಗ್ಗು ಅರಳುವ ಮುನ್ನ ಪುಸ್ತಕ ನಮ್ಮಸಂಸ್ಥೆಯಿಂದ ಪ್ರಕಾಶನಗೊಳ್ಳುತ್ತಿರುವ 8ನೇ ಕೃತಿಯಾಗಿದೆ. ಈ ಪುಸ್ತಕವನ್ನು ಪೋಷಕರು ಓದಿ ತಮ್ಮ ಮಕ್ಕಳಿಗೆ ದೃಷ್ಟಿಕೋನ ನೀಡಬೇಕು. ನಮ್ಮ ಮಕ್ಕಳ ಭವಿಷ್ಯಕ್ಕೆ ಪೂರಕವಾದ ಪುಸ್ತಕ ಇದಾಗಿದೆ ಎಂದರು.

ಕೃತಿ ಲೋಕಾರ್ಪಣೆ ಮಾಡಿದ ಅಡಿಕೆ ಪತ್ರಿಕೆಯ ಸಂಪಾದಕ ನಾ. ಕಾರಂತ ಪೆರಾಜೆ ಮಾತನಾಡಿ, ಸೂರ್ಯನಾರಾಯಣ ಅವರ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ಬಾಲ್ಯದಲ್ಲಿ ನಾವು ನೀವೆಲ್ಲರೂ ಮಾಡಿದ ತುಂಟಾಟಗಳನ್ನು ಒಳಗೊಂಡಿದೆ. ಈ ಪುಸ್ತಕವನ್ನು ಓದುತ್ತಾ ಹೋದಂತೆ ನಾನೂ ಮಗುವಾದೆ ಎಂದರು.

ಮಕ್ಕಳನ್ನು ಬೈಯುವ ಪ್ರವೃತ್ತಿ ಹೆಚ್ಚುತ್ತಿದೆ. ಸಾಮಾನ್ಯ ಜ್ಞಾನ ನೀಡದೇ ಮಕ್ಕಳನ್ನು ದೂಷಿಸಿ ಪ್ರಯೋಜನವಿಲ್ಲ. ಹೀಗಾಗಿ ಮೊಗ್ಗು ಅರಳುವ ಸಂದರ್ಭದಲ್ಲಿ ಮಕ್ಕಳಿಗೆ ಬೇಕಾದ ಸಾಮಾನ್ಯ ಜ್ಞಾನ ನೀಡಬೇಕು. ತಮ್ಮ ಮಕ್ಕಳ ಮುಂದೆ ಪೋಷಕರು ಮಾದರಿಯಾಗಿ ನಡೆದುಕೊಳ್ಳಬೇಕು. ಪೋಷಕರು ಸಂಸ್ಕೃತಿ ಪಾಲಿಸಿದರೆ ಮಕ್ಕಳೂ ಪಾಲಿಸುತ್ತಾರೆ. ಮಗುವಿನ ಆಸಕ್ತಿಯನ್ನು ಬಾಲ್ಯದಲ್ಲೇ ತಿಳಿದುಕೊಳ್ಳಬೇಕು. ಒತ್ತಡದಿಂದ ಕಲಿಸಿದರೆ ಮಕ್ಕಳು ಗುರಿ ತಲುಪುವ ಮುನ್ನವೇ ಆಸಕ್ತಿ ಕಳೆದುಕೊಳ್ಳುತ್ತಾರೆ. ಹೀಗಾಗಿ ಬಾಲ್ಯದಲ್ಲೇ ತಮ್ಮ ಮಕ್ಕಳ ಆಸಕ್ತಿಯನ್ನು ತಿಳಿದುಕೊಂಡು ಅದಕ್ಕೆ ತಕ್ಕಂತೆ ಪ್ರೋತ್ಸಾಹಿಸಬೇಕು ಎಂದರು.

ಮುಖ್ಯ ಅತಿಥಿಯಾಗಿದ್ದ ರಾಜ್ಯ ಮಟ್ಟದ ಪ್ರಶಸ್ತಿ ಪುರಸ್ಕೃತ ನಿವೃತ್ತ ಶಿಕ್ಷಕ, ಸುದ್ದಿ ಬಿಡುಗಡೆ ಪತ್ರಿಕೆಯ 'ಪ್ರತಿಭಾರಂಗ' ಅಂಕಣಕಾರರಾದ ನಾರಾಯಣ ರೈ ಕುಕ್ಕುವಳ್ಳಿ ಮಾತನಾಡಿ, ಸೂರ್ಯನಾರಾಯಣ ಅವರು ಇಂಗ್ಲಿಷ್ ಶಿಕ್ಷಕರಾಗಿದ್ದರೂ ಕನ್ನಡ ಭಾಷೆಯ ಮೇಲೆ ಉತ್ತಮ ಹಿಡಿತ ಸಾಧಿಸಿದ್ದಾರೆ. ಅವರ ಪದಪುಂಜಗಳು ನನ್ನ ಬರವಣಿಗೆಗೆ ಸಹಕಾ–ರಿಯಾಗಿದೆ. ಇವರಿಗೆ ಸಿಟ್ಟು ಎಂಬುದು ಇಲ್ಲ. ಪಾಠ, ಸಾಹಿತ್ಯದ ಜೊತೆಗೆ ಮಕ್ಕಳನ್ನು ತಮ್ಮತ್ತ ಸೆಳೆಯುತ್ತಿದ್ದರು. ಇವರು ಬರೆದ ಪುಸ್ತಕ ಓದುತ್ತಿದ್ದಾಗ ನನ್ನ ಬಾಲ್ಯದ ನೆನಪುಗಳಾದವು. ಅಂದು ಮಕ್ಕಳಿಗೆ ಸಿಗುತ್ತಿದ್ದ ಪ್ರೀತಿ ಇಂದು ಸಿಗುತ್ತಿಲ್ಲ. ಅಂದಿನ ಮಕ್ಕಳಿಗೆ ಹಿರಿಯರು ನೀಡುತ್ತಿದ್ದ ವಿಚಾರಧಾರೆಗಳನ್ನು ಇಂದಿನ ಹಿರಿಯರು ತಮ್ಮ ಮಕ್ಕಳಿಗೆ ಕಲಿಸಿಕೊಡುವಲ್ಲಿ ವಿಫಲರಾಗಿದ್ದಾರೆ. ಹೀಗಾಗಿ ತಮ್ಮ ಮಕ್ಕಳಿಗೆ ವಿಚಾರಧಾರೆಗಳನ್ನು ನೀಡಲು ಈ ಪುಸ್ತಕ ಸಹಕಾರಿಯಾಗಲಿದೆ ಎಂದರು. .ಸ. ಹಿ. ಪ್ರಾ. ಶಾಲೆ, ಭಕ್ತಕೋಡಿ ಇಲ್ಲಿನ ಸಹಶಿಕ್ಷಕಿ ಸುನೀತಾ ಯನ್. ಕೃತಿ ಪರಿಚಯ ಮಾಡಿದರು.

'ಮೊಗ್ಗು ಅರಳುವ ಮುನ್ನ' ಕೃತಿಯ ಲೇಖಕ ನಿವೃತ್ತ ಪ್ರಾಂಶುಪಾಲ ಬಿ. ವಿ. ಸೂರ್ಯನಾರಾಯಣ ಎಲಿಯ ಸಮಾರಂಭದಲ್ಲಿ ಉಪಸ್ಥಿತ–ರಿದರು. ಸಿಬ್ಬಂದಿ ಚಂದ್ರಶೇಖರ್, ರವಿಚಂದ್ರ ನಾಯಕ್ ಸಹಕರಿಸಿದರು.

ಕಾರ್ಯಕ್ರಮದಲ್ಲಿ ಸೂರ್ಯನಾರಾಯಣ ದಂಪತಿಯನ್ನು ಸನ್ಮಾನಿಸಿ ಗೌರವಿಸಲಾಯಿತು. ಸಹಕಾರಿಯ ಶಿಲ್ಪ ಪ್ರಾರ್ಥಿಸಿದರು. ಸಹಕಾರಿಯ ಸಿಇಒ ವಸಂತ ನಾಯಕ್ ಎ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದರು. ದರ್ಬೆ ಸಹಕಾರಿಯ ವ್ಯವಸ್ಥಾಪಕ ದೇವಿಪ್ರಸಾದ್ ವಂದಿಸಿದರು.

---



**ತುಮಕೂರು :** ದಿನಾಂಕ 30–09–2025 ರಂದು ದಸರಾ ಹಬ್ಬದ ಪ್ರಯುಕ್ತ ಕೆಂಗಲ್ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿ., ತುಮಕೂರು ಇದರ ಪೂಜಾ ಕಾರ್ಯಕ್ರಮದಲ್ಲಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್ ರವರು ಭಾಗವಹಿಸಿ ಸಹಕಾರಿಗೆ ಶುಭ ಕೋರಿದರು.



**ಬೆಂಗಳೂರು :** ದಿನಾಂಕ 07/09/2025 ರಂದು ಶ್ರೀ ಮಾತಾಜಿ ವಿವಿದೊದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಇದರ 14ನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ.ಡಿ.ವಿ.ಶಾಸ್ತ್ರಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

# Co-operative Democracy - Election of Members of the Board in Cooperatives - Principle of "One Member One Vote" - An Analysis

- Dr. Dayananda Murthy C.P. Sri C.N. Parashiva Murthy

Co-operatives are democratic organisations, controlled by the members, who actively participate in setting their policies and making decisions. Men and women serving as elected representatives are accountable to the members. In primary cooperatives, members have equal voting rights, i.e., "One Member, One Vote."

The cooperative principles are the guiding force for registration of cooperatives under the Karnataka Cooperative Societies Act, 1959 (hereinafter referred as "the KCS Act") and the Karnataka SouhardaSahakari Act, 1997 (hereinafter referred as "the Souharda Act"). The seven governing principles are as follows:

1. Voluntary and open membership
2. Democratic member control – "One Member One Vote"
3. Members economic participation
4. Autonomy and independence
5. Education, training and information
6. Cooperation among cooperatives
7. Concern for the community (inserted in 1984)

The Multi-State Cooperative Societies Act, 2002, under section 31 provides as follows:

"Every member of a multi-state cooperative society including a member who is an employee of such society, shall have one vote in the affairs of the society."

The KCS Act, 1959, under section 20(1) provides that

"No member, no representative or no delegate of a society shall have more than one vote in the general meeting or in the election of the members of the Board of the cooperative society."

Though, the Souharda Act does not provide for "one member, one vote," but under chapter X of the said Act, while explaining the second cooperative principles, recognises "one member, one vote."

The Representation of the People Act, 1951 also provides "one vote" to every registered voter. Though, there were dual representative constituency, where voters could exercise two votes, currently we do not have constituencies where two representatives are elected.

The Karnataka legislative council election, provides for preferential voting, wherein the voters exercise their preferential vote, and ultimately only one candidate is elected. The Companies Act, 2013 also provides voting powers on the member or shareholder on the basis of shares held.

The special feature of cooperationsis that the cooperative principles are the basis on which, they are registered. Members contribute shares and control the capital of their cooperatives. Cooperations are autonomous, self-help organization controlled by the members. Cooperative serve the members most effectively and strengthen the cooperative movement by working together through local, regional, national and international situations. Further, while focusing on member needs, cooperatives work for the sustainable development of their communities or groups, through policies accepted

by the members. The cooperatives are voluntary organizations, open to all persons able to use the services, without any discrimination.

**Election of the Board :**

The KCS Act, under section 28A provides that the minimum member of directors shall be thirteen and maximum shall be twenty-one, excluding the Chief Executive, depending on the area of operation of the society. The Government has power to nominate one person as their nominee for assisting the societies. One nominee of financing agency can be ex-offico member for agriculture credit societies. Further, there shall be reservations in every cooperative society, where "individuals are only members," which are as follows:

1. One seat for scheduled caste
2. One seat for scheduled tribe
3. Two seats for women
4. Two seats for backward classes

The Board of Directors may co-opt two persons as professional directors, who have experience in banking, management, finance or specialization in any field relating to the objects of the society.

Similarly, the Souharda Act, under section 26 provides that there shall be minimum thirteen members and maximum of twenty-one members on the board, depending on the area of operation. Where "individual only are members," there shall be reservation as follows:

1. One seat for scheduled caste
2. One seat for scheduled tribe
3. Two seats for women
4. Two seats for backward classes

In addition, the Board of Directors may co-opt two persons as professional directors, who have experience in banking, management, finance and specialization in other field as carried by the cooperative.

The Election to the Board of Directors under both the KCS Act and the Souharda Act shall be conducted by the Election Authority created under section 39A read with section 39AA of the KCS Act. The Election Authority has the duty to conduct elections as per the law. The cooperative societies, send the proposal to hold election six months in advance along with the draft voters list and defaulters list. The Authority empowers a person to verify the voters and defaulters list, before it is published. The calendar of events will be issued based on the date of election fixed by the Board.

The procedure adopted by the Registrar and the Election Authority till date is that every member will exercise as many voters as the candidates to be elected, irrespective of the reserved seats, which means that every member will exercise thirteen votes in case of primary cooperative societies, whose area of operation is less than a taluk,instead of only one vote as per the cooperative principle and as per the provision of section 20 of the KCS Act. In certain cases, election is held to elect among the reserved groups. This violation of the provisions of the Act has never been rectified for more than 100 years.

Rule 13 of the Karnataka Cooperative Societies Rules, 1960provides for the election of the members of the (Board) by the general body. The Rule is as follows:

"(1) A Co-operative Society may, for the purpose of election of members to the committee, divide its membership into different groups on a territorial or any other basis.

(2) The bye-laws of such a society may specify the number or proportion of the members of the committee, who may be elected to represent each

such group on the committee and may specify further that such representatives may be elected, -

(a) by all the members of the society; constituting a single electoral college or

(b) by different smaller groups of members of the society to which such directors belong, constituting more than one electoral college.

Provided, that the number of directors to be elected from each electoral college at the general election of the board of such co-operative society shall be as nearly as possible in proportion to the number of the members in the respective electoral college.

(3) However, if the bye-laws of a society do not provide for such electoral colleges as specified in sub rule (2(b) when the election to the board of directors of the society are due, the Co-operative Election (Authority) is competent to determine such electoral college and notify the same and conduct such elections of the society as per the notification issued)"

The Election Authority is given wide powers, if the society has not classified the electoral college, but can this rule 13(3) violate section 20 of the KCS Act? The answer will be 'No.' The intention of the legislature under section 20 is that one member will have only one vote. Hence, if the Election Authority notifies the election through calendar of events, can it be validated in violation of section 20? Once again, the answer will be 'No.' The electoral college shall also have only one vote per member. To cite, there are 200 women members in a cooperative society and only 50 members arrive to cast their vote to elect two members who have contested. The 50 members will exercise their vote to one woman candidate only and out of say, four candidates are contesting and votes polled will be 20 for 'A', 15 for 'B', 10 for 'C' and 5 for 'D.' The Returning Officer will have to declare that 'A' and 'B' are elected. This procedure is followed in all groups of electoral college, if the society has not formed the groups. The power given to the Election Authority under Rule 13(3) is controlled under section 20 of the KCS Act. Further, to have clarity, the reserved and general category shall elect their representatives amongst themselves. The scheduled caste, scheduled tribe, backward classes, women and general electoral college will elect from among that groups only. A member shall not exercise a vote to elect one scheduled caste, scheduled tribe, two women, two backward classes and seven general category votes. He shall vote within the group and only one vote is to be cast not as many seats to be elected. This will be in keeping with the 2nd corporative principle that there shall be one member one vote as provided under sub-section (2) of section 68 of the Souharda Act. If this principle is not followed, the law and the cooperative principles are violated.

**Conclusion:**

The cooperative principle "One Member, One Vote" is sacrosanct and section 20 of the KCS Act and section 68(2) of the Souharda Act mandate such a policy, which recognizes the "Co-operative Democracy." The rules cannot be framed in violation of the mandate given under any statute. The electoral college, if not incorporated under the byelaws, the Election Authority shall have to follow the provision of the KCS Act and the SouhardaAct. At the time of scrutiny of the voter list and issuing of the calendar of events, the Election Authority shall specifically restrict the members from exercising more than one vote. The Registrar and the Election Authority are duty bound to comply with this provision, as "One Member, One Vote," where individuals only are members in a cooperative society.

# 3-I ಎಂಜಿನ್: ಭಾರತದ $5 ಟ್ರಿಲಿಯನ್ ಆರ್ಥಿಕತೆಯತ್ತ ಓಡಿಸುವ ಇಂಧನ. (Innovation, Investment & Inclusion)

– ಶ್ರೀ ರಾಜೇಶ್ ನಾಯ್ಕ್, ಉಪನ್ಯಾಸಕ ವಿಶ್ವವಿದ್ಯಾನಿಲಯ ಕಲಾ ಕಾಲೇಜು ವಾಣಿಜ್ಯ ಮತ್ತು ನಿರ್ವಹಣಾ ವಿಭಾಗ ತುಮಕೂರು ವಿಶ್ವವಿದ್ಯಾನಿಲಯ

**ಪೀಠಿಕೆ**

ಭಾರತವು ಇಂದಿನ ದಿನಗಳಲ್ಲಿ ವಿಶ್ವದ ಆರ್ಥಿಕ ನಕ್ಷೆಯಲ್ಲಿ ಅತ್ಯಂತ ಚುರುಕು ರಾಷ್ಟ್ರಗಳಲ್ಲಿ ಒಂದಾಗಿದೆ. ಅಂತರಾಷ್ಟ್ರೀಯ ಹಣಕಾಸು ನಿಧಿ (IMF) ಹಾಗೂ ವಿಶ್ವ ಬ್ಯಾಂಕ್ ವರದಿ ಪ್ರಕಾರ, ಭಾರತವು ಮುಂದಿನ ದಶಕದಲ್ಲಿ ಅಮೇರಿಕಾ ಮತ್ತು ಚೀನಾ ನಂತರದ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮುವ ಸಾಧ್ಯತೆ ಇದೆ. ಈಗಾಗಲೇ ಭಾರತವು ವಿಶ್ವದ ಐದನೇ ಅತಿ ದೊಡ್ಡ ಆರ್ಥಿಕತೆ ಸ್ಥಾನವನ್ನು ಪಡೆದಿದ್ದು, ವೇಗವಾಗಿ ಬೆಳೆಯುತ್ತಿರುವ ಜಾಗತಿಕ ಮಾರುಕಟ್ಟೆಗಳಲ್ಲಿ ಪ್ರಮುಖ ಕೇಂದ್ರವಾಗುತ್ತಿದೆ. ಆದರೆ ಕೇವಲ ಅಂಕಿಅಂಶಗಳ ಏರಿಕೆ ಮಾತ್ರ ಆರ್ಥಿಕ ಶಕ್ತಿಯನ್ನು ಸೂಚಿಸುವುದಿಲ್ಲ; ಬದಲಾಗಿ ಅದು ಜನಜೀವನದ ಗುಣಮಟ್ಟ, ಉದ್ಯೋಗಾವಕಾಶಗಳು, ತಂತ್ರಜ್ಞಾನ ಪ್ರವೇಶ, ಮೂಲಸೌಕರ್ಯ ಅಭಿವೃದ್ಧಿ, ಸಾಮಾಜಿಕ ಸಮಾನತೆ ಇತ್ಯಾದಿಗಳನ್ನು ಒಳಗೊಂಡಿರಬೇಕು.

ಈ ಹಿನ್ನೆಲೆಯಲ್ಲಿ ಭಾರತ ಸರ್ಕಾರವು $5 ಟ್ರಿಲಿಯನ್ ಆರ್ಥಿಕತೆ ಎಂಬ ಗುರಿಯನ್ನು ಘೋಷಿಸಿದೆ. ಈ ಗುರಿ ಕೇವಲ ಆರ್ಥಿಕ ಉತ್ಪಾದನೆ (GDP) ಹೆಚ್ಚಿಸುವುದಕ್ಕೆ ಮಾತ್ರವಲ್ಲ, ಸಮಗ್ರ ರಾಷ್ಟ್ರ ನಿರ್ಮಾಣಕ್ಕೆ ಸಂಬಂಧಿಸಿದೆ. ಅಂದರೆ, ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು, ದಾರಿದ್ರ್ಯವನ್ನು ಕಡಿಮೆ ಮಾಡುವುದು, ತಂತ್ರಜ್ಞಾನವನ್ನು ಪ್ರತಿಯೊಬ್ಬರಿಗೂ ತಲುಪಿಸುವುದು, ಗ್ರಾಮೀಣ–ನಗರ ಅಂತರವನ್ನು ಕಡಿಮೆ ಮಾಡುವುದು ಮತ್ತು ಶಾಶ್ವತ ಬೆಳವಣಿಗೆ ಸಾಧಿಸುವುದು ಇದರ ಭಾಗವಾಗಿವೆ.

ಈ ಮಹತ್ವಾಕಾಂಕ್ಷಿ ಗುರಿಯನ್ನು ಸಾಧಿಸಲು ಭಾರತವು "3-I ಎಂಜಿನ್" ಎಂಬ ಪರಿಕಲ್ಪನೆಯನ್ನು ಅಳವಡಿಸಿಕೊಂಡಿದೆ. ಇದರಲ್ಲಿ ನವೀನತೆ (Innovation) ಹೊಸ ಆವಿಷ್ಕಾರ ಮತ್ತು ತಂತ್ರಜ್ಞಾನ ಸೃಷ್ಟಿಸುವುದನ್ನು ಸೂಚಿಸುತ್ತದೆ; ಹೂಡಿಕೆ (Investment) ಆ ನವೀನತೆಯನ್ನು ಕಾರ್ಯರೂಪಕ್ಕೆ ತರುವ ಶಕ್ತಿ; ಮತ್ತು ಸಾಮಾವೇಶ (Inclusion) ಆ ಬೆಳವಣಿಗೆಯ ಫಲವನ್ನು ಪ್ರತಿಯೊಬ್ಬ ನಾಗರಿಕರಿಗೂ ಸಮಾನವಾಗಿ ತಲುಪಿಸುವ ದಾರಿ.

ಉದಾಹರಣೆಗೆ, ಡಿಜಿಟಲ್ ಇಂಡಿಯಾ ಮಿಷನ್ ಡಿಜಿಟಲ್ ನವೀನತೆಯನ್ನು ಉತ್ತೇಜಿಸಿದರೆ, ಗತಿಶಕ್ತಿ ಮತ್ತು PLI ಯೋಜನೆಗಳು ಹೂಡಿಕೆಯನ್ನು ಆಕರ್ಷಿಸುತ್ತವೆ. ಇತ್ತ ಪ್ರಧಾನಮಂತ್ರಿ ಜನಧನ್ ಯೋಜನೆ, ಉಜ್ವಲ, ಆಯುಷ್ಮಾನ್ ಭಾರತ ಮುಂತಾದವು ಸಾಮಾವೇಶವನ್ನು ಖಚಿತಪಡಿಸುತ್ತವೆ. ಹೀಗಾಗಿ 3-I ಎಂಜಿನ್ ಒಟ್ಟಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಭಾರತವು ಕೇವಲ ಆರ್ಥಿಕ ಶಕ್ತಿಯಾಗಿ ಅಲ್ಲದೆ, ಸಮಾಜಮುಖಿ, ಸಮಾನತೆ ಆಧಾರಿತ ಹಾಗೂ ಶಾಶ್ವತ ಅಭಿವೃದ್ಧಿಯ ಮಾದರಿ ರಾಷ್ಟ್ರವಾಗಿ ಹೊರಹೊಮ್ಮಲು ಸಾಧ್ಯ.

**ನವೀನತೆ (Innovation) : ಪ್ರಗತಿಯ ಸ್ಫೂರ್ತಿ**

ನವೀನತೆ ಎಂದರೆ ಕೇವಲ ಹೊಸ ಆವಿಷ್ಕಾರಗಳನ್ನು ಮಾಡುವುದಷ್ಟೇ ಅಲ್ಲ, ಹೊಸ ಆಲೋಚನೆಗಳನ್ನು ಕಾರ್ಯಗತಗೊಳಿಸುವ ಪ್ರಕ್ರಿಯೆ. ತಂತ್ರಜ್ಞಾನ, ನಿರ್ವಹಣೆ, ಸೇವೆ, ಕೃಷಿ, ಕೈಗಾರಿಕೆ – ಯಾವ ಕ್ಷೇತ್ರವಾಗಿದ್ದರೂ ನವೀನತೆ ಆ ಕ್ಷೇತ್ರದ ಸಾಮರ್ಥ್ಯವನು ್ನಹೆಚ್ಚಿಸುತ್ತದೆ. ಆರ್ಥಿಕ ಬೆಳವಣಿಗೆಯಲ್ಲಿ ಇದುಮೂಲಸ್ಫೂರ್ತಿ. ಭಾರತವು ಕಳೆದ ಎರಡು ದಶಕಗಳಲ್ಲಿ ಜಾಗತಿಕ ಮಟ್ಟದಲ್ಲಿ ನವೀನತೆಯ ಕೇಂದ್ರವಾಗುತ್ತಿದೆ.

ಉದಾಹರಣೆಗೆ, ಡಿಜಿಟಲ್ ಪಾವತಿ ವ್ಯವಸ್ಥೆ (UPI) ಒಂದು ಕ್ರಾಂತಿ. ಕೇವಲ ಒಂದು ಮೊಬೈಲ್ ಅಪ್ಲಿಕೇಶನ್ ಮೂಲಕ ದೈನಂದಿನ ಸಾವಿರಾರು ಕೋಟಿ ರೂ. ವ್ಯವಹಾರಗಳು ನಡೆಯುತ್ತಿವೆ. ಇದು ಗ್ರಾಮೀಣ ಪ್ರದೇಶದ ಸಣ್ಣ ವ್ಯಾಪಾರಿಗಳಿಗೂ ನಗರಗಳ ದೊಡ್ಡ ಕಂಪನಿಗಂದಿಗೆ ಸ್ಪರ್ಧಿಸಲು ಅವಕಾಶ ನೀಡಿದೆ. ಇಂದಿನ ದಿನಗಳಲ್ಲಿ ಚಹಾ ಅಂಗಡಿಯಿಂದ ಹಿಡಿದು ದೊಡ್ಡ ಶಾಪಿಂಗ್ ಮಾಲ್‌ಗಳವರೆಗೆ ಕಿಖ ಕೋಡ್ ಸ್ಕ್ಯಾನ್ ಮೂಲಕ ಹಣ ಸ್ವೀಕರಿಸುವುದು ಸಾಮಾನ್ಯವಾಗಿದೆ.

ಅದೇ ರೀತಿ, ಆರೋಗ್ಯ ಕ್ಷೇತ್ರದಲ್ಲಿ ಟೆಲಿಮೆಡಿಷಿನ್ ಸೇವೆಗಳು ಗ್ರಾಮೀಣ ಪ್ರದೇಶದ ಜನರಿಗೆ ತಜ್ಞ ವೈದ್ಯರ ಸಲಹೆ ತಲುಪುವಂತೆ ಮಾಡಿವೆ. ಆಯುಷ್ಮಾನ್ ಭಾರತ ಡಿಜಿಟಲ್ ಮಿಷನ್ ಮೂಲಕ ಪ್ರತಿಯೊಬ್ಬ ನಾಗರಿಕರಿಗೂ ಡಿಜಿಟಲ್ ಆರೋಗ್ಯ ಐಡಿ ನೀಡುವ ಪ್ರಯತ್ನ ನಡೆಯುತ್ತಿದೆ.

ಕೃಷಿ ಕ್ಷೇತ್ರದಲ್ಲಿಯೂ ನವೀನತೆ ಮಹತ್ತರ ಪಾತ್ರವಹಿಸಿದೆ. ಉದಾಹರಣೆಗೆ, ಡ್ರೋನ್ ತಂತ್ರಜ್ಞಾನವನ್ನು ಬಳಸಿಕೊಂಡು ಬೆಳೆಗಳ ಮೇಲೆ ಗೊಬ್ಬರ, ಕೀಟನಾಶಕ ಹಚ್ಚುವುದು ಸಾಧ್ಯವಾಗಿದೆ. ಇದರ ಮೂಲಕ ಬೆಳೆಯ ಉತ್ಪಾದನೆ ಹೆಚ್ಚುವುದು, ವೆಚ್ಚ ಕಡಿಮೆಯಾಗುವುದು. ಜೊತೆಗೆ ಮಾರುಕಟ್ಟೆ ಆಧಾರಿತ ಆ್ಯಪ್‌ಗಳು (ಉದಾ: e-NAM) ರೈತರಿಗೆ ನೇರವಾಗಿ ಖರೀದಿದಾರರೊಂದಿಗೆ ಸಂಪರ್ಕ ಸಾಧಿಸಲು ಸಹಾಯ ಮಾಡುತ್ತಿವೆ.

ಶಕ್ತಿ ಕ್ಷೇತ್ರದಲ್ಲಿ, ಹಸಿರು ಹೈಡ್ರೋಜನ್ ಉತ್ಪಾದನೆ, ಸೌರ ಶಕ್ತಿ, ಗಾಳಿ ಶಕ್ತಿ ಮುಂತಾದ ನವೀನ ಯೋಜನೆಗಳು ಶಾಶ್ವತ ಇಂಧನದ ದಾರಿಯನ್ನು ತೆರೆದಿವೆ. ಈ ಮೂಲಕ ಭಾರತವು ತನ್ನ ಇಂಧನ ಅವಲಂಬನೆಯನ್ನು ಕಡಿಮೆಮಾಡಿ ಪರಿಸರ ಸಂರಕ್ಷಣೆಯತ್ತ ಹೆಜ್ಜೆ ಹಾಕುತ್ತಿದೆ.

ಹೀಗಾಗಿ, ನವೀನತೆ ಎಂದರೆ ಕೇವಲ ಹೊಸ ತಂತ್ರಜ್ಞಾನವಲ್ಲ; ಅದು

ಹೊಸ ಅವಕಾಶಗಳು, ಹೊಸ ಉದ್ಯೋಗಗಳು, ಹೊಸ ಮಾರುಕಟ್ಟೆಗಳು ಮತ್ತು ಹೊಸ ವಿಕಸನದ ದಾರಿಗಳು. $5 ಟ್ರಿಲಿಯನ್ ಆರ್ಥಿಕತೆಯ ಕನಸನ್ನು ಸಾಧಿಸಲು ನವೀನತೆ ಅವಶ್ಯಕ ಎಂಜಿನ್ ಆಗಿದೆ.

**ಹೂಡಿಕೆ (Investment): ಬೆಳವಣಿಗೆಯ ಇಂಧನ**

ಆರ್ಥಿಕತೆಯ ವೇಗವನ್ನು ನಿರ್ಧರಿಸುವ ಮುಖ್ಯ ಅಂಶ ಹೂಡಿಕೆ. ನವೀನತೆಯ ಮೂಲಕ ಹೊಸ ಆಲೋಚನೆಗಳು ಹುಟ್ಟುತ್ತವೆ, ಆದರೆ ಅವುಗಳನ್ನು ಕಾರ್ಯರೂಪಕ್ಕೆ ತರುವುದು ಹೂಡಿಕೆಯ ಮೂಲಕವೇ ಸಾಧ್ಯ. ಮೂಲಸೌಕರ್ಯ, ಕೈಗಾರಿಕೆ, ಸೇವಾ ವಲಯ, ಶಿಕ್ಷಣ, ಆರೋಗ್ಯ ಮತ್ತು ಕೃಷಿ ಎಲ್ಲ ಕ್ಷೇತ್ರಗಳಲ್ಲಿಯೂ ಹೂಡಿಕೆಯ ಹರಿವು ಅಗತ್ಯ. ಹೂಡಿಕೆ ಹೆಚ್ಚಾದಷ್ಟೂ ಉತ್ಪಾದನಾ ಸಾಮರ್ಥ್ಯ, ಉದ್ಯೋಗಾವಕಾಶಗಳು, ತಂತ್ರಜ್ಞಾನ ಅಭಿವೃದ್ಧಿ ಮತ್ತು ಜೀವನಮಟ್ಟದ ಸುಧಾರಣೆ ಸಾಧ್ಯ.

ಭಾರತವು ಇತ್ತೀಚಿನ ವರ್ಷಗಳಲ್ಲಿ ಮೂಲಸೌಕರ್ಯ ಹೂಡಿಕೆಗೆ ವಿಶೇಷ ಆದ್ಯತೆ ನೀಡಿದೆ. ಗತಿಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲಾನ್ ಮೂಲಕ ರಸ್ತೆ, ರೈಲು, ಬಂದರು, ವಿಮಾನ ನಿಲ್ದಾಣಗಳನ್ನು ಏಕೀಕೃತವಾಗಿ ಅಭಿವೃದ್ಧಿಪಡಿಸುವ ಕೆಲಸ ನಡೆಯುತ್ತಿದೆ. ಭಾರತಮಾಲಾ ಯೋಜನೆ ಮೂಲಕ ನೂರಾರು ಕಿಮೀ ಹೆದ್ದಾರಿಗಳು ನಿರ್ಮಾಣವಾಗುತ್ತಿವೆ.

ಸಾಗರಮಾಲಾ ಯೋಜನೆ ಬಂದರು ಮೂಲಸೌಕರ್ಯವನ್ನು ಜಾಗತಿಕ ಮಟ್ಟಕ್ಕೆ ತರುವ ಪ್ರಯತ್ನ ಮಾಡುತ್ತಿದೆ. ಸ್ಮಾರ್ಟ್ ಸಿಟೀಸ್ ಮಿಷನ್ ನಗರಾಭಿವೃದ್ಧಿಗೆ ವಿದೇಶಿ ಹೂಡಿಕೆಯನ್ನು ಆಕರ್ಷಿಸಿದೆ.

ಇದಲ್ಲದೆ, ಉತ್ಪಾದನಾ ವಲಯದಲ್ಲಿ (Manufacturing Sector) ಹೂಡಿಕೆಗೆ ಉತ್ತೇಜನ ನೀಡಲು ಸರ್ಕಾರ ಪಿಎಲ್ಐ ಯೋಜನೆ (Production Linked Incentive Scheme) ಪರಿಚಯಿಸಿದೆ. ಇದರಡಿ, ಎಲೆಕ್ಟ್ರಾನಿಕ್ಸ್, ಮೊಬೈಲ್, ಫಾರ್ಮಾ, ಸೌರ ಉಪಕರಣಗಳು ಮುಂತಾದ ಕ್ಷೇತ್ರಗಳಲ್ಲಿ ಜಾಗತಿಕ ಕಂಪನಿಗಳು ಭಾರತದಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸುತ್ತಿವೆ. ಉದಾಹರಣೆಗೆ, ಆಪಲ್ ಮತ್ತು ಸ್ಯಾಮ್ಸಂಗ್ ಕಂಪನಿಗಳು ಭಾರತವನ್ನು ಪ್ರಮುಖ ತಯಾರಿಕಾ ಕೇಂದ್ರವಾಗಿ ರೂಪಿಸುತ್ತಿವೆ.

ವಿದೇಶಿ ನೇರ ಹೂಡಿಕೆ (FDI) ಭಾರತ ಆರ್ಥಿಕತೆಯ ಬಲವಾಗಿದೆ. 2022–23ರಲ್ಲಿ ಭಾರತವು 80 ಬಿಲಿಯನ್ ಡಾಲರ್‌ಗಿಂತ ಹೆಚ್ಚು ಎಫ್‌ಡಿಐ ಆಕರ್ಷಿಸಿತು. ಇದರಿಂದ ಉದ್ಯೋಗಾವಕಾಶಗಳು ಹೆಚ್ಚಿದವು ಮತ್ತು ತಂತ್ರಜ್ಞಾನ ವಿನಿಮಯ ಸಾಧ್ಯವಾಯಿತು.

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿಯೂ ಹೂಡಿಕೆಗಳು ಪ್ರಮುಖ. ಖಾಸಗಿ ವಿಶ್ವವಿದ್ಯಾಲಯಗಳು, ತಂತ್ರಜ್ಞಾನ ಸಂಸ್ಥೆಗಳು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು – ಇವುಗಳಲ್ಲಿ ಹೂಡಿಕೆ ಹೆಚ್ಚಾದಂತೆ, ಮಾನವಸಂಪನ್ಮೂಲದ ಗುಣಮಟ್ಟ ಉತ್ತಮಗೊಳ್ಳುತ್ತದೆ.

ಕೃಷಿ ವಲಯದಲ್ಲಿ, FPOಗಳು (Farmers Producer Organisations), ಶೀತಗೃಹ (Cold Storage), ಮಾರುಕಟ್ಟೆ ಮೂಲಸೌಕರ್ಯಗಳಿಗೆ ಹೂಡಿಕೆ ರೈತರ ಆದಾಯವನ್ನು ಹೆಚ್ಚಿಸುತ್ತವೆ.

ಒಟ್ಟಿನಲ್ಲಿ, ಹೂಡಿಕೆ ಎಂದರೆ ಕೇವಲ ಹಣ ಹೂಡುವುದು ಅಲ್ಲ; ಅದು ಭವಿಷ್ಯದ ಆರ್ಥಿಕ ಸಾಮರ್ಥ್ಯಕ್ಕೆ ಇಂಧನ ತುಂಬುವುದು. ನವೀನ ಆಲೋಚನೆಗಳಿಗೆ ಹೂಡಿಕೆ ಒಟ್ಟಾದಾಗ ಮಾತ್ರ ಅವು ಸಮಗ್ರ ಅಭಿವೃದ್ಧಿಗೆ ದಾರಿ ಮಾಡುತ್ತವೆ. ಹೀಗಾಗಿ, $5 ಟ್ರಿಲಿಯನ್ ಗುರಿಯತ್ತ ಸಾಗುವ ಭಾರತಕ್ಕೆ ಸತತ, ಸಮತೋಲನದ ಮತ್ತು ಬುದ್ಧಿವಂತ ಹೂಡಿಕೆಗಳು ಅವಶ್ಯಕ.

**ಸಾಮಾವೇಶ (Inclusion): ಬೆಳವಣಿಗೆಯ ಫಲ ಎಲ್ಲರಿಗೂ**

ಆರ್ಥಿಕ ಬೆಳವಣಿಗೆಯ ಅರ್ಥ ಕೇವಲ GDP ಏರಿಕೆ ಅಥವಾ ಕೈಗಾರಿಕಾ ಉತ್ಪಾದನೆಯ ಹೆಚ್ಚಳವಲ್ಲ; ಅದು ಬೆಳವಣಿಗೆಯ ಫಲವನ್ನು ಪ್ರತಿಯೊಬ್ಬ ನಾಗರಿಕನಿಗೂ ತಲುಪಿಸುವುದು. ಹೀಗಾಗಿ ಸಾಮಾವೇಶ (Inclusion) ಆರ್ಥಿಕತೆಯ ನಿಜವಾದ ಅರ್ಥವನ್ನು ನಿರ್ಧರಿಸುತ್ತದೆ. ಸಾಮಾವೇಶವಿಲ್ಲದೆ ಆರ್ಥಿಕ ಬೆಳವಣಿಗೆ ಕೆಲವು ಜನರ ಕೈಯಲ್ಲಿ ಮಾತ್ರ ಸೀಮಿತವಾಗುತ್ತದೆ ಮತ್ತು ಸಾಮಾಜಿಕ ಅಸಮಾನತೆ ಹೆಚ್ಚುತ್ತದೆ.

ಭಾರತದಲ್ಲಿ ಕಳೆದ ದಶಕದಲ್ಲಿ ಸಾಮಾವೇಶದತ್ತ ಹಲವಾರು ಕ್ರಾಂತಿಕಾರಿ ಹೆಜ್ಜೆಗಳು ಇಟ್ಟಿವೆ.

**JAMತ್ರಯ (Jan Dhan–Aadhaar–Mobile):** ಈ ಮೂರು ಯೋಜನೆಗಳ ಏಕೀಕರಣದಿಂದ ಕೋಟ್ಯಂತರ ಜನರನ್ನು ಬ್ಯಾಂಕಿಂಗ್ ವ್ಯವಸ್ಥೆಗೆ ತರಲಾಗಿದೆ. ಪ್ರಧಾನಮಂತ್ರಿ ಜನಧನ್ ಯೋಜನೆ ಮೂಲಕ 50 ಕೋಟಿಗೂ ಹೆಚ್ಚು ಬ್ಯಾಂಕ್ ಖಾತೆಗಳು ತೆರೆಯಲ್ಪಟ್ಟಿವೆ. ಇದರಿಂದ ಗ್ರಾಮೀಣ ಮತ್ತು ಬಡ ಜನರಿಗೆ ನೇರವಾಗಿ ಸರ್ಕಾರಿ ಅನುದಾನ, ಪಿಂಚಣಿ, ವಿದ್ಯಾರ್ಥಿವೇತನ, ಗ್ಯಾಸ್ ಸಬ್ಸಿಡಿ ತಲುಪುವಂತಾಗಿದೆ.

**ಉಜ್ವಲ ಯೋಜನೆ (Pradhan Mantri Ujjwala Yojana):** ಈ ಯೋಜನೆ ಲಕ್ಷಾಂತರ ಗ್ರಾಮೀಣ ಮಹಿಳೆಯರಿಗೆ ಉಚಿತ LPG ಸಿಲಿಂಡರ್ ನೀಡಿ ಆರೋಗ್ಯಕರ ಬದುಕನ್ನು ಖಚಿತಪಡಿಸಿದೆ. ಹೊಗೆಯಿಂದ ಉಂಟಾಗುವ ಆರೋಗ್ಯ ಸಮಸ್ಯೆ ಕಡಿಮೆಯಾದಷ್ಟೇ ಅಲ್ಲ, ಮಹಿಳೆಯರು ಸಮಯ ಉಳಿಸಿ ಇತರ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಲು ಸಾಧ್ಯವಾಯಿತು.

**ಆಯುಷ್ಮಾನ್ ಭಾರತ (Ayushman Bharat – PMJAY):** 50 ಕೋಟಿಗೂ ಹೆಚ್ಚು ಜನರಿಗೆ ವಾರ್ಷಿಕ ₹5 ಲಕ್ಷದವರೆಗೆ ಉಚಿತ ಚಿಕಿತ್ಸಾ ಭದ್ರತೆ ಒದಗಿಸಿದೆ. ಇದರಿಂದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳು ಆರೋಗ್ಯ ಖರ್ಚಿನಿಂದ ಬಡತನಕ್ಕೆ ತಳ್ಳಲ್ಪಡುವ ಅಪಾಯದಿಂದ ತಪ್ಪಿವೆ.

**MGNREGA (ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ):** ಗ್ರಾಮೀಣ ಜನರಿಗೆ ವರ್ಷಕ್ಕೆ ಕನಿಷ್ಠ 100 ದಿನಗಳ ಉದ್ಯೋಗಾವಕಾಶ ನೀಡುವ ಮೂಲಕ ಗ್ರಾಮೀಣ ಆದಾಯ ಮತ್ತು ಖರೀದಿ ಸಾಮರ್ಥ್ಯ ಹೆಚ್ಚಿಸಿದೆ.

ಡಿಜಿಟಲ್ ಸಾಮಾವೇಶ ಕೂಡ ಮಹತ್ವದ್ದಾಗಿದೆ. ಇಂದಿನ ದಿನಗಳಲ್ಲಿ ಗ್ರಾಮೀಣ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಶಿಕ್ಷಣ ಪಡೆಯುತ್ತಿದ್ದಾರೆ, ರೈತರು ಆಪ್ ಮೂಲಕ ಮಾರುಕಟ್ಟೆ ಬೆಲೆ ತಿಳಿಯುತ್ತಿದ್ದಾರೆ, ಮಹಿಳಾ ಸ್ವಸಹಾಯ ಗುಂಪುಗಳು ಡಿಜಿಟಲ್ ಪಾವತಿ ಮೂಲಕ ವ್ಯವಹಾರ ನಡೆಸುತ್ತಿದ್ದಾರೆ.

ಸಾಮಾಜಿಕ ಸಾಮಾವೇಶದ ದೃಷ್ಟಿಯಿಂದ, ಮಹಿಳೆಯರು, ಹಿಂದುಳಿದ ವರ್ಗಗಳು, ಅಂಗವಿಕಲರು, ಅಲ್ಪಸಂಖ್ಯಾತರು ಎಲ್ಲರಿಗೂ ಸಮಾನ ಅವಕಾಶ ದೊರಕುವುದು ಅಗತ್ಯ. ಉದಾಹರಣೆಗೆ ಸ್ತ್ರೀ ಶಕ್ತಿ ಯೋಜನೆಗಳು ಮಹಿಳಾ ಉದ್ಯಮಶೀಲತೆಯನ್ನು ಉತ್ತೇಜಿಸುತ್ತಿವೆ.

ಸಾಮಾವೇಶ ವಿಲ್ಲದೆ ಆರ್ಥಿಕ ಬೆಳವಣಿಗೆ ಅಪೂರ್ಣ ಹೀಗಾಗಿ, ಭಾರತದ $5 ಟ್ರಿಲಿಯನ್ ಆರ್ಥಿಕತೆಯ ಕನಸು ನಿಜವಾಗಲು ಪ್ರತಿಯೊಬ್ಬ ನಾಗರಿಕನಿಗೂ ಬೆಳವಣಿಗೆಯ ಫಲ ತಲುಪಿಸುವುದು ಅವಶ್ಯಕ. ಸಾಮಾವೇಶವೇ ಶಾಶ್ವತ ಮತ್ತು ಸಮಾನ ಆರ್ಥಿಕತೆಯ ನೆಲೆಯಾಗಿದೆ.

### 3-I ಗಳ ಪರಸ್ಪರ ಸಂಬಂಧ

ಭಾರತದ $5 ಟ್ರಿಲಿಯನ್ ಆರ್ಥಿಕತೆಯ ಕನಸು ಸಾಧಿಸಲು ನವೀನತೆ (Innovation), ಹೂಡಿಕೆ (Investment) ಮತ್ತು ಸಾಮಾವೇಶ (Inclusion)– ಈ ಮೂರು ಅಂಶಗಳನ್ನು ಪ್ರತ್ಯೇಕವಾಗಿ ನೋಡಲುಸಾಧ್ಯವಿಲ್ಲ. ಅವು ಪರಸ್ಪರ ಸಂಬಂಧಿತವಾಗಿದ್ದು, ಒಟ್ಟಿಗೆ ಕಾರ್ಯನಿರ್ವಹಿಸಿದಾಗ ಮಾತ್ರ ಸಮಗ್ರ ಬೆಳವಣಿಗೆ ಸಾಧ್ಯವಾಗುತ್ತದೆ.

ಉದಾಹರಣೆಗೆ, UPI ಡಿಜಿಟಲ್ ಪಾವತಿ ವ್ಯವಸ್ಥೆ ಒಂದು ನವೀನತೆ. ಆದರೆ ಅದು ಯಶಸ್ವಿಯಾಗಲು ಬ್ಯಾಂಕುಗಳು, ಫಿಂಟೆಕ್ ಕಂಪನಿಗಳು ಮತ್ತು ಸರ್ಕಾರ ದೊಡ್ಡ ಮಟ್ಟದ ಹೂಡಿಕೆ ಮಾಡಬೇಕಾಯಿತು. ಮೂಲಸೌಕರ್ಯ (ಸರ್ವರ್‌ಗಳು, ಇಂಟರ್ನೆಟ್ ಸಂಪರ್ಕ, ಅಪ್ಲಿಕೇಶನ್ ಅಭಿವೃದ್ಧಿ) ಇಲ್ಲದೆ ಈ ನವೀನತೆ ಕಾರ್ಯರೂಪಕ್ಕೆ ಬಾರದಿತ್ತು. ಹೂಡಿಕೆಯೊಂದಿಗೆ ಈ ವ್ಯವಸ್ಥೆ ಗ್ರಾಮೀಣ ಪ್ರದೇಶಕ್ಕೂ ತಲುಪಿದಾಗ ಸಾಮಾವೇಶ ಸಾಧ್ಯವಾಯಿತು. ಇಂದಿಗೆ ಚಹಾ ಅಂಗಡಿಯಿಂದ ಹಿಡಿದು ರೈತ ಮಾರುಕಟ್ಟೆಯವರೆಗೂ ಕಿಖ ಕೋಡ್ ಮೂಲಕ ಪಾವತಿ ಸ್ವೀಕ–ರಿಸಲಾಗುತ್ತಿದೆ. ಇದು 3-I ಗಳ ಪರಸ್ಪರ ಕ್ರಿಯೆಯ ಸುಂದರ ಉದಾಹರಣೆ.

ಮತ್ತೊಂದು ಉದಾಹರಣೆ ಹಸಿರು ಹೈಡ್ರೋಜನ್ ತಂತ್ರಜ್ಞಾನ. ಇದು ನವೀನತೆ, ಆದರೆ ಅದನ್ನು ಅಳವಡಿಸಲು ಸರ್ಕಾರ ಹಾಗೂ ಖಾಸಗಿ ವಲಯದ ಭಾರೀ ಹೂಡಿಕೆ ಅಗತ್ಯ. ಹೂಡಿಕೆಯ ಮೂಲಕ ಉತ್ಪಾದನಾ ಘಟಕಗಳು ನಿರ್ಮಾಣ ವಾಗುತ್ತವೆ, ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ. ಉತ್ಪಾದನೆ ಪ್ರಮಾಣ ಹೆಚ್ಚಾದಂತೆ ಶುದ್ಧ ಇಂಧನವು ಕಡಿಮೆ ದರದಲ್ಲಿ ಲಭ್ಯವಾಗುತ್ತದೆ, ಇದರಿಂದ ಸಾಮಾನ್ಯ ಜನರು ಕೂಡ ಅದನ್ನು ಬಳಸುವಂತೆ ಮಾಡಬಹುದು – ಅಂದರ ಸಾಮಾವೇಶ ಸಾಧ್ಯವಾಗುತ್ತದೆ.

ಸಾಮಾವೇಶವಿಲ್ಲದ ನವೀನತೆ ಕೇವಲ ಕೆಲವರ ಕೈಯಲ್ಲಿ ಸೀಮಿತವಾಗುತ್ತದೆ. ಉದಾಹರಣೆಗೆ, ಡಿಜಿಟಲ್ ತಂತ್ರಜ್ಞಾನ ಕೇವಲ ನಗರಗಳಲ್ಲೇ ಲಭ್ಯವಿದ್ದರೆ, ಗ್ರಾಮೀಣ ಜನರು ಅದರಿಂದ ವಂಚಿತರಾಗುತ್ತಿದ್ದರು. ಅದೇ ರೀತಿ, ಹೂಡಿಕೆಯಿಲ್ಲದ ನವೀನತೆ ಕೇವಲ ಆಲೋಚನೆ ಮಟ್ಟದಲ್ಲೇ ಉಳಿಯುತ್ತದೆ. ಹಾಗೆಯೇ, ನವೀನತೆ ಮತ್ತು ಹೂಡಿಕೆ ಇಲ್ಲದ ಸಾಮಾವೇಶ ಕೇವಲ ಸಬ್ಸಿಡಿ ಆಧಾರಿತ ನೀತಿ ಆಗಿ ಶಾಶ್ವತವಲ್ಲ.

ಹೀಗಾಗಿ, 3-Iಗಳು ಒಂದಕ್ಕೊಂದು ಪೂರಕ.

ನವೀನತೆ ಹೊಸ ದಾರಿಯನ್ನು ತೆರೆದುಕೊಡುತ್ತದೆ,

ಹೂಡಿಕೆ ಅದಕ್ಕೆ ಇಂಧನ ತುಂಬುತ್ತದೆ,

ಸಾಮಾವೇಶ ಬೆಳವಣಿಗೆಯ ಫಲವನ್ನು ಪ್ರತಿಯೊಬ್ಬರಿಗೂ ತಲುಪಿಸುತ್ತದೆ.

ಇವೆಲ್ಲವೂ ಒಟ್ಟಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಭಾರತವು ಕೇವಲ ಆರ್ಥಿಕ ಶಕ್ತಿಯಲ್ಲ, ಸಮಾವೇಶ ಮತ್ತು ಶಾಶ್ವತ ಅಭಿವೃದ್ಧಿಯ ಮಾದರಿ ರಾಷ್ಟ್ರವಾಗಿ ಹೊರಹೊಮ್ಮುತ್ತದೆ.

### ಕಾರ್ಯತಂತ್ರ ಮತ್ತು ಸವಾಲುಗಳು

ಭಾರತವು $5 ಟ್ರಿಲಿಯನ್ ಆರ್ಥಿಕತೆಯ ಗುರಿಯನ್ನು ಸಾಧಿಸಲು ಹಲವು ಕಾರ್ಯತಂತ್ರಗಳನ್ನು ರೂಪಿಸಿದೆ. ಈ ಕಾರ್ಯತಂತ್ರಗಳು ನವೀನತೆ, ಹೂಡಿಕೆ ಮತ್ತು ಸಾಮಾವೇಶದ ಸಮತೋಲನ ಸಾಧಿಸುವ ದಿಸೆಯಲ್ಲಿ ಮುಂದುವರಿಯುತ್ತಿವೆ.

### ಕಾರ್ಯತಂತ್ರ ಮತ್ತು ಸವಾಲುಗಳು

ಭಾರತವು $5 ಟ್ರಿಲಿಯನ್ ಆರ್ಥಿಕತೆಯ ಗುರಿಯನ್ನು ಸಾಧಿಸಲು ಹಲವಾರು ಕಾರ್ಯತಂತ್ರಗಳನ್ನು ರೂಪಿಸಿ ಅಳವಡಿಸಿಕೊಂಡಿದೆ. ಯುವಕ–ರಿಗೆ ಕೌಶಲ್ಯ ಕಲಿಸುವ ಉದ್ದೇಶದಿಂದ Skill India Mission ಹಾಗೂ Pradhan Mantri Kaushal Vikas Yojana (PMKVY) ಯೋಜನೆಗಳು ಜಾರಿಯಲ್ಲಿದ್ದು, ಇವು ಲಕ್ಷಾಂತರ ಯುವಕರಿಗೆ ಉದ್ಯೋಗೋಚಿತ ತರಬೇತಿಯನ್ನು ನೀಡುತ್ತಿವೆ. ಇದರಿಂದ ನವೀನ ತಂತ್ರಜ್ಞಾನಗಳನ್ನು ಅಳವಡಿಸಲು ಅಗತ್ಯವಿರುವ ಮಾನವ ಸಂಪನ್ಮೂಲ ಸಿದ್ಧವಾಗುತ್ತಿದೆ. ಇದೇ ರೀತಿ, ಡಿಜಿಟಲ್ ಇಂಡಿಯಾ ಮಿಷನ್ ದೇಶದ ಪ್ರತಿಯೊಂದು ಮನೆಗೂ ಇಂಟರ್ನೆಟ್ ಸೇವೆ ತಲುಪಿಸುವ ಗುರಿ ಹೊಂದಿದ್ದು, e-Governance ಮೂಲಕ ನಾಗರಿಕರಿಗೆ ಸರ್ಕಾರಿ ಸೇವೆಗಳು ಸುಲಭವಾಗಿ ಲಭ್ಯವಾಗುತ್ತಿವೆ. ಸ್ಟಾರ್ಟ್‌ಅಪ್ ಇಂಡಿಯಾ ಮತ್ತು ಅಟಲ್ ಇನೋವೇಶನ್ ಮಿಷನ್ ಯೋಜನೆಗಳು ಹೊಸ ಆಲೋಚನೆಗಳು ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸುತ್ತಿವೆ.

ಮೇಕ್ ಇನ್ ಇಂಡಿಯಾ ಮತ್ತು PLI ಯೋಜನೆಗಳು ಉತ್ಪಾದನಾ

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 48
Licensed to post without Prepayment License No. PMG BG/WPP-384/2023-2025.

ವಲಯವನ್ನು ಬಲಪಡಿಸಿ ವಿದೇಶಿ ಹೂಡಿಕೆಯನ್ನು ಆಕರ್ಷಿಸುತ್ತಿವೆ. ಇದರ ಪರಿಣಾಮವಾಗಿ ಸ್ಥಳೀಯ ಉತ್ಪಾದನೆ ಹೆಚ್ಚಿ ಉದ್ಯೋಗಾವಕಾಶಗಳು ಹೆಚ್ಚುತ್ತಿವೆ. ಮೂಲಸೌಕರ್ಯ ಕ್ಷೇತ್ರದಲ್ಲಿ ಗತಿಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲಾನ್, ಭಾರತಮಾಲಾ, ಸಾಗರಮಾಲಾ ಹಾಗೂ ಸ್ಮಾರ್ಟ್ ಸಿಟೀಸ್ ಮಿಷನ್ ಸಾರಿಗೆ, ಲಾಜಿಸ್ಟಿಕ್ಸ್ ಮತ್ತು ನಗರಾಭಿವೃದ್ಧಿಯನ್ನು ಜಾಗತಿಕ ಮಟ್ಟದಲ್ಲಿ ಬಲಪಡಿಸುತ್ತಿವೆ. ಪರಿಸರ ಸಂರಕ್ಷಣೆಯ ದೃಷ್ಟಿಯಿಂದ, ಭಾರತವು ಹಸಿರು ಹೈಡ್ರೋಜನ್ ಮಿಷನ್, ಸೌರ ಶಕ್ತಿ ಹಾಗೂ ಗಾಳಿ ಶಕ್ತಿಗೆ ಹೂಡಿಕೆ ಮಾಡಿ ಶಾಶ್ವತ ಇಂಧನ ಬಳಕೆಯತ್ತ ಹೆಜ್ಜೆ ಇಡುತ್ತಿದೆ.

ಆದಾಗ್ಯೂ, ಈ ದಾರಿಗೆ ಹಲವು ಸವಾಲುಗಳೂ ಎದುರಾಗುತ್ತಿವೆ. ಜಾಗತಿಕ ಮಾರುಕಟ್ಟೆಯ ಅಸ್ಥಿರತೆ, ತೈಲ ಬೆಲೆ ಏರಿಕೆ ಮತ್ತು ಜಾಗತಿಕ ರಾಜಕೀಯ ಉದ್ವಿಗ್ನತೆಗಳು ಭಾರತ ಆರ್ಥಿಕತೆಯ ಮೇಲೆ ಒತ್ತಡ ತರುತ್ತವೆ. ಹವಾಮಾನ ಬದಲಾವಣೆಯಿಂದಾಗಿ ಬಿಸಿಗಾಳಿ, ಪ್ರವಾಹ, ಬರ ಕೃಷಿ ಉತ್ಪಾದನೆಯನ್ನು ಕುಗ್ಗಿಸುತ್ತವೆ, ಇದರಿಂದ ಆಹಾರ ಭದ್ರತೆಗೂ ಧಕ್ಕೆಯಾಗುತ್ತದೆ. ಇನ್ನೊಂದೆಡೆ, ಶಿಕ್ಷಣ ಪಡೆದರೂ ಉದ್ಯೋಗವಿಲ್ಲದೆ ಉಳಿಯುತ್ತಿರುವ ಯುವಕರು ಮತ್ತು ಕೈಗಾರಿಕೆಗಳಿಗೆ ಬೇಕಾದ ಕೌಶಲ್ಯಗಳ ಕೊರತೆ ನಡುವಣ ಅಸಮತೋಲನವು ಗಂಭೀರ ಸಮಸ್ಯೆಯಾಗಿದೆ. ಸಾಮಾಜಿಕ ಅಸಮಾನತೆ ಕೂಡ ಇನ್ನೂ ಸಂಪೂರ್ಣವಾಗಿ ನಿವಾರಣೆಯಾಗಿಲ್ಲ; ನಗರ ಗ್ರಾಮ, ಶ್ರೀಮಂತ ಬಡ ಹಾಗೂ ಪುರುಷ ಮಹಿಳೆ ಅಂತರ ಬೆಳವಣಿಗೆಯ ಫಲ ಎಲ್ಲರಿಗೂ ಸಮಾನವಾಗಿ ತಲುಪಲು ಅಡ್ಡಿಯಾಗುತ್ತಿದೆ. ಜೊತೆಗೆ, ಅನುಮೋದನೆಪ್ರಕ್ರಿಯೆಯದೀರ್ಘಾವಧಿ, ಭೂಮಿಸ್ವಾಧೀನದ ತೊಂದರೆ ಹಾಗೂ ನೀತಿ ಸ್ಪಷ್ಟತೆಯ ಕೊರತೆ ಹೂಡಿಕೆ ಆಕರ್ಷಣೆಗೆ ಅಡ್ಡಿಯಾಗುತ್ತಿವೆ.

ಹೀಗಾಗಿ, ಕಾರ್ಯತಂತ್ರಗಳು ಸರಿಯಾದ ದಾರಿಯಲ್ಲಿ ಸಾಗುತ್ತಿದ್ದರೂ, ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಲು ಸರ್ಕಾರ, ಖಾಸಗಿ ವಲಯ ಮತ್ತು ನಾಗರಿಕರ ಸಹಭಾಗಿತ್ವ ಅವಶ್ಯಕ. ಪಬ್ಲಿಕ್ ಪ್ರೈವೇಟ್ ಪಾಲುದಾರಿಕೆ, ನೀತಿ ಸ್ಪಷ್ಟತೆ ಮತ್ತು ಶಾಶ್ವತ ಅಭಿವೃದ್ಧಿಯ ದೃಷ್ಟಿಕೋಣದ ಮೂಲಕ ಮಾತ್ರ ಭಾರತವು ತನ್ನ $5 ಟ್ರಿಲಿಯನ್ ಕನಸನ್ನು ನಿಜಗೊಳಿಸಬಲ್ಲದು.

## ಉಪಸಂಹಾರ (Conclusion)

ಭಾರತದ $5 ಟ್ರಿಲಿಯನ್ ಆರ್ಥಿಕತೆಯ ಕನಸು ಕೇವಲ ಅಂಕಿ ಅಂಶಗಳ ಗುರಿಯಲ್ಲ, ಅದು ಸಮಗ್ರ ರಾಷ್ಟ್ರ ನಿರ್ಮಾಣದ ದೃಷ್ಟಿಕೋಣ. ಈ ಗುರಿಯನ್ನು ಸಾಧಿಸಲು ನವೀನತೆ (Innovation), ಹೂಡಿಕೆ (Investment) ಮತ್ತು ಸಾಮಾವೇಶ (Inclusion) ಎಂಬ 3-I ಎಂಜಿನ್ ಸಮತೋಲನದಿಂದ ಕಾರ್ಯನಿರ್ವಹಿಸಬೇಕು. ನವೀನತೆ ಹೊಸ ಆಲೋಚನೆಗಳು ಮತ್ತು ತಂತ್ರಜ್ಞಾನಗಳನ್ನು ಹುಟ್ಟುಹಾಕಿ ಅವಕಾಶಗಳನ್ನು ವಿಸ್ತರಿಸುತ್ತದೆ; ಹೂಡಿಕೆ ಆ ನವೀನತೆಗಳನ್ನು ಕಾರ್ಯರೂಪಕ್ಕೆ ತಂದು ಆರ್ಥಿಕ ಬೆಳವಣಿಗೆಗೆ ಇಂಧನ ತುಂಬುತ್ತದೆ; ಸಾಮಾವೇಶ ಬೆಳವಣಿಗೆಯ ಫಲವನ್ನು ಪ್ರತಿಯೊಬ್ಬ ನಾಗರಿಕನಿಗೂ ತಲುಪಿಸುವುದನ್ನು ಖಚಿತಪಡಿಸುತ್ತದೆ.

ಭಾರತ ಈಗಾಗಲೇ ಡಿಜಿಟಲ್ ಇಂಡಿಯಾ, ಮೇಕ್ ಇನ್ ಇಂಡಿಯಾ, ಸ್ಟಾರ್ಟ್‌ಅಪ್ ಇಂಡಿಯಾ, ಉಜ್ವಲ, ಆಯುಷ್ಮಾನ್ ಭಾರತ, ಗತಿಶಕ್ತಿ, ಹಸಿರು ಹೈಡ್ರೋಜನ್ ಮಿಷನ್ ಮುಂತಾದ ಯೋಜನೆಗಳ ಮೂಲಕ ಈ ಮೂರು ಅಂಶಗಳನ್ನು ಬಲಪಡಿಸುವ ದಾರಿಯಲ್ಲಿ ಹೆಜ್ಜೆ ಇಟ್ಟಿದೆ. ಈ ಯೋಜನೆಗಳು ಒಂದೆಡೆ ಆರ್ಥಿಕ ಉತ್ಪಾದನೆ ಹೆಚ್ಚಿಸುವುದರ ಜೊತೆಗೆ, ಮತ್ತೊಂದೆಡೆ ಸಮಾಜಮುಖಿ ಬೆಳವಣಿಗೆಯತ್ತ ದಾರಿ ತೋರಿಸುತ್ತಿವೆ.

ಆದರೆ, ಹವಾಮಾನ ಬದಲಾವಣೆ, ಜಾಗತಿಕ ಅಸ್ಥಿರತೆ, ಕೌಶಲ್ಯ–ಉದ್ಯೋಗ ಅಸಮತೋಲನ, ಹಾಗೂ ಸಾಮಾಜಿಕ ಅಸಮಾನತೆ ಮುಂತಾದಸವಾಲುಗಳನ್ನು ಸಮರ್ಥವಾಗಿ ಎದುರಿಸಬೇಕಿದೆ. ಸರ್ಕಾರ, ಖಾಸಗಿ ವಲಯ ಮತ್ತು ನಾಗರಿಕರ ಸಹಕಾರದೊಂದಿಗೆ ಪಬ್ಲಿಕ್ ಪ್ರೈವೇಟ್ ಪಾಲುದಾರಿಕೆ, ನೀತಿ ಸ್ಪಷ್ಟತೆ, ಮತ್ತು ಶಾಶ್ವತ ಅಭಿವೃದ್ಧಿ ತತ್ವಗಳು ಗುರಿ ಸಾಧನೆಯಲ್ಲಿ ಕೀಲಕ ಪಾತ್ರವಹಿಸುತ್ತವೆ.

ಹೀಗಾಗಿ, ಭಾರತವು $5 ಟ್ರಿಲಿಯನ್ ಆರ್ಥಿಕತೆಯನ್ನು ಸಾಧಿಸುವುದಷ್ಟೇ ಅಲ್ಲ, ಸಮಾವೇಶಿ, ಶಾಶ್ವತ ಮತ್ತು ಜಾಗತಿಕ ಮಟ್ಟದಲ್ಲಿ ಸ್ಪರ್ಧಾತ್ಮಕ ರಾಷ್ಟ್ರವಾಗಿ ಹೊರಹೊಮ್ಮುವುದು ಮುಖ್ಯ. 3-I ಎಂಜಿನ್ ಸಮನ್ವಯದಿಂದ ಕೆಲಸ ಮಾಡಿದಾಗ ಮಾತ್ರ ಭಾರತವು ತನ್ನ ಆರ್ಥಿಕ ಕನಸನ್ನು ನಿಜಗೊಳಿಸಿ, ವಿಶ್ವದ ಸಮಗ್ರ ಅಭಿವೃದ್ಧಿಗೆ ಮಾದರಿ ರಾಷ್ಟ್ರವಾಗಲು ಸಾಧ್ಯ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ : 080–23378375–80, 23474408, 23573291

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080–23449933/34

ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055

ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ: 080–23525546.

ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299

ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.

ಕಲಬುರಗಿ ಪಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003